ಸಂವಾದ

ಸಂವಾದ.

ಸಾಹಿತ್ಯಿಕ, ಸಾಂಸ್ಕೃತಿಕ ಸಂಕಲನ

- ನಮ್ಮ ಸಾಹಿತ್ಯ, ಸಾಂಸ್ಕೃತಿಕ ಬದುಕಿನ ಸ್ಪಂದನಕ್ಕೆ
- ವಸ್ತುನಿಷ್ಟ ಸತ್ಯದ ಆವಿಷ್ಕಾರಕ್ಕೆ

ಸಂಪಾದಕರು :

ಡಿ. ಎಸ್. ನಾಗಭೂಷಣ

ರಾಘವೇಂದ್ರ ಪಾಟೀಲ

ಸ. ಉಷಾ

ಮುಖ ಪುಟದ ಚಿತ್ರ: ಶಂಕರ ಪಾಟೀಲ

- ಆಜೀವ ಸದಸ್ಯತ್ವ ರೂ. **300-00** (ವ್ಯಕ್ತಿಗಳಿಗೆ)
  ರೂ. **500-00** (ಸಂಸ್ಥೆ/ಗ್ರಂಥಾಲಯಗಳಿ
- ವಾರ್ಷಿಕ ಚಂದಾ ರೂ. **30-00** (ವ್ಯಕ್ತಿಗಳಿಗೆ)
  ರೂ. **50-00** (ಸಂಸ್ಥೆ/ಗ್ರಂಥಾಲಯಗಳಿಗೆ)

(ಅಂಚೆ ಮೂಲಕ ಚಂದಾ ಕಳುಹಿಸುವವರು ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಆಜೀವ ಚಂದಾವನ್ನು ಒಂದು ವರ್ಷದಲ್ಲಿ ತಲಾ ನೂರು ರೂಪಾಯಿಗಳ ಮೂರು/ಐದು ಕಂತುಗಳಲ್ಲಿ ಕೊಡಬಹುದಾಗಿದೆ)

ಮುದ್ರಣ, ಪ್ರಕಾಶನ ಹಾಗೂ ಸಂಪಾದನೆ:

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ಅಂಚೆ.577 531, ಚಿತ್ರದುರ್ಗ ಜಿಲ್ಲೆ
—ಇವರಿಗಾಗಿ.

ಮುದ್ರಕರು:
ನ್ಯಾಷನಲ್ ಪ್ರೆಸ್, ಹಾಸನ.

ಸೂಚನೆ: ಈ ಸಂಚಿಕೆಯೊಂದಿಗೆ ನಮ್ಮ ಅನೇಕ ಓದುಗರ ಚಂದಾ ಮುಗಿದಿದೆ. ದಯವಿಟ್ಟು ಕೂಡಲೇ ಚಂದಾ ಕಳುಹಿಸಿ ಸಹಕರಿಸಿ.

—ಸಂ.

ತಿದ್ದುಪಡಿ: ಪುಟ ಸಂಖ್ಯೆ ೪೭ರ ಕೊನೆಯ ಸಾಲಿನಲ್ಲಿ ಬರುವ **ಡಾ॥ ರಾವ್** ಎಂಬುದನ್ನು **ಡಾ॥ ರಾವ್** ಎಂಬುದಾಗಿ ಓದಿಕೊಳ್ಳಬೇಕಾಗಿ ವಿನಂತಿ.

ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೪

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ – ೫೭೭ ೫೩೧, ಚಿತ್ರದುರ್ಗ ಜಿಲ್ಲೆ

ಈ ಸಂಚಿಕೆಯ ಲೇಖಕರು:

- **ಡಾ|| ಜಿ. ಎಸ್. ಶಿವರುದ್ರಪ್ಪ,**
  'ಚೈತ್ರ', 867, 18ನೇ ಮುಖ್ಯ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560 070
- **ದೇವನೂರ ಮಹಾದೇವ,**
  53, 5ನೇ ಕ್ರಾಸ್, ನವಿಲು ರಸ್ತೆ, ಕುವೆಂಪುನಗರ, ಮೈಸೂರು–570 023
- **ಕಿಕ್ಕೇರಿ ನಾರಾಯಣ,**
  ಭಾರತೀಯ ಭಾಷಾ ಸಂಸ್ಥಾನ, ಮಾನಸ ಗಂಗೋತ್ರಿ, ಮೈಸೂರು–570 006
- **ರಾಘವೇಂದ್ರ ಪಾಟೀಲ,**
  ಜೀವಶಾಸ್ತ್ರ ಅಧ್ಯಾಪಕರು, ಪದವಿಪೂರ್ವ ಕಾಲೇಜು, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ
- **ಡಿ. ಎಸ್. ನಾಗಭೂಷಣ,**
  ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ ಎಫ್. ಎಂ. ಕೇಂದ್ರ, ಹಾಸನ–573 201
- **ಪ್ರೇಮ್‌ಚಂದ್,**
  ಖ್ಯಾತ ಹಿಂದಿ ಕಥೆ–ಕಾದಂಬರಿಕಾರ (ದಿವಂಗತರು)
- **ಚಂದ್ರಶೇಖರ ತಾಳ್ಯ,**
  ತರ್ಕಶಾಸ್ತ್ರ ಅಧ್ಯಾಪಕರು, ಕೆ.ಎನ್. ಪದವಿಪೂರ್ವ ಕಾಲೇಜು, ಹೊಳಲ್ಕೆರೆ ಚಿತ್ರದುರ್ಗ ಜಿಲ್ಲೆ
- **ಗವಿಸಿದ್ಧ ಎನ್. ಬಳ್ಳಾರಿ,**
  ಜವಾಹರ ಬೀದಿ, ಕೊಪ್ಪಳ–583 231, ಬಳ್ಳಾರಿ ಜಿಲ್ಲೆ
- **ಕೆ. ಪಿ. ಮೃತ್ಯುಂಜಯ,**
  ಕಲ್ಕೆರೆ, ಮಾಯಸಂದ್ರ ಮಾರ್ಗ–572 221, ತುಮಕೂರು ಜಿಲ್ಲೆ
- **ಎಂ. ಎಸ್. ವೇದಾ,**
  ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ ಮೈಸೂರು–570 006
- **ಆನಂದಕಂದ** (ದಿವಂಗತ ಬೆಟಗೇರಿ ಕೃಷ್ಣಶರ್ಮರು)
- **ಡಾ|| ಪುರುಷೋತ್ತಮ ಬಿಳಿಮಲೆ,**
  ಕನ್ನಡ ಅಧ್ಯಾಪಕರು. ಮಂಗಳ ಗಂಗೋತ್ರಿ, ಕೊಣಾಜೆ (ದ.ಕ.)
- **ಡಾ|| ಬಿ. ಎನ್. ಸುಮಿತ್ರಾಬಾಯಿ,**
  73/15, 5ನೇ ಕ್ರಾಸ್, ಹನುಮಂತನಗರ, ಬೆಂಗಳೂರು–560 019
- **ಎಸ್. ಆರ್. ವಿಜಯಶಂಕರ,**
  ಸಾರ್ವಜನಿಕ ಸಂಪರ್ಕಾಧಿಕಾರಿ, ಹೆಚ್.ಎಂ.ಟಿ.ಲಿ., 36. ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು
- **ಎ. ಆರ್. ನಾಗಭೂಷಣ,**
  1235, ಕೃಷ್ಣಮೂರ್ತಿಪುರಂ, ಮೈಸೂರು–570 004

ಪ್ರಸ್ತುತ ಸಾಹಿತ್ಯ ಎದುರಿಸುತ್ತಿರುವ ಬಿಕ್ಕಟ್ಟುಗಳು*

⊕ ಡಾ|| ಜಿ. ಎಸ್. ಶಿವರುದ್ರಪ್ಪ

ನಾನು ಹುಟ್ಟಿದ್ದು ಕನ್ನಡನಾಡಿನ ಮಲೆನಾಡಿನ ಬೆಟ್ಟ–ಕಾಡು–ಹೊಳೆಗಳ ಪರಿಸರದಲ್ಲಿ; ಆದರೆ ಬೆಳೆದದ್ದು ಮುಖ್ಯವಾಗಿ ಚಿತ್ರದುರ್ಗ ಜಿಲ್ಲೆಯ ಬಯಲು ಹಾಗೂ ಬಂಡೆ-ಬೆಟ್ಟಗಳ ನಡುವೆ. ಹೀಗಾಗಿ ನನ್ನಲ್ಲಿ ಆ ಮಲೆನಾಡಿನ ರಮ್ಯ ನಿಸರ್ಗಾನುಭವದ ಜತೆಗೆ, ಚಿತ್ರದುರ್ಗದ ಬಂಡೆ-ಬೆಟ್ಟಗಳ ದಿಟ್ಟತನವೂ ಸೇರಿಕೊಂಡಿದೆ. ಈ ಕಾರಣದಿಂದ ಇದೀಗ ಇಲ್ಲಿ ಸಮಾವೇಶಗೊಂಡಿರುವ ಚಿತ್ರದುರ್ಗ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಈ ಗೌರವವನ್ನು ಅತ್ಯಂತ ಪ್ರೀತಿ ಹಾಗೂ ಕೃತಜ್ಞತೆಗಳಿಂದ ನಾನು ಒಪ್ಪಿಕೊಂಡಿದ್ದೇನೆ.

ನಾನು ನನ್ನ ಈ ಅಧ್ಯಕ್ಷ ಭಾಷಣದಲ್ಲಿ ಇಲ್ಲಿ ನಿಯೋಜಿತವಾಗಿರುವ ಗೋಷ್ಠಿಗಳಲ್ಲಿ ಚರ್ಚೆಗೆ ಗುರಿಯಾಗಲಿರುವ ವಿಷಯಗಳನ್ನು ಪ್ರಸ್ತಾಪಿಸಲು ಹೋಗುವುದಿಲ್ಲ. ಯಾಕೆಂದರೆ ಆ ವಿಷಯಗಳನ್ನು ಕುರಿತು ತಮ್ಮೆದುರಿಗೆ ಮಂಡಿಸುವ ಪರಿಣತರಿದ್ದಾರೆ. ನಿಮ್ಮಂತೆಯೇ ನಾನೂ ಆ ಚರ್ಚೆಗಳಿಗೆ ಶ್ರೋತೃವಾಗಲು ಆಸಕ್ತನಾಗಿದ್ದೇನೆ. ಅದರ ಬದಲು ನಮ್ಮ ಸಾಮಾಜಿಕ ಜೀವನ ಹಾಗೂ ಸಾಹಿತ್ಯ ನಿರ್ಮಿತಿಗಳು ಎದುರಿಸುತ್ತಿರುವ ಕೆಲವು ಬಿಕ್ಕಟ್ಟುಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ದಯಮಾಡಿ ಕೇಳಬೇಕು.

ಇರುವ ಬದುಕನ್ನು ಇನ್ನಷ್ಟು ಸಹನೀಯವನ್ನಾಗಿ, ಸುಖಮಯವನ್ನಾಗಿ, ಸುಂದರವನ್ನಾಗಿ, ವೈಚಾರಿಕವನ್ನಾಗಿ ಮಾಡುವುದು ಹೇಗೆ ಎನ್ನುವುದೇ ಎಲ್ಲ ಕವಿ–ಕಲಾವಿದರ, ಕ್ರಾಂತಿಕಾರಿಗಳ ಹಾಗೂ ವಿಜ್ಞಾನಿಗಳ ಹಂಬಲವಾಗಿದೆ. ಆದರೆ ನಮ್ಮ

---

* ಸಿರಿಗೆರೆಯಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ, ಚಿತ್ರದುರ್ಗ ಜಿಲ್ಲಾ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಸಂಪಾದಿತ ರೂಪ.

ಬದುಕು ಅಸಹನೀಯವಾಗಿ, ಅಹಿತಕರವಾಗಿ, ಕುರೂಪವಾಗಿ ಹಾಗೂ ಅವೈಚಾರಿಕವಾಗಿ ರೂಪುಗೊಳ್ಳುತ್ತಿರುವಂತೆ ತೋರುತ್ತಿದೆಯಲ್ಲ, ಎಂಬುದೇ ನಮ್ಮೆಲ್ಲರ ಆತಂಕಕ್ಕೆ ಕಾರಣವಾಗಿದೆ. ಈ ಆತಂಕದ ಸಮಯದಲ್ಲಿ ನಮ್ಮನ್ನು ನಾವು ಕುರಿತು, ಈ ವ್ಯವಸ್ಥೆ ಯಾಕೆ ಹೀಗಿದೆ ಎಂಬುದನ್ನು ಕುರಿತು, ಅದು ಹಾಗಿರುವುದಕ್ಕೆ ನಾವೂ ಕಾರಣವಲ್ಲವೆ ಎಂಬುದನ್ನು ಕುರಿತು, ವಿಚಾರ ಮಾಡಬೇಕಾಗಿದೆ ಯಾಕೆಂದರೆ ಈ ವಾಸ್ತವದ ಒಂದು ಭಾಗವಾಗಿರುವ ನಾವು ಬದಲಾಗದೆ, ಸುತ್ತಣ ಜಗತ್ತು ಬದಲಾಗುವುದಾದರೂ ಹೇಗೆ ? ನಾವು ಬದಲಾಗಬೇಕೆಂಬ ಎಚ್ಚರವಿಲ್ಲದೆ ಅಥವಾ ಇಷ್ಟವಿಲ್ಲದೆ, ಈ ಜಗತ್ತು ಬದಲಾಗಬೇಕೆಂಬ ಸುಧಾರಕತನದ ಸೋಗನ್ನು ತಾಳುವುದು ಅತ್ಯಂತ ಅನೈತಿಕವಾದ ನಿಲುವಾಗುತ್ತದೆ.

ಟಾಯಿಂಬೀ ಎಂಬ ಪ್ರಸಿದ್ಧ ಇತಿಹಾಸಜ್ಞ ಹೇಳುತ್ತಾನೆ, ಒಂದು ದೇಶದ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಕಾಲವೆಂದರೆ ಆತಂಕಗಳ, ಸಂದಿಗ್ಧತೆಗಳ, ಸಂಘರ್ಷ ಗಳ ಕಾಲವೇ ಎಂದು. ಯಾಕೆಂದರೆ ಇಂಥ ಆತಂಕಗಳ ತಲ್ಲಣಗಳ ಕಾಲದಲ್ಲಿ ವ್ಯಕ್ತಿಗಳು ತಮ್ಮ ಪರಿಸರವನ್ನು ಕುರಿತು, ತಮ್ಮನ್ನು ಕುರಿತು, ಒಂದು ಬಗೆಯ ಮರುಚಿಂತನೆಗೆ ತೊಡಗುತ್ತಾರೆ. ನಾವು ಇದೀಗ ಅಂತಹ ಆತಂಕ ಹಾಗೂ ತಲ್ಲಣಗಳ ಸಂದರ್ಭದಲ್ಲಿ ಇದ್ದೇವೆ.

ಇನ್ನೇನು ಇಪ್ಪತ್ತನೆಯ ಶತಮಾನ ಕೊನೆಗೊಳ್ಳುತ್ತಿದೆ. ಇಪ್ಪತ್ತೊಂದನೆಯ ಶತಮಾನಕ್ಕೆ ನಾವು ಹೋಗುತ್ತಿದ್ದೇವೆ. ನಿಜವಾಗಿ ನೋಡಿದರೆ, ಇಪ್ಪತ್ತನೆಯ ಶತಮಾನ ಮನುಕುಲದ ಇತಿಹಾಸದಲ್ಲಿ ಒಂದು ಅದ್ಭುತವಾದ ಕಾಲ. ಹಿಂದಿನ ಶತಮಾನಗಳಿಗೆ ಹೋಲಿಸಿದರೆ. ಇಪ್ಪತ್ತನೆಯ ಶತಮಾನ ಅನೇಕ ಮಹತ್ವದ ಪಲ್ಲಟಗಳ, ಅನ್ವೇಷಣೆಗಳ ಹಾಗೂ ನವಶೋಧಗಳ ಕಾಲ. ರಾಜಕೀಯವಾಗಿ, ಧಾರ್ಮಿಕವಾಗಿ ಹಾಗೂ ವೈಚಾರಿಕವಾಗಿ ಇಡೀ ಜಗತ್ತಿನ ಜನಜೀವನ ಹೊಸ ಎಚ್ಚರಗಳಿಗೆ ಹಾಗೂ ಪರಿವರ್ತನೆಗಳಿಗೆ ಒಳಗಾದ ಕಾಲ. ವಿಜ್ಞಾನದ ದೃಷ್ಟಿಯಿಂದಲಂತೂ ಈ ಶತಮಾನ ಮನುಷ್ಯನ ಮಹತ್ಸಾಧನೆಗಳ ಕಾಲ. ಒಂದು ಮಾತಿನಲ್ಲಿ ಈ ಶತಮಾನದ ಲಕ್ಷಣ ವನ್ನು ಸೂತ್ರೀಕರಿಸಿ ಹೇಳುವುದಾದರೆ ಇದು ವಿಜ್ಞಾನ ಯುಗ. ಈ ವಿಜ್ಞಾನ ಯುಗ ಮನುಷ್ಯನ ನಾಗರೀಕತೆಯನ್ನು ಅನನ್ಯವಾಗಿ ರೂಪಿಸಿದೆ; ಆತನ ಸುಖ–ಸೌಲಭ್ಯ ಗಳನ್ನು ಹೆಚ್ಚಿಸಿದೆ. ಈ ವೈಜ್ಞಾನಿಕ ಯುಗ ತಂದ ನಾಗರಿಕ ಸವಲತ್ತುಗಳಿಗೆ ಮನು ಕುಲ ಬಾಧ್ಯವಾದಂತೆ, ವೈಜ್ಞಾನಿಕ ದೃಷ್ಟಿ ಎಂಬುದು ನಿಜವಾಗಿಯೂ ನಮ್ಮ ಬದುಕನ್ನು ಪ್ರಭಾವಿಸಿದೆಯೆ ? ವಿಜ್ಞಾನದ ಸವಲತ್ತುಗಳನ್ನು ನಮ್ಮ ಜನ್ಮಸಿದ್ಧ ಹಕ್ಕೆಂಬಂತೆ ಪಡೆದುಕೊಳ್ಳುವುದರಲ್ಲಿ ನಾವು ತೋರಿಸುವ ಉತ್ಸಾಹವನ್ನು, ವೈಜ್ಞಾನಿಕ

ದೃಷ್ಟಿಕೋನವನ್ನು ನಮ್ಮ ಬದುಕಿಗೆ ಅಳವಡಿಸಿಕೊಳ್ಳುವ ವಿಚಾರದಲ್ಲಿ ನಾವು ತಾಳಿದ್ದೇವೆಯೋ ? ವೈಜ್ಞಾನಿಕತೆಯುನ್ನು ಅಥವಾ ನಿಜವಾದ ವೈಚಾರಿಕತೆಯುನ್ನು ಈ ದೇಶದ ಲೇಖಕರು, ರಾಜಕಾರಣಿಗಳು, ಧಾರ್ಮಿಕ ನಾಯಕರುಗಳು ಎಷ್ಟರಮಟ್ಟಿಗೆ ಪ್ರತಿಪಾದಿಸಿದ್ದಾರೆ ? ಯಾವ ಮಹತ್ವದ ವೈಜ್ಞಾನಿಕ ಆವಿಷ್ಕಾರಗಳಿಗೆ ನಮ್ಮಲ್ಲಿ ಎಷ್ಟು ಜನ ಲೇಖಕರು ಸರಿಯಾಗಿ ಸ್ಪಂದಿಸಿದ್ದಾರೆ ? ನಮ್ಮ ಪರಂಪರೆಯುನ್ನು, ಸಂಪ್ರದಾಯಗಳನ್ನು, ರೂಢಿಗತ ಆಚಾರ ವಿಚಾರಗಳನ್ನು ನಿಜವಾದ ವೈಚಾರಿಕತೆಯ ಒರೆಗಲ್ಲಿಗೆ ಎಷ್ಟರಮಟ್ಟಿಗೆ ನಾವು ಉಜ್ಜಿ ನೋಡಿದ್ದೇವೆ ? ಒಂದು ವೇಳೆ ಹಾಗೆ ವೈಜ್ಞಾನಿಕ ವಿಚಿಕಿತ್ಸೆಗೆ ಒಳಗುಪಡಿಸಿದ್ದೇ ನಿಜವಾಗಿದ್ದರೆ, ಧಾರ್ಮಿಕವಾದ ಹಾಗೂ ಸಾಂಪ್ರದಾಯಿಕವಾದ ಸಂಗತಿಗಳ ಬಗೆಗೆ, ಅವಿಚಾರವೂ, ಆವೇಶಭರಿತವೂ ಆದ ಪ್ರತಿಕ್ರಿಯೆಗಳು, ಈ ಪ್ರಮಾಣದಲ್ಲಿ ಕೆರಳುತ್ತಿರಲಿಲ್ಲ ಎಂದು ನಮಗೆ ಅನ್ನಿಸುವುದಿಲ್ಲವೆ ? ನಿಜವಾದ ಸಂಗತಿಯೇನೆಂದರೆ, ನಮ್ಮ ಬದುಕಿನಲ್ಲಿ ಆಗಿರುವಂತೆ ತೋರುವ ಬದಲಾವಣೆಗಳೇನಿದ್ದರೂ ಕೇವಲ ಮೇಲ್ಪದರದವು ಮಾತ್ರ; ಆದರೆ ಒಳಗಿನ ತಿರುಳಿನಲ್ಲಿ ಏನೇನೂ ಬದಲಾವಣೆಯಾಗಿಲ್ಲ. ಮೇಲೆ ನೋಡಲು ಈ ಯುಗದ ಮನುಷ್ಯ ಎಷ್ಟೊಂದು ನಾಗರಿಕನಂತೆ ತೋರಿದರೂ, ಅವನ ಒಳಗೆ ಇರುವ ಮನುಷ್ಯ ಕೇವಲ ಆದಿಮಾನವನೇ ಆಗಿದ್ದಾನೆ-ಎಂದು ಅನಿಸುತ್ತದೆಯಲ್ಲವೇ ? ಇಂಥ ವಿಲಕ್ಷಣವಾದ ಮನುಷ್ಯನ ಸಮೇತ ನಾವೀಗ ಇಪ್ಪತ್ತನೆಯ ಶತಮಾನವನ್ನು ದಾಟಿ ಇಪ್ಪತ್ತೊಂದನೇ ಶತಮಾನವನ್ನು ಪ್ರವೇಶಿಸುತ್ತಿದ್ದೇವೆ ಎನ್ನುವುದು ಎಂತಹ ವಿಪರ್ಯಾಸದ ಸಂಗತಿಯಾಗಿದೆ ! ಕೆಲವು ವರ್ಷಗಳ ಹಿಂದೆ ನಮ್ಮ ರಾಷ್ಟ್ರನಾಯಕರೊಬ್ಬರು 'ನಾವೀಗ ಇಪ್ಪತ್ತೊಂದನೆಯ ಶತಮಾನಕ್ಕೆ ಹೋಗುತ್ತಿದ್ದೇವೆ' ಎಂಬ ಹೇಳಿಕೆಯುನ್ನು ಒಂದು ಮಹತ್ವದ ಘೋಷಣೆಯೆಂಬಂತೆ ಸಾರಿ ಹೇಳಿದರು. ನಿಜ, ನೀವು ಹೇಳಲಿ ಬಿಡಲಿ, ನಾವು ಇಪ್ಪತ್ತೊಂದನೆಯ ಶತಮಾನಕ್ಕೆ ಹೋಗುವುದು ಕಾಲಗತಿಯಲ್ಲಿ ಅನಿವಾರ್ಯವಾದ ಚಲನೆಯಾಗಿದೆ. ಆದರೆ ಇಪ್ಪತ್ತೊಂದನೆಯ ಶತಮಾನಕ್ಕೆ ಯಾವ ಒಂದು ಸ್ಥಿತಿಯಲ್ಲಿ ನಾವು ಹೋಗುತ್ತಿದ್ದೇವೆ ಎಂಬುದು ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಯಾಗಿದೆ.

ಆಯಿತು. ಭಾರತಕ್ಕೆ ಸ್ವಾತಂತ್ರ್ಯ ಬಂದು ನಾಲ್ಕು ದಶಕಗಳ ಮೇಲಾಯಿತು. ಸ್ವಾತಂತ್ರ್ಯಪೂರ್ವದಲ್ಲಿ ನಾವು ಕಟ್ಟಿಕೊಂಡ ಕನಸುಗಳೂ, ಇಟ್ಟುಕೊಂಡ ಆಸೆಗಳೂ ಇನ್ನೂ ಮರೀಚಿಕೆಯಾಗಿಯೇ ಉಳಿದಿವೆ. ಈ ಹಲವು ದಶಕಗಳ ಉದ್ದಕ್ಕೂ ನಾವು ಕೇವಲ ವಿಘಟನೆಗೊಳ್ಳುತ್ತಲೇ ಬಂದಿದ್ದೇವೆ. 'ಭಾವೈಕ್ಯತೆ'ಯ, 'ರಾಷ್ಟ್ರೀಯ ಸಮಗ್ರತೆ'ಯ, 'ಜಾತ್ಯಾತೀತತೆ'ಯ ಘೋಷಣೆಗಳು ಈ ವಿಘಟನೆಯ ತಲ್ಲಣವನ್ನೇ

ಧ್ವನಿಸುತ್ತ ಬಂದಿವೆ. ನಮ್ಮನ್ನು ಕಾಡುತ್ತಿರುವ ರಾಜಕೀಯ–ಸಾಮಾಜಿಕ-ಧಾರ್ಮಿಕ ಹಾಗೂ ಸಾಂಸ್ಕೃತಿಕ ಅಸಾಂಗತ್ಯಗಳು, ಈ ಎಲ್ಲವೂ ದಿನದಿಂದ ದಿನಕ್ಕೆ ಒಡೆದು ಹೋಗುತ್ತಿರುವ ಬದುಕಿನ ಪರಿಣಾಮಗಳಾಗಿವೆ. "The best lack all conviction, while the worst are full of passionate intensity"–ಎಂದ ಕವಿ ಯೇಟ್ಸ್‌ನ ಮಾತು ನಿಜವಾಗುತ್ತಾ, Things fall apart : the centre cannot hold ಎಂಬ ಸತ್ಯ ಸಮರ್ಥಿತವಾಗತೊಡಗಿದೆ. ಸ್ವಾತಂತ್ರ್ಯಪೂರ್ವದ ಗಾಂಧೀಯುಗದ ಸಂದರ್ಭದಲ್ಲಿ 'ನಡೆವುದೆಲ್ಲಂ ನಡೆವುದೊಳ್ಪಿಗೆ' ಎಂಬ ಶ್ರದ್ಧೆಯನ್ನು ಉದ್‌ಘೋಷಿಸಿದ ಕವಿ ಕುವೆಂಪು ಅವರು ಇತ್ತೀಚೆಗೆ–

ಅಗಲೋ–ಹಿಂದಕ್ಕೆ ಗುರುವಿದ್ದ, ಮುಂದಕ್ಕೆ ಗುರಿಯಿತ್ತು
ನುಗ್ಗಿದುದು ಧೀರ ದಂಡು
ಈಗಲೋ–ಹಿಂದಕ್ಕೆ ಗುರುವಿಲ್ಲ ಮುಂದಕ್ಕೆ ಗುರಿಯಿಲ್ಲ
ಮುಗ್ಗುತಿದೆ ಹೇಡಿ ಹಿಂಡು

ಎಂದು ಹೇಳುವಂತಾದದ್ದು ನಮ್ಮ ಪರಿಸ್ಥಿತಿಯ ವಿಪರ್ಯಾಸಕ್ಕೊಂದು ಸಮರ್ಥವಾದ ಪ್ರತೀಕವಾಗಿದೆ. ದಿನದಿಂದ ದಿನಕ್ಕೆ ಉಳ್ಳವರ ಮಹಲುಗಳು ಎತ್ತರಕ್ಕೇರಿದಂತೆ, ಇಲ್ಲದವರ ಬದುಕು ಬಡತನದ ತಳಾತಳಕ್ಕೆ ಇಳಿಯುತ್ತಿದೆ. ನಮ್ಮ ಬಹುಸಂಖ್ಯಾತ ಗ್ರಾಮಾಂತರ ಪರಿಸರವಂತೂ ಭ್ರಷ್ಟತೆ ಹಾಗೂ ಶೋಷಣೆಗಳ ಆಡುಂಬೊಲವಾಗುತ್ತಿದೆ. ಅನಕ್ಷರತೆ ಬದುಕನ್ನು ಗುತ್ತಿಗೆ ಹಿಡಿದುಕೊಂಡಿದೆ; ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಜನತೆಯನ್ನು ಸುಲಿಗೆ ಮಾಡಲು ಅನುಕೂಲವಾದ ಮೂಢನಂಬಿಕೆಗಳ ಬುಡ ಭದ್ರವಾಗಿದೆ. ಅನಕ್ಷರತೆ, ಬಡತನ ಮತ್ತು ಮೂಢನಂಬಿಕೆಗಳು ಭಾರತೀಯ ರಾಜಕಾರದ ಫಿಕ್ಸೆಡ್ ಡಿಪಾಸಿಟ್‌ಗಳಾಗಿವೆ. ಈ ಮೂರೂ ತೊಲಗಬೇಕೆಂಬುದು ಎಲ್ಲ ರಾಜಕೀಯ ಪಕ್ಷಗಳ ಘೋಷಣೆಯಾದರೂ, ಅವು ತಮ್ಮ ಯಥಾಸ್ಥಿತಿಯಲ್ಲಿ ಉಳಿದುಕೊಂಡು ಬರುವುದು ತಮ್ಮ ಸ್ಥಿರ ಪಟ್ಟಕ್ಕೆ ಎಷ್ಟೊಂದು ಅಗತ್ಯ ಎಂಬುದು ಅಂತರಂಗದ ರಹಸ್ಯ ಆಶಯವಾಗಿದೆ.

ನನಗೆ ತೋರುವ ಮಟ್ಟಿಗೆ ಈ ದೇಶದ ತರುಣ ಜನಾಂಗದ ಬದುಕನ್ನು ನಿಯಂತ್ರಿಸುವ ಶಕ್ತಿಗಳು, ಮುಖ್ಯವಾಗಿ ಈ ಮೂರು : ರಾಜಕಾರಣ, ಚಲನಚಿತ್ರ ಜಗತ್ತು ಮತ್ತು ಧಾರ್ಮಿಕ ಸಂಸ್ಥೆಗಳು. ಈ ನಾಡಿನ ತರುಣ ಜನಾಂಗದ ಮೌಲ್ಯ ಪ್ರಜ್ಞೆಯನ್ನು ಪ್ರಸ್ತುತ ರಾಜಕೀಯವೂ, ಈ ನಾಡಿನ ತರುಣ ಜನಾಂಗದ ಅಭಿರುಚಿಯನ್ನು ಚಲನಚಿತ್ರ ಜಗತ್ತೂ, ಈ ನಾಡಿನ ತರುಣ ಜನಾಂಗದ ವೈಚಾರಿಕತೆಯನ್ನು ಧಾರ್ಮಿಕ ಸಂಸ್ಥೆಗಳೂ ನಿಯಂತ್ರಿಸುತ್ತಿರುವ ಪರಿಸರದಲ್ಲಿ, ನಮ್ಮ ಸಾಹಿತ್ಯವಾಗಲೀ

ಗಂಭೀರವಾದ ಸಾಂಸ್ಕೃತಿಕ ಚಟುವಟಿಕೆಗಳಾಗಲೀ ಎದುರಿಸಬೇಕಾದ ಸವಾಲುಗಳೂ ಬಿಕ್ಕಟ್ಟುಗಳೂ ಅತ್ಯಂತ ಕ್ಲಿಷ್ಟವಾದವುಗಳಾಗಿವೆ. ಈ ಪರಿಸ್ಥಿತಿಯಲ್ಲಿ ನಮ್ಮ ಸಾಹಿತ್ಯ, ಇರುವ ಬದುಕನ್ನು ಇನ್ನಷ್ಟು ಸಹನೀಯವನ್ನಾಗಿ, ಸುಂದರವನ್ನಾಗಿ, ವೈಚಾರಿಕವನ್ನಾಗಿ ಮಾಡಲು ಸಾಧ್ಯವೆ ? ನಮ್ಮ ಜನ ಈ ಪರಿಸರಕ್ಕೆ ಸ್ಪಂದಿಸುವುದು ಹೇಗೆ ? ಪ್ರಶ್ನೆ ಮಾಡುವುದು ಹೇಗೆ ? ಎಂಬ ಎಚ್ಚರವನ್ನು ಹುಟ್ಟಿಸುವುದು ಸಾಹಿತ್ಯ ದಿಂದ ಸಾಧ್ಯವಾಗಬೇಕಲ್ಲವೇ ? ಹಾಗಾಗಬೇಕಾದರೆ ಸಾಹಿತ್ಯವು ಕೇವಲ ಪ್ರಚಾರಾ ರಾತ್ಮಕವಾದ, ಉಪದೇಶಾತ್ಮಕವಾದ ಧಾಟಿಯನ್ನು ತಾಳಬೇಕೆಂಬುದು ಖಂಡಿತ ನನ್ನ ಅಭಿಪ್ರಾಯವಲ್ಲ. ಆದರೆ ಸಾಹಿತ್ಯಕ್ಕೆ ಇರುವ ಈ ಸಾಮಾಜಿಕ ಜವಾಬ್ದಾರಿಯನ್ನು ಕಡೆಗಣಿಸಿ, ಕೇವಲ ತನ್ನದೇ ಆದ, ಮೂರ್ತಾಮೂರ್ತಗಳ, ಸೂಕ್ಷ್ಮಾತಿಸೂಕ್ಷ್ಮಗಳ ಚಿಂತನೆಯಲ್ಲಿ ತೊಡಗುವುದರಿಂದ ಏನು ಪ್ರಯೋಜನ ? ತನ್ನ ಪರಿಸರಕ್ಕೆ ಸ್ಪಂದಿಸದೆ ಹೋದರೆ ಹಾಗೂ ಯಾವ ಒಂದು ಸಮುದಾಯದ ಭಾಗವೂ, ಪ್ರತಿನಿಧಿಯೂ ಆದ ಲೇಖಕ, ಆ ಜನಕ್ಕೆ ತಾನು ಸಾಹಿತ್ಯಕವಾಗಿ ತಲುಪದೆ ಹೋದರೆ, ಅಂಥ ಬರಹದ ಪ್ರಸ್ತುತತೆಯೇನು ಎಂದು ನಾವು ಕೇಳಿಕೊಳ್ಳಬೇಕಾಗಿದೆ.

ಹಿಂದೆ ಸಾಹಿತ್ಯ ತನ್ನ ಕಥನ ಕಾವ್ಯರೂಪದ ಶ್ರವಣ ಸಂವಹನದ ಮೂಲಕ ಅನಕ್ಷರಸ್ಥ ಬಹು ಜನ ಸಮುದಾಯದೊಂದಿಗೆ ಇರಿಸಿಕೊಂಡ ಸಂಬಂಧದೊಂದಿಗೆ ಹಾಗೂ ಮಾಡುತ್ತಿದ್ದ ಪರಿಣಾಮದೊಂದಿಗೆ ಹೋಲಿಸಿದರೆ, ಪ್ರಸ್ತುತ ಸಾಹಿತ್ಯ ಆ ಬಗೆಯ ಸಂಬಂಧವನ್ನು ಇಂದು ಇರಿಸಿಕೊಂಡಿಲ್ಲ ಎಂಬ ಮಾತು, ಕಾವ್ಯವೆಂಬ ಪ್ರಕಾರದ ಮಟ್ಟಿಗೆ ನಿಜವಾದರೂ, ಅಂದಿಗಿಂತ ಇಂದು ತಾವಾಗಿಯೇ ಸಾಹಿತ್ಯವನ್ನು ಓದುವವರ ಸಂಖ್ಯೆ ತೌಲನಿಕವಾಗಿ ಹೆಚ್ಚಾಗಿದೆ ಎಂಬುದನ್ನೂ ಮತ್ತು ಕಾವ್ಯೇತರವಾದ ಜನಪ್ರಿಯ ಗದ್ಯ ಪ್ರಕಾರಗಳು ಸಾಹಿತ್ಯಾಸಕ್ತರನ್ನು ತಲುಪುತ್ತಿವೆ ಎಂಬುದನ್ನೂ ಒಪ್ಪಬೇಕಾಗಿದೆ. ಆದರೆ ದುರದೃಷ್ಟದ ಸಂಗತಿ ಎಂದರೆ ಹಿಂದಿನ ಅಭಿಜಾತ ಕಾವ್ಯ ಅನಕ್ಷರಸ್ಥ ಬಹು ಜನ ಸಮುದಾಯದ ಮೇಲೆ ವಾಚನ ಅಥವಾ ಗಮಕ ವಿಧಾನದ ಮೂಲಕ ಉಂಟು ಮಾಡುತ್ತಿದ್ದ ಗಾಢವಾದ ಸಂಸ್ಕಾರಕ್ಕೆ ಹೋಲಿಸಿದರೆ, ಇವತ್ತು ಹೊಸದಾಗಿ ಓದುವ ರುಚಿಯನ್ನು ಮೊದಲ ಬಾರಿಗೆ ಕಂಡುಕೊಂಡ ಬಹುಸಂಖ್ಯಾತ ಸಾಹಿತ್ಯಾಸಕ್ತರಿಗೆ ನಮ್ಮ ಜನಪ್ರಿಯ ಬರಹಗಾರರೂ ಹಾಗೂ ಪತ್ರಿಕೆಗಳೂ ಒದಗಿಸುತ್ತಿರುವ ಸಾಹಿತ್ಯದ ಗುಣಮಟ್ಟ ನಿಜಕ್ಕೂ ಗಾಬರಿ ಹುಟ್ಟಿಸುವಂತಿದೆ. ಸಾಹಿತ್ಯವು ಒಂದು ಲಾಭದಾಯಕ ಉದ್ಯಮವೆಂಬುದನ್ನು ಕಂಡುಕೊಂಡ ಈ ವ್ಯಾಪಾರೀ ಮನೋಧರ್ಮದ ಈ ದುಷ್ಪರಿ ಣಾಮಗಳನ್ನು ತಡೆಗಟ್ಟುವುದು ಹೇಗೆ ಎನ್ನುವುದು ಇವತ್ತಿನ ಗಂಭೀರ ಸಾಹಿತ್ಯಾಸಕ್ತ ರೆಲ್ಲರ ಸಮಸ್ಯೆಯಾಗಿದೆ.

ಸಾಹಿತ್ಯದ ಮೂಲಕ ನಮ್ಮ ಜನದಲ್ಲಿ ತಕ್ಕ ವೈಚಾರಿಕತೆಯನ್ನು ಎಚ್ಚರಿಸುವುದು ಇವತ್ತಿನ ಅಗತ್ಯವಾಗಿದೆ. ಕಳೆದ ಆರೇಳು ದಶಕಗಳ ಹೊಸಗನ್ನಡ ಸಾಹಿತ್ಯದಲ್ಲಿ ಈ ವೈಚಾರಿಕತೆಯ ಅಂಶ ತಕ್ಕಮಟ್ಟಿಗೆ ಕಾಣಿಸಿಕೊಂಡರೂ, ಪ್ರಸ್ತುತ ದಶಕದಲ್ಲಿ. ಅದರಲ್ಲಿಯೂ ದಲಿತ ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಈ ವೈಚಾರಿಕತೆ ಎನ್ನುವುದು ಹೆಚ್ಚು ಸಮಾಜಮುಖಿಯಾಗುತ್ತ, ಸಮಾಜದ ಹಲವು ಸ್ತರಗಳು ತಮ್ಮ ನಿಜವಾದ ವಾಸ್ತವಗಳನ್ನು ನೇರವಾಗಿ ಬಿಚ್ಚಿಡುತ್ತ ವೈಚಾರಿಕತೆಗೆ ಹೊಸ ಆಯಾಮಗಳನ್ನು ಒದಗಿಸಿವೆ. ನಮ್ಮ ಹಿಂದಿನ ಸಾಹಿತ್ಯದ ಧರ್ಮನಿಷ್ಠ ನಿಲುವುಗಳ ವೈಚಾರಿಕತೆಯೊಂದಿಗೆ ಹೋಲಿಸಿದರೆ ಈ ವಿಷಯ ಇನ್ನೂ ಸ್ಪಷ್ಟವಾಗುತ್ತದೆ. ನಮ್ಮ ಹಳಗನ್ನಡ ಸಾಹಿತ್ಯವನ್ನು ನಿಯಂತ್ರಿಸಿದ ಎರಡು ಮುಖ್ಯ ಶಕ್ತಿಗಳೆಂದರೆ, ಧರ್ಮ ಮತ್ತು ಪ್ರಭುತ್ವ. ಇವುಗಳಲ್ಲಿ ಪ್ರಭುಶಕ್ತಿಯನ್ನು ಕುರಿತು ನಿರಾಕರಣೆಯ ಹಾಗೂ ಪ್ರತಿಭಟನೆಯ ದನಿಗಳು ಆಗಾಗ ಕೇಳಿಬಂದರೂ, ಯಾವತ್ತೂ ಧರ್ಮವನ್ನು ಕುರಿತ ನಿರಾಕರಣೆಯ ಹಾಗೂ ಪ್ರತಿಭಟನೆಯ ದನಿಗಳು ಕೇಳಿಬರಲು ಸಾಧ್ಯವಾಗಲಿಲ್ಲ. ಅಷ್ಟರಮಟ್ಟಿಗೆ ಧರ್ಮವು ಸಾಹಿತ್ಯದ ಪ್ರೇರಕವೂ ನಿಯಂತ್ರಕವೂ ಆದ ಶಕ್ತಿಯಾಗಿ ವರ್ತಿಸಿದೆ. ಧರ್ಮನಿರಪೇಕ್ಷವಾದ ನಿಲುವುಗಳು ಗಟ್ಟಿಗೊಂಡದ್ದು ಕೇವಲ ಆಧುನಿಕ ಸಾಹಿತ್ಯದ ಸಂದರ್ಭದಲ್ಲಿಯೇ. ಹೀಗೆ ಧರ್ಮನಿಷ್ಠವಾದ ನಮ್ಮ ಹಿಂದಿನ ಸಾಹಿತ್ಯ ಅಂಥಂದಿನ ಕಾಲಕ್ಕೆ ಉಚಿತವಾದ ಹೊಸ ಧಾರ್ಮಿಕ ಹಾಗೂ ನೈತಿಕ ಮನುಷ್ಯನನ್ನು ನಿರ್ಮಾಣ ಮಾಡಿತಾದರೂ, ಮೂಲಭೂತವಾಗಿ ಸಾಮಾಜಿಕ ವಾಸ್ತವಗಳಾದ ಬಡತನ ಹಾಗೂ ಶೋಷಣೆಗಳನ್ನು ಅತ್ಯಂತ ಅಮುಖ್ಯವನ್ನಾಗಿ ಪರಿಗಣಿಸುತ್ತ, ಬಡತನವನ್ನು ವರ ಎಂದೋ, ದೈವಕೃಪೆ ಎಂದೋ ವೈಭವಿಸುತ್ತ, ಬಡತನವನ್ನು ಸಂಕಟವನ್ನು ಸಹಿಸಿಕೊಳ್ಳುವುದರ ಮೂಲಕವೇ ಮನುಷ್ಯನ ವ್ಯಕ್ತಿತ್ವ ಘನವಾಗುತ್ತದೆ ಎಂಬ ನಿಲುವನ್ನು ಎತ್ತಿಹಿಡಿಯುತ್ತ, ಒಂದರ್ಥದಲ್ಲಿ ಯಥಾಸ್ಥಿತಿಯನ್ನು ಬೆಂಬಲಿಸುತ್ತ, ಸಾಮಾಜಿಕ ತರತಮಗಳ ಹಾಗೂ ಶೋಷಕರ ಪರವಾಗಿಯೇ ನಿಂತಿತೆಂದು ಹೇಳುವುದು ಅನಿವಾರ್ಯವಾಗಿದೆ. ಆದರೆ ಯಾವ ಒಂದು ನಿಲುವು ಬಡತನವನ್ನು ಒಂದು ಶಾಪ ಎಂದು ಪರಿಗಣಿಸುತ್ತದೆಯೋ ಅದು, ಸಾಮಾಜಿಕ ವಾಸ್ತವಗಳನ್ನು ಸರಿಯಾಗಿ ಗ್ರಹಿಸಿ ಶೋಷಕ ಶಕ್ತಿಗಳ ವಿರುದ್ಧ ಧ್ವನಿ ಎತ್ತುತ್ತ ಬಹುಜನ ಹಿತವನ್ನು ತನ್ನ ಗುರಿಯನ್ನಾಗಿಸಿಕೊಂಡ ಕಾರಣದಿಂದ, ಅದು ನಿಜವಾದ ಅರ್ಥದಲ್ಲಿ ಧಾರ್ಮಿಕವಾದುದೆಂದು, ನಾನು ಪರಿಗಣಿಸುತ್ತೇನೆ. ಹಾಗೆಯೇ ವಿಧಿ–ಕರ್ಮ–ದೈವಗಳ ಹೆಸರಿನಲ್ಲಿ ಸಾಮಾಜಿಕ ಅಸಮಾನತೆಗಳನ್ನು ಸಮರ್ಥಿಸುವುದು ಅತ್ಯಂತ ಅಧಾರ್ಮಿಕವಾದ ನಿಲುವೆಂದೇ ನಾವು ಹೇಳಬೇಕಾಗುತ್ತದೆ. ಒಬ್ಬ ಬಡವನಾಗಿರುವುದಕ್ಕೆ ಆತನ ಪೂರ್ವ ಜನ್ಮದ ಪಾಪವೇ ಕಾರಣವೆಂದೂ, ಮತ್ತೊಬ್ಬ ಶ್ರೀಮಂತನಾಗಿರುವುದಕ್ಕೆ ಆತನ ಪೂರ್ವಜನ್ಮದ

ಪುಣ್ಯವೇ ಕಾರಣವೆಂದೂ, ಜನವನ್ನು ಧರ್ಮದ ಹೆಸರಿನಲ್ಲಿ ನಂಬಿಸುವ ಎಲ್ಲಾ ಕುತಂತ್ರಗಳನ್ನೂ, ನಮ್ಮ ಜನ ಗುರುತಿಸಿ ಖಂಡಿಸುವಂತಹ ಎಚ್ಚರವನ್ನು ಅವರಲ್ಲಿ ಮೂಡಿಸಬೇಕಾಗಿದೆ. ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಶಿವಶರಣರು ದೇವಸ್ಥಾನಗಳನ್ನೆ ನಿರಾಕರಣೆ ಮಾಡಿದರೆಂಬುದು ಒಂದು ಮಹತ್ವದ ವೈಚಾರಿಕ ಕ್ರಾಂತಿಯಾಗಿರುವಾಗ, ಇವತ್ತು ದೇವಸ್ಥಾನವನ್ನು ಕೆಡವಿ ಅದರ ಮೇಲೊಂದು ದೇವಸ್ಥಾನವನ್ನು ಕಟ್ಟುತ್ತೇವೆ ಎನ್ನುವ ರಾಜಕಾರಣ–ಧರ್ಮಯುದ್ಧವವನ್ನು ಹೇಗೆ ಮೆಚ್ಚಬೇಕೋ ತಿಳಿಯದಾಗಿದೆ. ಚರಿತ್ರೆಯೊಳಗೆ ಎಂದೋ ಆದ ತಪ್ಪುಗಳನ್ನು ತಿದ್ದುತ್ತೇವೆ ಎಂದು, ತಪ್ಪುಗಳ ಚರಿತ್ರೆಯನ್ನೇ ನಿರ್ಮಿಸಲು ಹೊರಡುವುದು ಪ್ರಗತಿ ಪರವಾದ ಕ್ರಮವೇನಲ್ಲ. ಯಜ್ಞ ಯಾಗಾದಿಗಳನ್ನು ಮಾಡಿ ಬೆಂಕಿಗೆ ತುಪ್ಪವನ್ನು ಹೊಯ್ಯುವುದರಿಂದ, ಉತ್ಸವಾದಿ–ಯಾತ್ರಾ ಪ್ರದರ್ಶನಗಳಿಂದ, ಮತ್ತೆ ಎಲ್ಲರೂ ಸಂಸ್ಕೃತವನ್ನು ಮಾತನಾಡುವಂತೆ ಮಾಡುವುದರಿಂದ ಭಾಷಾ ಸಾಮರಸ್ಯವನ್ನು ಸಾಧಿಸ ಬಹುದು ಎಂಬ ಭ್ರಮೆಗಳಿಂದ, ನಾವು ಇವತ್ತಿನ ವೇಗಯುಗದಿಂದ ಮತ್ತೆ ಪ್ರಪ್ರಾಚೀನ ವಾದ ವೇದಯುಗಕ್ಕೇ ಹಿಮ್ಮುಖವಾಗಿ ಪ್ರಯಾಣ ಮಾಡಿದಂತಾಗುತ್ತದೆಯೇ ವಿನಾ, ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಯುಗದಿಂದ ಮುಂದಿನ ಇಪ್ಪತ್ತೊಂದನೆಯ ಶತಮಾನಕ್ಕೆ ಮುನ್ನಡೆದ ಹಾಗಾಗುವುದಿಲ್ಲ. ಏನು ಮಾಡಿದರೂ ಈ ದೇಶದಲ್ಲಿ ಯಾವುದೇ ಮೂಲಭೂತವಾದ ಬದಲಾವಣೆಗಳನ್ನು ತರಲು ಸಾಧ್ಯವಾಗುತ್ತಿಲ್ಲವಲ್ಲ ಎಂಬ ವಿಷಾದದ ಹಿನ್ನೆಲೆಯಲ್ಲಿ, ವೈಚಾರಿಕತೆ ಹಾಗೂ ಸೃಜನಶೀಲತೆಗಳು ದಿಗ್ಮೂಢ ವಾಗಿ ನಿಂತುಕೊಂಡಂತೆ ತೋರುತ್ತದೆ.

ಸ್ನೇಹಿತರೆ, ಪ್ರಸ್ತುತ ಪರಿಸ್ಥಿತಿಯಲ್ಲಿ ನಮ್ಮ ಸಾಹಿತ್ಯವು ಎದುರಿಸುತ್ತಿರುವ ಹಲವು ಬಿಕ್ಕಟ್ಟುಗಳನ್ನು ನಿಮ್ಮೆದುರು ಪ್ರಸ್ತಾಪಿಸಿದ್ದೇನೆ. ಈ ಪ್ರಸ್ತಾಪದೊಳಗಿನ ನನ್ನ ಆಲೋಚನೆಗಳು ಬದುಕಿನ ಬಗ್ಗೆ ಗಾಢವಾದ ಪ್ರೀತಿಯಿಂದ ಹಾಗೂ ಕಳಕಳಿ ಯಿಂದ ಮೂಡಿದವುಗಳೇ ಹೊರತು ನಿರಾಶೆಯಿಂದಲಾಗಲಿ, ವ್ಯಗ್ರತೆಯಿಂದಲಾಗಲಿ ಮೂಡಿದವುಗಳಲ್ಲ. ಯಾಕೆಂದರೆ ನಾನು ಎಂದೂ ನಿರಾಶಾವಾದಿಯಲ್ಲ ಮತ್ತು ಮಾನವೀಯ ಸಂಬಂಧಗಳಲ್ಲಿ ನಂಬಿಕೆಯನ್ನು ಕಳೆದುಕೊಂಡವನಲ್ಲ. ●

ದೇವನೂರ ಮಹಾದೇವ ಅವರೊಂದಿಗೆ
ಒಂದು ಸಂದರ್ಶನ

ನಮ್ಮ ಮುಖ್ಯ ಲೇಖಕರಲ್ಲೊಬ್ಬರಾದ ಶ್ರೀ ದೇವನೂರ ಮಹಾದೇವ ಅವರ 'ಕುಸುಮ ಬಾಲೆ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಈ ಪ್ರಶಸ್ತಿ ಬಂದಾದಮೇಲೆ ಸಂಕ್ರಮಣ ಪತ್ರಿಕೆಯು ಕುಸುಮಬಾಲೆ–ಮಹಾದೇವ ಕುರಿತಂತೆ ವಿವಾದ ಒಂದನ್ನು ಆರಂಭಿಸಿದೆ. ಮಹಾದೇವ ಅವರಿಗೆ ಪ್ರಶಸ್ತಿ ಬಂದ ಸಂತಸದ ಸಂದರ್ಭ ಮತ್ತು ಈ ವಿವಾದ ಇವುಗಳ ಹಿನ್ನೆಲೆಯಲ್ಲಿ ಮಹಾದೇವ ಅವರನ್ನು ಸಂದರ್ಶಿಸುವ ಉದ್ದೇಶದಿಂದ 'ಸಂವಾದ'ದ ಪರವಾಗಿ ಶ್ರೀ ರಾಘವೇಂದ್ರ ಪಾಟೀಲ ಮತ್ತು ಶ್ರೀ ಡಿ. ಎಸ್. ನಾಗಭೂಷಣ, ಅವರಲ್ಲಿಗೆ ಹೋದೆವು. ಸುಮಾರು ಎರಡು ಗಂಟೆಗಳ ಕಾಲ ಮುಕ್ತವಾಗಿ ಮಾತಾಡಿದೆವು. ಈ ಮಾತುಕತೆಯ ಸಾರಾಂಶವನ್ನು ಇಲ್ಲಿ ದಾಖಲಿಸು ತ್ತಿದ್ದೇವೆ. ಚರ್ಚೆಯನ್ನು ನಾವು ಧ್ವನಿಮುದ್ರಿಸಿಕೊಂಡಿಲ್ಲ. ಯಥಾವತ್ತಾಗಿ ಬರೆದುಕೊಂಡೂ ಇಲ್ಲ. ಸಂದರ್ಶನ ಮುಗಿದಾದ ಮೇಲೆ ನೆನಪಿನ ಆಧಾರದ ಮೇಲೆ ಬರೆದ ಲೇಖನ ಇದಾಗಿದೆ. ಆದ್ದರಿಂದ ಇಲ್ಲಿ ಬಳಕೆಗೊಂಡ ಮಾತುಗಳು ಚರ್ಚೆಯಲ್ಲಿ ಬಳಕೆಗೊಂಡ ತದ್ವತ್ ಮಾತುಗಳಾಗದಿರ ಬಹುದು. ಆದರೆ ಇಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಮಾತ್ರ ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯಗಳೇ ಆಗಿವೆ. –ಸಂ]

ಸಂವಾದ: ಮಹಾದೇವ, ನೀವು ಎಪ್ಪತ್ತರ ದಶಕದ ಆರಂಭದಲ್ಲಿ, ಕಥೆ ಬರೆಯಲು ಆರಂಭಿಸಿದಿರಿ. ನಿಮ್ಮ ಕಥೆಗಳು ಹೊಸದೊಂದು ಧ್ವನಿಯನ್ನು ಹೊತ್ತು ಬಂದವು. ಬಹುಶಃ ಅವು ಕನ್ನಡದ ಮೊದಲ ಗಮನಾರ್ಹ ದಲಿತ ಬರಹ ಕೂಡ ಆಗಿವೆ. ಆದರೆ ನಿಮ್ಮ ಈ ಆರಂಭದ ಕಥೆಗಳಲ್ಲಿ ರೊಚ್ಚು, ರೋಷ, ವ್ಯಕ್ತವಾಗದೇ ಒಂದು ತೆರನ ತಂಪಾದ ನಿರ್ಲಿಪ್ತ ಕೋಪ ಮೂಡಿ ಬಂದಿದೆ. ಇಂಥ ಒಂದು ನಿಲುವು ನಿಮಗೆ ನಿಮ್ಮ ಆರಂಭದ ಬರಹದಲ್ಲೇ ಹೇಗೆ ಸಾಧ್ಯವಾಯಿತು ? ನಿಮ್ಮ ಬಾಲ್ಯದ ಅನುಭವಗಳ ಹಿನ್ನೆಲೆ ಏನಾದರೂ ಇದರ ಹಿಂದೆ ಇದೆಯಾ ?

ಮಹಾದೇವ: ನಾನು ಬರೆಯಲು ಆರಂಭಿಸಿದಾಗ ಬರುತ್ತಿದ್ದಂತಹ ಕಥೆಗಳು– ನನ್ನ ಬಾಲ್ಯದ ಅನುಭವಗಳು–ಉದಾಹರಣೆಗೆ, ನನಗೆ ನನ್ನ ಅಜ್ಜಿ ಹೇಳುತ್ತಿದ್ದಂತಹ ಕಥೆಗಳು ಮತ್ತು ನನಗೆ ಒದಗಿದ ಸಹವಾಸ–ಆಗ ನನಗೆ ಸೂ. ರಮಾಕಾಂತ ಮತ್ತು ಆಲನಹಳ್ಳಿ ಕೃಷ್ಣನಂತವರ ಸಹವಾಸ ಒದಗಿತ್ತು. ಹೀಗೆ ಇವೆಲ್ಲಾ ಕಾರಣಗಳು ನನ್ನ ಕಥೆಗಳಲ್ಲಿನ ನಿಲುವಿಗೆ ಕಾರಣ ಆಗಿರಬಹುದು. ಮತ್ತೆ .. ನಾನು ಬರೆಯಲು

ಆರಂಭಿಸಿದಾಗಲೇ ನನಗೆ ಏನನಿಸ್ತಿತ್ತು ಅಂದರೆ-ಹೇಳಬೇಕಾದ್ದನ್ನ ಪರಿಣಾಮಕಾರಿಯಾಗಿ ಮತ್ತು ಸಂಕ್ಷಿಪ್ತವಾಗಿ ಹೇಳಬೇಕು ಎನ್ನುವ ಭಾವನೆ ಇತ್ತು.

ಸಂ: ನವ್ಯ ಮಾರ್ಗ ಮೀರಿದ ಈ ಶೈಲಿ ನಿಮಗೆ ಒಮ್ಮೆಲೇ ಒದಗಿ ಬಂದದ್ದು ಹೇಗೆ ...

ಮ: ಗೊತ್ತಿಲ್ಲ....

ಸಂ: ದೇವರ ದಯೆಯೇ....

ಮ: ....(ನಗು)....

ಸಂ: ನೋಡಿ.... ನಿಮ್ಮ ತಂದೆ ಪೋಲೀಸ್ ಕಾನ್‌ಸ್ಟೇಬಲ್ ಆದವರು. ಅಂದರೆ ಸರ್ಕಾರಿ ನೌಕರಿಯಲ್ಲಿದ್ದವರು. ಹೀಗಾಗಿ ನಿಮಗೆ ಒಂದು ರೀತಿಯ secured ಜೀವನ ಲಭ್ಯವಾಗಿತ್ತು. ಆದ್ದರಿಂದ ನಿಮ್ಮ ಬಾಲ್ಯದಲ್ಲಿ ನೀವು ತೀವ್ರ ನೋವನ್ನು ಅನುಭವಿಸದೇ ಇದ್ದಿರಬಹುದು. ಅದಕ್ಕೇ ನಿಮ್ಮ ಕಥಾನಕಗಳಲ್ಲಿ ದಲಿತ ಶೋಷಣೆ ಕುರಿತು ಭಾವಾವೇಶದ ರೊಚ್ಚು, ರೋಷ ವ್ಯಕ್ತವಾಗದೇ ಇರಬಹುದೇ ...?

ಮ: ಇಲ್ಲ ಇಲ್ಲ. ನಮ್ಮಪ್ಪ ಪೋಲೀಸಾಗಿದ್ದಕ್ಕೆ ನನಗೆ ಸಮೃದ್ಧಿಯ ಜೀವನ ವೇನೂ ಸಿಕ್ಕಿಲ್ಲ. ನಾನು S.S L.C. ಪಾಸುಮಾಡಿ ಇಲ್ಲಿ ಮೈಸೂರಿಗೆ ಕಾಲೇಜಿಗೆ ಬಂದೆ ನೋಡಿ.... 67–68ನೇ ಇಸ್ವಿಗಳಲ್ಲಿ.... ಆಗ ಮಳೆಗಿಳೆ ಬರದೇ ಬರಗಾಲ ಸ್ಥಿತಿ ಇತ್ತು.... ಆಗ ಇಲ್ಲಿ ನನಗೆ ಊಟಕ್ಕೆ ಏನೇನೂ ವ್ಯವಸ್ಥೆ ಇರಲಿಲ್ಲ ... ಸಾಲಾ ಮಾಡಿ ಕಾರಾ ಮಂಡಕ್ಕಿ ತಿಂದು ದಿನಾ ಕಳೀತಿದ್ದೆ. ಹಂಗೆ ಸಮೃದ್ಧಿಯ ಬದುಕೇನೂ ಅಲ್ಲ...

ಸಂ: ಇದು ಬಡತನದ ಪ್ರಶ್ನೆ ಆಯ್ತು.... ಎಲ್ಲ ಬಡವರಿಗೂ ಸಾಮಾನ್ಯವಾದ ಅನುಭವ ...

ಮ: ಹಾಗಲ್ಲ, ಬರೀ ಅದಷ್ಟೇ ಆಗಿರ್ಲಿಲ್ಲ ..

ಸಂ: ನೀವು ನಿಮ್ಮ ದ್ಯಾವನೂರು ಸಂಕಲನದ ಕಥೆಗಳಲ್ಲಾಗಲೀ ಮತ್ತು ಒಡಲಾಳದಲ್ಲಾಗಲೀ ನಿಮ್ಮ ದಲಿತ ಅನುಭವಗಳಿಗೆ ಸೀಮಿತಗೊಂಡು ಅವುಗಳಿಗೆ ಮಾತ್ರ ಅಭಿವ್ಯಕ್ತಿ ನೀಡಿದ್ದೀರಿ. ಅಂದರೆ ಈ ಕೃತಿಗಳಲ್ಲಿ ದಲಿತ ಲೋಕಕ್ಕೆ ಹೊರತಾದ ಅನುಭವಗಳು ಬರುವುದೇ ಇಲ್ಲ. ಆದರೆ ನಿಮ್ಮ ಕುಸುಮಬಾಲೆ ಕೃತಿಯಲ್ಲಿ ಮೊಟ್ಟ ಮೊದಲಿಗೆ ದಲಿತೇತರ ಲೋಕದ ಚಿತ್ರ ಕೊಡಲು ಪ್ರಯತ್ನಿಸಿದ್ದೀರಿ. ಈ ಪ್ರಯತ್ನ ದಲ್ಲಿ ನಿಮಗೆ ಮಾನಸಿಕ ಹಿಂಜರಿಕೆ ಏನಾದರೂ ಅನ್ನಿಸಿತೆ ?

ಮ: ನನ್ನ ಕಥೆಗಳಲ್ಲಿ ಮತ್ತು ಒಡಲಾಳದಲ್ಲಿ.... ನಾನು ನೋಡಿದ ಪಾತ್ರಗಳು– ನನ್ನ ಲೋಕದ, ಅನುಭವದ ಪಾತ್ರಗಳು ಬರುತ್ತವೆ. ಅವು ಹೇಗಿದ್ದವೋ ಹಾಗೇ ಬರುತ್ತವಂತಲ್ಲ.... ಅಂದರೆ ನಾನು ಅವುಗಳನ್ನ ಹ್ಯಾಂಡಲ್ ಮಾಡಲು ಹೋಗು ವುದಿಲ್ಲ. ನಾನು interfere ಮಾಡಲು ಹೋಗುವುದಿಲ್ಲ.... ಅಂದರೆ ಆ ಪಾತ್ರಗಳನ್ನ

ಅವುಗಳ ಅತ್ಯಂತ ಸಹಜ ವಾತಾವರಣದೊಳಗೆ ಇಡುವ ಪ್ರಯತ್ನ ಮಾಡ್ತೀನಿ. ಈ ಪಾತ್ರಗಳು ನನ್ನ ವರ್ಗದವೇ ಆಗಿದ್ದವು ... ಇನ್ನು ಕುಸುಮಬಾಲೆಯೊಳಗೆ–ನಾನು ಬರೀ ನೋಡಿದವಲ್ಲ–ಇನ್ನೂ ಬೇರೆಯದನ್ನ ಹಿಡಿಯಲಿಕ್ಕೆ ನೋಡಿದ್ದೇನೆ....ಅಂದರೆ ಬರೀ ನನ್ನ ಅನುಭವದ ಅಂಗಳದೊಳಗೇ ನಿಲ್ಲುವದಲ್ಲ, ಅದನ್ನು ದಾಟಿ ಹೋಗಲು ನೋಡುವದು....ಒಂದು ರೀತಿಯಾಗಿ ನನ್ನ ಅನುಭವಗಳನ್ನು ಇನ್ನೊಂದಿಷ್ಟು ಚಾಚಿಕೊಳ್ಳುವುದು....

ಸಂ: ಅಲ್ಲ. ನಾವು ಈ ಪ್ರಶ್ನೆ ಯಾಕೆ ಕೇಳಿದೆವೆಂದರೆ–ಕುಸುಮಬಾಲೆಯಲ್ಲಿ ಬರುವ ಮುಖ್ಯ ಎಳೆ ಈ ವಂಶ–ಜಾತಿಗಳ ಶುದ್ಧತೆಯ ಅಹಂಕಾರವನ್ನ ಸ್ಫೋಟಗೊಳಿಸುವದಾಗಿದೆ....ಜಾತಿ ಸಂಕರವನ್ನ ಸಹಿಸಲಾರೆನೆನ್ನುವ ನಮ್ಮ ಸಾಮಾಜಿಕ 'ಇಗೊ'ದ ಬಲೂನಿಗೆ ಮುಳ್ಳು ಚುಚ್ಚುವುದು ಇದರ ಮುಖ್ಯ ಎಳೆಯಾಗಿದೆ. ಆದರೆ ಈ ಎಳೆ ಅತ್ಯಂತ ತೆಳುವಾಗಿದೆ ಮತ್ತು ಅದು ಮೂರ್ತಗೊಳ್ಳುವುದಿಲ್ಲ. ಇದು ನೀವು ನಿಮ್ಮ ಖಾಸಾ ಅನುಭವ ಲೋಕವನ್ನು ಮೀರುವ ಪ್ರಯತ್ನದಲ್ಲಿನ ಮಾನಸಿಕ ಹಿಂಜರಿಕೆಯಿಂದ ಆದ ಪರಿಣಾಮವಾಗಿರಬಹುದೇ ?....ಅದಕ್ಕೇ ನೋಡಿ ಕಾದಂಬರಿ ಅತ್ಯಂತ ದಟ್ಟ ಕುಸುರುಗಾರಿಕೆಯ ತಂತ್ರದಲ್ಲಿ ಹುಗಿದುಕೊಂಡುಬಿಡುತ್ತದೆನಿಸುತ್ತದೆ....

ಮ: ಅಲ್ಲ.... ಒಂದು ... ಕುಸುಮಬಾಲೆಯಲ್ಲಿ ನಾನು ಹೊಸ ತಂತ್ರ ಬಳಸಿದ್ದೇನೆ ಅಥವಾ ನನ್ನ ಈ ಬರವಣಿಗೆ ಒಂದು ತಂತ್ರ, ಪ್ರಯೋಗ ಅಂತ ನಾನು ಖಂಡಿತವಾಗಿ ಭಾವಿಸುವುದಿಲ್ಲ. ಅದರಲ್ಲಿ ತಂತ್ರ ಅನ್ನುವುದು ಇಲ್ಲವೇ ಇಲ್ಲ.... ನಾನು ಯಾವಾಗಲೂ ಸಹಜವಾಗಿ ಕಥೆ ಹೇಳುವವ. ತಂತ್ರ ಅನ್ನುವಂಥಾದ್ದು ಅಲ್ಲಿ ಇರುವುದಿಲ್ಲ. ಕುಸುಮಬಾಲೆಯಲ್ಲಿ ಈಗ ಜಾನಪದ ಸಹಜ ಕಥೆಯ ರೀತಿ ಜೋತಮ್ಮಗಳು ಬಂದು ಕಥೆ ಹೇಳತಾವೆ....

ಸಂ: ಅದು ತಂತ್ರವೆಂದೇ ಅನಿಸುತ್ತದೆ.... ಕಥೆ ಹೇಳುವ ರೀತಿಯೇ ಅಲ್ಲವೇ ಈ ತಂತ್ರವೆನ್ನುವುದು ...

ಮ: ಹೌದಾ.... (ಮುಗುಳುನಗೆ)

ಸಂ: ಅದಾಯಿತಲ್ಲ ... ಈ ಕಥಾನಕದ ಮುಖ್ಯ ಎಳೆನೋಡಿ....ಎಷ್ಟೊಂದು ತೆಳುವಾಗಿ ಬಂದಿದೆ. ಕುಸುಮಳ ಒಂದು ಘಟನೆ–ಕೆಂಪಿಯ ಒಂದು ಘಟನೆ....

ಮ: ಅದೇ ಮುಖ್ಯ ಎಳೆ ಅಂತ ಯಾಕೆ ಇಟ್ಟಕೋಬೇಕು....

ಸಂ: ಕುಸುಮಬಾಲೆ ಹಾಗಿದ್ದರೆ ಏನನ್ನ ಹೇಳ್ತದೆ ? ಅದು ತುಂಬ ಅಮೂರ್ತವಾಗಿಬಿಡ್ತದೆ. ಅದು ಒಂದು ತತ್ವಪದ ಆಗಬಹುದಿತ್ತು, ಆದರೆ ಕಾದಂಬರಿ ಆಗಲು ಹೋಗಿದೆ, ಎರಡೂ ಆಗಿಲ್ಲ.... ನೀವು ಹಿಂದೊಮ್ಮೆ ಮಾತಾಡ್ತಾ–ನಾನು ಓದುಗನನ್ನ ಹೊರಗಡೆ ಇಟಕೊಂಡು ಬರೆಯುವುದಿಲ್ಲ ... ನಾನೇ ಓದುಗ ಆಗಿ ನನ್ನನ್ನು ಕೂಡಿಸಿ

ಕೊಂಡು ನಾನು ಕಥೆ ಹೇಳ್ತೀನಿ ಅಂತ ಹೇಳಿದ್ದಿರಿ. ಇಲ್ಲಿ ಅದು ಅತಿಗೆ ಹೋಗಿದೆ ಅನಿಸ್ತದೆ. ಬಹುಶಃ ಕುಸುಮಬಾಲೆ ನಿಮ್ಮನ್ನು ಬಿಟ್ಟು ಮತ್ಯಾರಿಗೂ ತಲುಪೇ ಇಲ್ಲ ಅನ್ನುವ ಅಭಿಪ್ರಾಯ ಬರ್‍ತಾ ಇದೆ ..

ದ: ಹಾಗೇ ಅಂದಕೊಳ್ಳಿ....ಬುದ್ಧಿವಂತರಿಗೆ ಅರ್ಥವಾಗ್ತಿರಲಿಕ್ಕಿಲ್ಲ .. (ನಗು)

ಸಂ: ಹಾಗಲ್ಲ. ಈಗ ನೋಡಿ ಕಾದಂಬರಿಯಲ್ಲಿ ಜೀತವಿಮೋಚನಾ ಚಳುವಳಿಯ ದಲಿತ ಸಂಘರ್ಷ ಸಮಿತಿಯ ಮೆರವಣಿಗೆಯ ವಿವರ ಬರ್‍ತದೆ. ಇದು ಕಾದಂಬರಿಯ ಮುಖ್ಯ ಎಳೆಗೆ ತನ್ನನ್ನು ಜೋಡಿಸಿಕೊಳ್ಳುವುದೇ ಇಲ್ಲ. ಸ್ವತಂತ್ರವಾಗಿ ಈ ಬರಹ ಇಷ್ಟವಾಗುತ್ತದೆ. ಅದರಲ್ಲಿನ ತಿಳಿಹಾಸ್ಯವಂತೂ ನಿಮ್ಮ ವೈಶಿಷ್ಟ್ಯ ... ಆದರೆ ಈ ಅಧ್ಯಾಯ ಕಾದಂಬರಿಯ ಮುಖ್ಯ ಎಳೆಯೊಂದಿಗೆ ಸೇಂದ್ರೀಯವಾಗಿ ಜೋಡಿಸಿಕೊಳ್ಳುವುದಿಲ್ಲ.... ಒಂದು ಮುಖ್ಯಧಾರೆ ಕಾದಂಬರಿಯಲ್ಲಿ ಹರಿಯುತ್ತಿದ್ದರೆ ಮುಂದುಗಡೆ ಇನ್ನೊಂದು ಧಾರೆ ಕಾಣುತ್ತದೆ. ಅಕ್ಕಪಕ್ಕದಲ್ಲಿ ಇನ್ನಷ್ಟು ಧಾರೆ ಕಾಣಿಸುತ್ತವೆ. ಅವೆಲ್ಲಾ ಎಲ್ಲೋ ಸೇರಿಕೊಳ್ಳಬಹುದೆಂದರೆ ಅವು ಸೇರಿಕೊಳ್ಳುವುದೇ ಇಲ್ಲ. ಎಲ್ಲಾ ಅಕ್ಕಪಕ್ಕದಲ್ಲಿ ಬೇರೆ ಬೇರೆಯಾಗಿ ಹರಿಯುತ್ತವೆ....

ದ: ಹರಿಯಲಿ ಬಿಡಿ....ಅಂತೂ ನೆಲಕ್ಕೆ ತಂಪೋ .. (ನಗು)

ಸಂ: ನೀವು ನಿಮ್ಮ ಕಥೆಗಳಲ್ಲಿ ಆರಂಭದಿಂದಲೇ ನಿಮ್ಮದೇ ಆದ ಒಂದು ಭಾಷೆಯನ್ನು ರೂಪಿಸಿಕೊಂಡಂತೆ ಕಾಣುತ್ತದೆ. ಅದರ ಅವಶ್ಯಕತೆ ಏನಿತ್ತು ?....ಇಂಥದಕ್ಕೆ ಪ್ರೇರಣೆ. ಪ್ರಭಾವ ದೊರೆತದ್ದು ಹೇಗೆ ?

ದ: ಪ್ರಭಾವ ಅಂತಲ್ಲ.... ಪಾತ್ರಗಳನ್ನ ಅವುಗಳ ಸ್ವಾಭಾವಿಕ ವಾತಾವರಣದಲ್ಲಿ ಇಡಬೇಕೆನ್ನುವ ನನ್ನ ಪ್ರಯತ್ನದ ಬಗ್ಗೆ ಹೇಳಿದೆನಲ್ಲ... ಅದರ ಅಂಗವಾಗಿಯೇ ಇದು ಬಂದಿರಬೇಕು. ಅದೂ ಅಲ್ಲದೇ ಕಥೆಗಳಲ್ಲಿ ಈ ಭಾಷೆ ಬಳಸಿದಾಗ ಬಂದ ಪ್ರತಿಕ್ರಿಯೆ–ಸಾಹಿತ್ಯದ ಗೆಳೆಯರು ಇದನ್ನು ಸ್ವೀಕರಿಸಿದ ರೀತಿ, ನೀಡಿದ ಪ್ರೋತ್ಸಾಹ–ಇವು ಕೂಡ ನನ್ನ ಈ ಭಾಷೆಯ ಬಳಕೆಯ ಬಗ್ಗೆ ನನಗೆ ಪ್ರೇರಣೆ ನೀಡಿರಬೇಕು....

ಸಂ: ನೀವು ಲೋಹಿಯಾರವರ ಸಮಾಜವಾದೀ ಚಿಂತನೆಯಿಂದ ಪ್ರಭಾವಿತರಾದವರು. ಕರ್ನಾಟಕ ಸಮಾಜವಾದೀ ಯುವಜನ ಸಭಾದ ಸಂಚಾಲಕರಾಗಿ ಕೆಲಸ ಮಾಡಿದ್ದೀರಿ. ನೀವು ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾಗಲು ನಿಮ್ಮಲ್ಲಿನ ತುಡಿತಗಳು ಕಾರಣವೋ ಅಥವಾ ಆಕಸ್ಮಿಕವಾಗಿ ಆದದ್ದೋ...,

ದ: ಅದು ಆಕಸ್ಮಿಕವಾದದ್ದೆನಿಸುತ್ತದೆ.... ಆಗ ಆ ಸಂಘಟನೆಯ ಸಂಪರ್ಕದಲ್ಲಿ ಬಂದೆ....

ದ: ಹಾಗಂದರೆ ನೀವು ಆಗ ಕಮ್ಯುನಿಸ್ಟ್ ಸಂಘಟನೆಯ ಸಂಪರ್ಕಕ್ಕೆ ಬಂದಿದ್ದರೆ ಅದನ್ನು ಸೇರುತ್ತಿದ್ದಿರಾ ?

ಮ: ಹೌದೆನಿಸುತ್ತದೆ....

ಸಂ: ಅಂದರೆ R.S.S. ಸಂಪರ್ಕದಲ್ಲಿ ಬಂದಿದ್ದರೆ? ಅದನ್ನು ಸೇರುತ್ತಿದ್ದಿರಾ?

ಮ: ಇಲ್ಲ....ನಾನು R.S.S ನಲ್ಲಿ ಇದ್ದು ಹೊರಗೆ ಬಂದವನು ... ಶಾಲೆಯಲ್ಲಿ ಇದ್ದಾಗ ನಾನೂ R S.S.ಗೆ ಹೋಗುತ್ತಿದ್ದೆ. ಒಂದು ರೀತಿಯಾಗಿ ಅದರ ಪ್ರಭಾವ ದಲ್ಲೇ ಇದ್ದೆ....ಒಂದು ನೆನಪು ಬರ್ತದೆ....ಮೋಹನ ಅಂತ–ಈಗ ಎಲ್ಲಿಯೋ ಇಂಜಿ ನಿಯರ್ ಆಗಿದಾನೆ....ಬ್ರಾಹ್ಮಣರ ಹುಡುಗ. ಅವನೂ ಸಂಘದ ಕಾರ್ಯಕರ್ತ. ಅವ ಒಮ್ಮೆ ನನ್ನ ಎಂಜಲನ್ನು ಎತ್ತಿದ. ನನಗೆ ಅದು ಆಶ್ಚರ್ಯ ಆನಿಸಿತ್ತು. ಪ್ರಭಾವ ಬೀರಿತ್ತು. ಆದರೆ ಕ್ರಮೇಣ ಅವರು ಹೇಳುವ ಎಲ್ಲರೂ ಒಂದೇ ಅನ್ನುವ ಮಾತು ನಟನೆ ಅಂತ ತೋರತೊಡಗಿತು ಮತ್ತು ಇದೆಲ್ಲಾ ಅಲ್ಲದೇ, ಬರೀ ಅವರ ಸಂಪರ್ಕವೇ ಸಾಕು, ಒಂದು ರೀತಿಯ ಮುಸ್ಲಿಂರ ಬಗೆಗೆ, ಕ್ರಿಶ್ಚಿಯನ್ನರ ಬಗೆಗೆ ತನ್ನಿಂದ ತಾನೇ ದ್ವೇಷಭಾವನೆ ಮೂಡಿಬಿಡ್ತದೆ....ಅದನ್ನ ಅವರು ವ್ಯಕ್ತವಾಗಿ ಹೇಳದಿದ್ದರೂ, ಕಲಿಸ ದಿದ್ದರೂ ಅದು ಸಹಜವಾಗಿ ನಮ್ಮ ಮನಸ್ಸಿನಲ್ಲಿ ಮೂಡ್ತದೆ....ಹೀಗಾಗಿ ನಾನು R.S.S. ಬಿಟ್ಟವ....ಅದಕ್ಕೆ ಅದನ್ನ ಮತ್ತೆ ಸೇರುವ ಪ್ರಶ್ನೆ ಇಲ್ಲ....

ಸಂ: ಸಮಾಜವಾದೀ ಚಿಂತನೆಗಳ ಪ್ರಭಾವ ನಿಮ್ಮ ಕಥೆಗಳ ಮೇಲೆ ಆಗಿರ ಬಹುದಲ್ಲವೇ ?

ಮ; ಆಗಿರಬಹುದು,... ಸಹಜವಾಗಿ.

ಸಂ: ಹಾಗೆಯೇ. ನೀವು ಹೇಳಿದಿರಲ್ಲ... ಸಮಾಜವಾದೀ ಚಿಂತನೆಯ ಪ್ರಭಾವಕ್ಕೆ ಒಳಗಾದದ್ದು ಆಕಸ್ಮಿಕವೆಂದು. ಈ ಆಕಸ್ಮಿಕದಲ್ಲಿ ನೀವು ಕಮ್ಯುನಿಷ್ಟ್ ಚಿಂತನೆಯ ಪ್ರಭಾವಕ್ಕೆ ಒಳಗಾಗಿದ್ದರೆ ನಿಮ್ಮ ಕಥೆಗಳು ಇದೇ ರೂಪದಲ್ಲಿ ಬರುತ್ತಿದ್ದವೆ...

ಮ: ನಾನು ಬರೆಯುವಾಗ ನನಗೆ ಈ ಯಾವ ಚಿಂತನೆಗಳೂ ಬದ್ಧತೆಗಳಾಗಿ ಕಾಡುವುದಿಲ್ಲ. ಸಮಾಜವಾದಿ ಚಿಂತನೆಗಳಾಗಲೀ, ಕಮ್ಯುನಿಷ್ಟ್ ಚಿಂತನೆಗಳೇ ಆಗಲಿ, ದಲಿತ ಸಂಘರ್ಷ ಸಮಿತಿಯ ಚಟುವಟಿಕೆಗಳೇ ಆಗಲಿ.... ಇವು ಯಾವುವೂ ಬದ್ಧತೆ ಗಳಾಗುವುದಿಲ್ಲ....

ಸಂ: ಹಾಗಿದ್ದರೆ, ನೀವು ಆಕಸ್ಮಿಕವಾಗಿ ಕಮ್ಯುನಿಷ್ಟ್ ಪಕ್ಷ ಸೇರುವಂತಾಗಿದ್ದರೆ ನೀವು ಆ ಪಕ್ಷದಲ್ಲಿ ಉಳಿಯಲು ಸಾಧ್ಯವಾಗುತ್ತಿತ್ತೆ ?

ಮ: ಆಗುತ್ತಿರಲಿಲ್ಲಾಂತ ಕಾಣ್ತದೆ...ನನ್ನ ಬರವಣಿಯನ್ನ ನಿರ್ದೇಶಿಸಕ್ಕಾಗದೆ ಹೊರಕ್ಕೆ ಹಾಕ್ತಿದ್ರೋ ಏನೋ...

ಸಂ: ಈಗ ದಲಿತ ಸಂಘರ್ಷ ಸಮಿತಿ ಹೇಗಿದೆ ಅನಿಸ್ತದೆ....

ಮ: ಅದು ಹಿಂದಕ್ಕೂ ಹೋಗ್ತಾ ಇಲ್ಲ, ಮುಂದಕ್ಕೂ ಬರ್ತಾ ಇಲ್ಲ ಅನಿಸ್ತದೆ.

ಸಂ: ಇದಕ್ಕೆ ನಿಮ್ಮಂಥವರ ನಿಷ್ಕ್ರಿಯತೆಯೇ ಕಾರಣವಲ್ಲವೆ ? ನೀವೂ ರಾಜ್ಯ ಸಂಚಾಲಕರಾಗಿದ್ದಿರಿ....

ಮ: ನಾನು ರಾಜ್ಯ ಸಂಚಾಲಕನಾಗಿದ್ದಾಗಲೇ ಜಿಲ್ಲಾ ಸಂಚಾಲಕರಿಗೆ ತಾವು ಜಿಲ್ಲಾ ಸಂಚಾಲಕರು ಅಂತ ಅನಿಸಿದ್ದು....ದಲಿತ ಸಂಘರ್ಷ ಸಮಿತಿಯ ಸಮಸ್ಯೆ ಏನಂದರೆ ಅದು ಸಮಾಜದ ಡಾಕ್ಟ್ರಾಗಿ ವರ್ತಿಸಬೇಕಾದದ್ದು....ಆದರೆ ಅದು ಪೇಶಂಟ್‌ನಂತೆ ವರ್ತಿಸ್ತಾ ಇದೆ. ನಾವು ಈ ತರದ ತಪ್ಪು ಮಾಡಿದಿವಿ ಅಂತ ಈಗ ನನಗೆ ಗೊತ್ತಾಗ್ತಾ ಇದೆ.

ಸಂ: ಪರಿಸ್ಥಿತಿ ಹೀಗಿರುವಾಗ ಅವು ರಾಜಕೀಯಕ್ಕೆ ಇಳಿಯುವುದು ಎಷ್ಟರ ಮಟ್ಟಿಗೆ ಸರಿ ?

ಮ: ಹಂಗಲ್ಲ.... ನಾವು ಎಲ್ಲಾ ರೀತಿಯಿಂದ ಪರಿಶುದ್ಧಿ ಮಾಡಿಕೊಂಡೇ ಏನಾದರೂ ಕೆಲಸಕ್ಕೆ ಹೊರಡ್ತೀವಿ ಅಂದರೆ ಅದು ಆಗದ ಮಾತು...ಕೆಲಸಾ ಮಾಡ್ತಾ ಮಾಡ್ತಾನೇ ಸರಿಹೋಗಬೇಕು....

ಸಂ: ನಿಮಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದ ಮೇಲೆ ನೀವು ವಿವಾದಕ್ಕೆ ಸಿಕ್ಕಿಹಾಕಿಕೊಂಡಿದ್ದೀರಿ. ಇತ್ತೀಚಿನ ಸಂಕ್ರಮಣಗಳಲ್ಲಿ ಬಂದ ಲೇಖನ–ಪ್ರತಿಕ್ರಿಯೆಗಳನ್ನು ನೀವು ಗಮನಿಸಿರಬಹುದು, ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ ?

ಮ: ಬೇಜಾರು ಜಾಸ್ತಿ ಆಗಿ ಆಗಿ ಈಗ ಅದರ ತೀವ್ರತೆ ಕಳೆದು ಹೋಗಿದೆ,... ಅಲ್ಲ, ಕುಸುಮಬಾಲೆ ನಿಮಗೆ ಒಳ್ಳೆಯ ಕಾದಂಬರಿ ಅನಿಸದಿದ್ದಲ್ಲಿ–ಅದು ಅರ್ಥವಾಗುವುದಿಲ್ಲ ಅಂತ ಅನಿಸಿವಲ್ಲಿ–ಚಂಪಾ ಆಗಲಿ ಅಥವಾ ಮತ್ತೆ ಯಾರೇ ಆಗಲಿ-ಅದರ ಬಗ್ಗ ಹಾಗೆ ಬರೆದರೆ ನನಗೆ ಬೇಜಾರೇನೂ ಆಗುವುದಿಲ್ಲ ಆದರೆ ಕೇವಲ ಊಹಾಪೋಹದ ಮೇಲೆ ವೈಯುಕ್ತಿಕ ಆರೋಪ ಮಾಡುವುದರಿಂದ ಪ್ರಯೋಜನವಿಲ್ಲ. ನನ್ನ ಕೃತಿಯಲ್ಲಿ ಅಂತಿಮವಾಗಿ ಏನನ್ನು ಉಳಿಸಿಕೊಳ್ಳಬೇಕು, ಏನನ್ನು ಬಿಡಬೇಕು ಅನ್ನುವುದು ಸಂಪೂರ್ಣವಾಗಿ ನನಗೆ ಸೇರಿದ್ದು. ಅದಕ್ಕೆ ನಾನೇ ಹೊಣೆ, ಬೇರೆ ಯಾರೂ ಅಲ್ಲ. ಈ ಸಂಬಂಧವಾಗಿ ಬೇರೆಯವರ ಕಡೆಗೆ ಬೊಟ್ಟು ಮಾಡುವುದು ಸದಭಿರುಚಿ ಆಗಲಾರದು.

ಸಂ: ನಿಮ್ಮ ಕೃತಿ ಕುರಿತ ವಿಮರ್ಶೆಯೊಂದು ಪತ್ರಿಕೆಯಲ್ಲಿ ಪ್ರಕಟವಾಗುವ ಮೊದಲು ಅದರ ಕೆಲವು ಭಾಗಗಳನ್ನು ನೀವು ತೆಗೆಸಿ ಹಾಕಿದಿರೆನ್ನುವ ಆರೋಪವಿದೆಯಲ್ಲ ?

ಮ: ಅದು ಹಾಗಲ್ಲ. ಚಂಪಾ ಈ ಸಂಬಂಧ ವಿಮರ್ಶೆಯ ಮಾಫಿಯಾ ಅದು ಇದೂ ಅಂತ ಭಯಾನಕ ಶಬ್ದ ಬಳಸಿ ಏನನ್ನೋ ಮಾಡಬಾರದ್ದನ್ನ ಮಾಡಲಾಗಿದೆ ಅನ್ನುವ ಅಭಿಪ್ರಾಯ ಮೂಡಿಸಲು ಪ್ರಯತ್ನಿಸಿದ್ದಾರೆ. ಆದರೆ ಆಗಿದ್ದೆಂದರೆ–ಡೆಕನ್ ಹೆರಾಲ್ಡ್‌ಗೆ ಪೋಲಂಕಿಯವರು ಕುಸುಮಬಾಲೆಯ ಬಗ್ಗೆ ಬರೆದು ಕಳುಹಿಸಿದ

ಲೇಖನದಲ್ಲಿ ಕೃತಿಯಲ್ಲಿಲ್ಲದ ಭಾಗವನ್ನು ಉಲ್ಲೇಖಿಸಿ ಕೆಲವು ಅಭಿಪ್ರಾಯ ಮಂಡಿಸಿದ್ದರೆನ್ನುವುದು ಪತ್ರಿಕೆಯಲ್ಲಿನ ಓರ್ವ ಗೆಳೆಯನಿಂದ ತಿಳಿಯಿತು. ಆಗ ನಾನು ಶ್ರೀ ಪ್ರೋಲಂಕಿಯವರಿಗೆ ಪುಸ್ತಕದಲ್ಲಿಲ್ಲದ ಭಾಗದ ಮೂಲಕ ಪುಸ್ತಕವನ್ನು ಮತ್ತು ಲೇಖಕನನ್ನು ಚರ್ಚೆಗೀಡು ಮಾಡುವುದು ಸರಿಯಲ್ಲವೆಂದೂ, ಲೇಖನದಲ್ಲಿ ಬದಲಾವಣೆ ಮಾಡಲು ಇಷ್ಟವಿಲ್ಲದಿದ್ದರೆ, ಕನಿಷ್ಠ ಚರ್ಚೆಗೆ ನಿಮಿತ್ತವಾದ ಆ ಭಾಗ ಪುಸ್ತಕದಲ್ಲಿ ಸೇರಿಲ್ಲವೆನ್ನುವ ಟಿಪ್ಪಣಿಯನ್ನಾದರೂ ಬರೆಯಬೇಕೆಂದು ಸೂಚಿಸಿದೆ. ಆದರೆ ಅವರು ನನ್ನ ಸೂಚನೆಯನ್ನು ಒಪ್ಪದಿದ್ದಾಗ ಲೇಖನದ ಅಂಥ ಉಲ್ಲೇಖಗಳನ್ನು ತೆಗೆಯಲು ಪತ್ರಿಕೆಗೆ ಮನವಿ ಮಾಡಬೇಕಾಯಿತು. ಅಷ್ಟೆ....

[ಲೇಖನ: **ರಾಘವೇಂದ್ರ ಪಾಟೀಲ**]

ನನ್ನ ಬರವಣಿಗೆಯಲ್ಲಿ ನಾನೆಲ್ಲಿದ್ದೇನೆ..? ನಾನೊಬ್ಬ ಬರಹಗಾರ ಎಂದುಕೊಂಡಾಗ ನನಗೆ ಎರಡು ಕಥೆಗಳು ಮನಸ್ಸಿಗೆ ಬರುತ್ತವೆ. ಒಂದು... ಕ್ರಿಸ್ತಪೂರ್ವದಲ್ಲಿದ್ದ ಆದಿನಾಥನೆಂಬ ಜೈನ ದೊರೆಯದ್ದು. ಆತ ಒಂದು ಬೆಳಿಗ್ಗೆ ಎದ್ದು ನೋಡುತ್ತಾನೆ, ಅವನ ತಲೆಯ ಒಂದು ಕೂದಲು ನೆರೆತಿದೆ. ಅವನಿಗೆ ತಕ್ಷಣವೇ ಬದುಕಿನ ಕ್ಷಣಿಕತೆಯ—ಹುಟ್ಟು, ಸಾವು, ಎಲ್ಲದರ ದರ್ಶನವಾಯಿತು. ಅವನು ರಾಜ್ಯ, ಕೋಶ ಎಲ್ಲ ಬಿಟ್ಟು ತಪಸ್ಸು ಮಾಡಲು ಕಾಡಿಗೆ ಹೊರಟು ಹೋದ.

ಇನ್ನೊಂದು. ಸುಮಾರು ನನ್ನ ತರವ ಮನುಷ್ಯನಿಗೆ ಸಂಬಂಧಿಸಿದ್ದು, ಅವನು ಒಂದು ದಿನ ನದಿಯೊಂದರಲ್ಲಿ ನೀರು ಕುಡಿಯುತ್ತಿದ್ದಾಗ ಅವನ ಬೊಗಸೆಯಲ್ಲಿ ಒಂದು ಉದ್ದನೆಯ ಕೂದಲು ಕಂಡಿತು. ತಕ್ಷಣ ಅವನ ಕಣ್ಮುಂದೆ ಒಬ್ಬ ಸುಂದರ ಹೆಣ್ಣಿನ ರೂಪ ಮೂಡಿತು. ಈ ಕೂದಲೇ ಇಷ್ಟೊಂದು ಮನೋಹರವಾಗಿರುವಾಗ ಈ ಕೂದಲನ್ನು ಪಡೆದ ಹೆಣ್ಣು ಇನ್ನೆಷ್ಟು ಚೆಲುವೆಯಾಗಿರಬೇಕು ಎಂದು ಆತ ಯೋಚಿಸಿದ. ಅವನು ಆ ಹೆಣ್ಣನ್ನು ಹುಡುಕಿ ಅವಳ ಒಲವನ್ನು ಗಳಿಸಲು ಹೆಣಗತೊಡಗಿದ.

ನನ್ನ ಬರವಣಿಗೆ ಈ ಎರಡರ ಮಧ್ಯೆ ಇರುವಂತಹದು.

—**ದೇವನೂರ ಮಹಾದೇವ**

ಇನ್ನೊಂದು ಸಂದರ್ಶನ

ಕುಸುಮಬಾಲೆಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದ ಸಂದರ್ಭದಲ್ಲಿ ಮೈಸೂರು ಆಕಾಶವಾಣಿ ಪರವಾಗಿ ಶ್ರೀ ಕಿಕ್ಕೇರಿ ನಾರಾಯಣ ಅವರು ಮಹಾದೇವ ಅವರನ್ನು ಸಂದರ್ಶಿಸಿದರು. ಆ ಸಂದರ್ಶನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಸಂವಾದಕ್ಕಾಗಿ ಧ್ವನಿಸುರುಳಿ ಯಿಂದ ಈ ಸಂದರ್ಶನವನ್ನು ಬರಹದ ರೂಪಕ್ಕೆ ತಂದುಕೊಟ್ಟ ಶ್ರೀ ಕಿಕ್ಕೇರಿ ನಾರಾಯಣ ಅವರಿಗೆ ಸಂವಾದ ತನ್ನ ನೆನಕೆಗಳನ್ನು ಸಲ್ಲಿಸುತ್ತದೆ. —ಸಂ.]

ಕಿಕ್ಕೇರಿ ನಾರಾಯಣ: ನಿಮ್ಮ–ನಮ್ಮ–ಕನ್ನಡಿಗರ ಕುಸುಮಬಾಲೆ ಕೃತಿಗೆ 1990ರ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಬಂದ ಸಂದರ್ಭದಲ್ಲಿ ಆಕಾಶವಾಣಿ ಪರವಾಗಿ ನಿಮಗೆ ಅಭಿನಂದನೆಗಳನ್ನು ಅರ್ಪಿಸ್ತಿದೀನಿ.

ದೇವನೂರ ಮಹಾದೇವ: ವಂದನೆಗಳು.

ಕಿ.ನಾ. ಈ ಸಂದರ್ಭದಲ್ಲಿ ನೀವು ಬರಹಗಾರರಾಗಿ ಬಹುಮಾನದ ಸುದ್ದಿ ಬಂದಾಗ ನಿಮಗೇನನಿಸ್ತು ?

ದೇ.ಮ.: ನಾನಾವಾಗ ಬೆಂಗಳೂರಿನಲ್ಲಿದ್ದೆ, ಮೊದಲು ನನಗನಿಸಿದ್ದು–ಸ್ವಲ್ಪ ಸಂಕೋಚ ಅನಿಸ್ತು. ಯಾಕಂದರೆ ಅನಂತಮೂರ್ತಿಯವರಿಗೆ ಬಂದಿರಲಿಲ್ಲ ಇದು, ಲಂಕೇಶ್ ಅವರಿಗೆ ಬಂದಿರಲಿಲ್ಲ, ಕಂಬಾರರಿಗೆ ಬಂದಿರಲಿಲ್ಲ. ಅವರು ನನಗಿಂತಲೂ ಹಿರಿಯರಾದುದರಿಂದ ಆ ಕಾರಣಕ್ಕೆ ಸ್ವಲ್ಪ ಸಂಕೋಚ ಅನಿಸ್ತು. ಆದರೆ ಕೆಲಸ ಬಿಟ್ಟು ಬೇಸಾಯಕ್ಕೆ ಇಳಿದು land holder ಆದಮೇಲೆ–land holder ಅಂದರೆ ಭೂಮಿ ಹಿಡಕೊಂಡವನು ಅಂತ....

ಕಿ.ನಾ.: ನೆಲ ಕಚ್ಚಿದವನು ಅಂತ ...

ದೇ.ಮ.: ನೆಲ ಕಚ್ಚಿದವನು ಅಂತ. ಆ ತರ ಸ್ಥಿತೀಲಿದ್ದೆ ಸ್ವಲ್ಪ ಹೆಚ್ಚು, ಹೆಚ್ಚೂ ಕಮ್ಮಿ. ಆದ್ದರಿಂದ ಹಣದ ದೃಷ್ಟಿಯಿಂದ ಖುಷಿಯಾಯ್ತು.

ಕಿ.ನಾ. ಕುಸುಮಬಾಲೆ ಬರೆಯೋವಾಗ ಪ್ರೇರಣೆ ಏನಿರಬಹುದು ನಿಮಗೆ ?

ದೇ.ಮ.: ಬರೆಯೋವಾಗ ಬರೆಯೋದೆ. ಆವಾಗ ಪ್ರೇರಣೆ ಗೀರಣೆ ಅಂತಿರಲ್ಲ. ಬರೆಯೋದಕ್ಕೆ ಹಿಂದೆ ಇರಬಹುದು. ಒಂದು ಸಂಗತಿ ನನಗೆ ಆಗಾಗ ನೆನಪಿನಲ್ಲಿ ಬರ್‍ತಾ ಇತ್ತು. ಅದೇನೂಂತಂದರೆ ಒಂದು ಆಚರಣೆ–ನಮ್ಮ ಕಡೆ ಹಳ್ಳಿಗಳಲ್ಲಾಗುವ

ಒಂದು ಆಚರಣೆ, ಆ ಆಚರಣೆ ಏನೂಂತಂದರೆ ಯಾರಾದರೂ ಊಟ ಇಲ್ಲದೇನೋ ಅಥವಾ ಕಾಯಿಲೆಯಿಂದಾನೋ ಸಣ್ಣಕಾಗ್ತಾ ಹೋಗ್ತಾ ಇದ್ದರೆ ಅದಕ್ಕೆ ಆ ಮಗೂಗೆ ದೆವ್ವಾನೋ ಪಿಶಾಚೀನೋ ಹಿಡಕೊಂಬಿಟ್ಟಿದೆ. ಅದಕ್ಕೆ ಭೂತ ಬಿಡಿಸಬೇಕು ಅಂತ ಹೇಳಿಬಿಟ್ಟು ಒಂದು ಆಚರಣೆ ಮಾಡ್ತಿದ್ರು. ಆ ಆಚರಣೆ ಇದೆಯಲ್ಲಾ ಅದು ನನ್ನ ಮನಸ್ಸಲ್ಲೇ ಸುತ್ತಾ ಇತ್ತು. ಆ ಒಂದು ಎಳೆ ಇನ್ನು ಬೇರೆ ಸಂಗತಿಗಳ ಜೊತೆ ಕೂಡಿ ಕೊಂಡು ಕುಸುಮಬಾಲೆಯಾಯ್ತು.

ಕಿ.ನಾ.: ನೀವು ದ್ಯಾವನೂರು ಕಥಾ ಸಂಕಲನ ತಂದ ಏಳು ವರ್ಷಗಳ ನಂತರ ಒಡಲಾಳ ಬರೆದಿರಿ. ಆ ನಂತರ ಏಳೆಂಟು ವರ್ಷದ ಮೇಲೆ ಕುಸುಮಬಾಲೆ ಬರದ್ರಿ. ಒಂದು ಕೃತಿ ರಚನೆಗೂ ಇನ್ನೊಂದು ಕೃತಿ ರಚನೆಗೂ ಏಕೆ ಇಷ್ಟು ಅಂತರ ? ಅದನ್ನ ತಿಳಕೋಬೇಕು ಅನ್ನೋ ಕುತೂಹಲ ಇದೆ.

ದೇ.ಮ.: ನಾನೂ ತಿಳಕೋಬೇಕು ಅಂತಾನೇ ಆಸೆಪಡ್ತಿದೀನಿ, ಗೊತ್ತಾಯ್ತಾ ಇಲ್ಲ.

ಕಿ.ನಾ.; ಅಂದರೆ ಬರವಣಿಗೆ ಬರೀತಾ ಇರ್‍ತಾರಲ್ಲ–ಸಾಮಾನ್ಯವಾಗಿ ಬರೆಯೋರು ಬಹಳ ಬೇಗ ಬೇಗ ಬರದು ಬರದು ಪ್ರಕಟಣೆ ಮಾಡ್ತಾ ಇರ್‍ತಾರೆ.

ದೇ.ಮ.: ನಾನು ಪ್ರತಿ ಯಾವುದನ್ನೇ ಬರೆದರೂನೂ ನಾನು ಒಬ್ಬ ಬರಹಗಾರ ಅನ್ಕೊಂಡು ಆರಂಭ ಆಗಿಲ್ಲ. ಹೊಸದಾಗಿ ಅ–ಆ–ಇ–ಈ ಕಲಿತ್ಕೊಂಡು ಆರಂಭ ಮಾಡ್ದಂಗೆ ನಾನು ಆರಂಭದಲ್ಲಿ ಬರೀತೀನಿ. ಮೊದಲನೆ ಪುಟ ಅಂತೂ ಒಂದ್ಮೂರಸಲನಾದ್ರೂ ಬರೀತಿನಿ. ಇಂತಾ ಕಷ್ಟದ ಕಾರಣಕ್ಕಾಗೋ ಅಥವಾ ಪ್ರತಿ ಸಲ ಬರೆದಾಗ಼್ಲೂನೂ ಒಬ್ಬ ಹೊಸ ಬರಹಗಾರನಾಗಿ ಆಗೋದ್ರಿಂದ ಈ ತರ ಕಷ್ಟ ಇರಬಹುದು.

ಕಿ.ನಾ.: ಒಡಲಾಳ, ದ್ಯಾವನೂರು ಬರೆಯೋವಾಗಿನ ಮನಃಸ್ಥಿತಿಗೂ ಕುಸುಮಬಾಲೆ ಬರೆದಾಗಿನ ಮನಃಸ್ಥಿತಿಗೂ ಏನಾದರೂ ವ್ಯತ್ಯಾಸ ಇತ್ತಾ ? ಇದ್ದರೆ ಏನದು ?

ದೇ.ಮ. ಒಡಲಾಳ ಬರೆಯೋವಾಗ ನನಗೆ ಅಂದಾಜು ಹೆಚ್ಚಿಗೆ ಇತ್ತು. ಏನು ಬರೀಬೇಕೂಂತ ಅಂದಾಜು ಇದೆಯೋ ಅದು ಹೆಚ್ಚಿಗೆ ಇತ್ತು. ಆದರೆ ಕುಸುಮ ಬಾಲೆನಲ್ಲಿ ನನಗೆ ಅಂದಾಜುಗಳೇ ಇರಲಿಲ್ಲ. ಒಡಲಾಳ ಬರೆಯೋವಾಗ ನಿರ್ದಿಷ್ಟ ವಾದ್ದು ಏಷ್ಟಿತ್ತೋ ಅಷ್ಟನ್ನೇ ಬರೀತಾ ಇದ್ದೆ. ಹೆಚ್ಚಿಗೆ ಅಂದರೆ ಅದೇ ಅಂತ ಅಲ್ಲ. ಆದರೆ ಕುಸುಮಬಾಲೆ ಬರೆಯೋವಾಗ ಆ ಮನಸ್ಥಿತಿನಲ್ಲಿ ಯಾವದನ್ನ ಕಾಣತೀನೋ ಅದೆಲ್ಲಾ ಕಲಾಕೃತಿಯಾಗೋ ಒಂದು ಬಿಂದು_ಒಂದು ಸಾಧ್ಯತೆ ಇತ್ತು. ಉದಾ ಹರಣೆಗೆ ಹೇಳ್ತೀನಿ ಪ್ರತಿಯೊಂದು ವಸ್ತೂನೂ ನಾನು ಸುಮ್ಮನೆ ಮುಟ್ಕೊಂಡು ಮುಟ್ಕೊಂಡು ಹೋಗ್ತಾ ಇದ್ದೆ. ಏನು ಸಿಕ್ಕ ದಾರೀನಲ್ಲಿ ಹೋಗ್ತಾ ಹೋಗ್ತಾ–

ಬರೆಯೋ ಸ್ಪೀಡಿನಲ್ಲಿ ಪ್ರತಿಯೊಂದು ವಸ್ತೂನೂ ಸುಮ್ಮನೆ ಮುಟ್ಟೋದು. ಈತರ ಒಂದು ಮನಸ್ಥಿತಿ ಇತ್ತು. ಅಂದರೆ ಆ ತರದ ವ್ಯತ್ಯಾಸ ಕಾಣಿಸತ್ತೆ.

ಕಿ ನಾ. ಈಗ ನೀವು ಬರಹಗಾರರಾಗಿ ಬೇರೆ ಒಂದು ಕೃತೀನ ಓದ್ತೀರ ಅಂತ ಇಟ್ಕೊಳ್ಳೋಣ. ಈಗ ಕುವೆಂಪು ಅವರ ಪುಸ್ತಕಗಳು–Particular ನಾಪೆಲ್ ಅಥವಾ ಟಾಲ್‌ಸ್ಟಾಯ್ ಅವರ–ಚಿನುವಾ ಅಚಿಬೆ ಇಂಥವರ ಕೃತಿಗಳನ್ನು ಓದ್ತೀರಲ್ಲ–ಅವನ್ನ ನೀವು ಬರಹಗಾರರಾಗಿ ಹೇಗೆ ಓದ್ತೀರ ?

ದೇ. ಮ. ನಾ ಬರಹಗಾರನಾಗಿ ಓದೋದೇ ಇಲ್ಲ, ಓದುಗನಾಗೇ ಓದೋದು.

ಕಿ.ನಾ.: ನಿಮ್ಮ ಕೃತಿಯನ್ನು ಓದುಗರು ಅಥವಾ ವಿಮರ್ಶಕರು ಓದಿ ಕೃತಿಕಾರರಾಗಿ ನಿಮಗೆ ಅನಿಸಿದ್ದನ್ನು ಏನಾದರೂ ತೋರಿಸಿಕೊಟ್ಟರೆ ನಿಮಗೆ ಬೆರಗುಗೊಳಿಸಿದೆಯಾ ?

ದೇ.ಮ.: ಆ ರೀತಿ ಆಗಿದಾವೆ, ಸುಮಾರು ಆಗಿದಾವೆ. ಆದರೆ ನನಗೆ ಸದ್ಯಕ್ಕೆ ನೆನಪಿಲ್ಲ. ಸುಮಾರು ಸಲ ಹಾಗನ್ನಿಸಿದೆ.

ಕಿ.ನಾ. ಈಗ ನಿಮ್ಮ ಕುಸುಮಬಾಲೆಗೆ ಬರ್ತಾ ಅದು ಬಂದಾಗಿನಿಂದ ಕೆಲವರು ಅವನ್ನ ಓದೋದು ತುಂಬಾ ಕಷ್ಟ ಅಂತಾರಲ್ಲ ಅದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ದೇ.ಮ. ಈಗ ನಾ ಕುಸುಮಬಾಲೆ ಬರೆದಾದ ಮೇಲೆ, ಪ್ರಿಂಟಾದ ಮೇಲೆ ನಾನೂ ಓದಿಲ್ಲ....ನನಗೂ ಓದಕ್ಕೆ ಆರಂಭ ಮಾಡಿದರೆ ಒಂದ್ಹತ್ತು ಪುಟದವರೆಗೂ ನನಗೂ ಕಷ್ಟ ಆಗತ್ತೆ. ಒಂದು ಮಾಡಬಹುದಾಗಿತ್ತು ನಾನು, ಅದೇನು ದೊಡ್ಡ ನಷ್ಟ ಆಗ್ತಿರಲಿಲ್ಲ ...ಆ ಒತ್ತಕ್ಷರಗಳನ್ನು ಕಮ್ಮಿ ಮಾಡಬಹುದಾಗಿತ್ತು, ಅಂತ ಈಗ ಅನ್ನಿಸ್ತಾ ಇದೆ.

ಕಿ.ನಾ. ಅಷ್ಟು ಬಿಟ್ಟರೆ ಭಾಷೆ ಬಗ್ಗೆ ಏನೂ ಕಷ್ಟಅಂತ ಅನ್ನಿಸುಲ್ವಾ ನಿಮಗೆ..

ದೇ.ಮ. ನಾನೇ ಹೇಳಿದ್ನಲ್ಲ ಇಲ್ಲ. ಒಂದ್ಹತ್ತು ಪುಟ ಓದೋವರೆಗೆ ನನಗೇ ಕಷ್ಟ ಆಗಬಹುದು. ಆಮೇಲೆ ಅದೇ ಒಂದು ಆವರಣ ಉಂಟುಮಾಡಿಕೊಂಡು ಮುಂದಕ್ಕೆ ಸುಲಭ ಆಗತ್ತೆ ಅನ್ಕಂಡಿದೀನಿ.

ಕಿ.ನಾ. ಮತ್ತೆ ನಾನು ಅನೇಕ ಸಲ ನೋಡಿದೀನಿ, ನೀವು ಸೃಜನೇತರ ಬರಹದ ಭಾಷೆ ಉಪಯೋಗಿಸೋದಕ್ಕೂ ಮತ್ತು ಸೃಜನಶೀಲ ಬರಹದ ಭಾಷೆ ಉಪಯೋಗಿಸೋ ದಕ್ಕೂ ಸ್ವಲ್ಪ ವ್ಯತ್ಯಾಸ ಇದೆ ಅಂತನಿಸುತ್ತೆ. ಇದಕ್ಕೆ ಕಾರಣ ಏನು..., ?

ದೇ.ಮ. ನಿಜ. ನಾನು ಒಂದು ಕಲಾಕೃತಿನಲ್ಲಿ ಒಂದು ಪಾತ್ರಾನೇ ಆ ಪಾತ್ರಾನೇ ಅದರ ಮಾತೇ ಅದರ ನುಡಿಗಟ್ಟೇ–ಅದನ್ನ–ಅದರ ನಾಡಿ ಹಿಡಿಯುಕ್ಕೆ ಪ್ರಯತ್ನ ಪಡ್ತೀನಿ. ಆದರೆ ಒಂದು ಲೇಖನಾನೋ ಏನೋ ಬರೆದಾಗ–ನಾನು ಬರೀತಾ ಇರೋದು ಅದು–ಅಂದರೆ ಮಹಾದೇವ ಬರೀತಾ ಇರೋದು, ಆದ್ದರಿಂದ ಅಲ್ಲಿ ಮಹಾದೇವ ಅಲ್ಲ–ಮಹಾದೇವ ಅದಾಗಕ್ಕೆ ಪ್ರಯತ್ನ ಪಡ್ತಿರೋದು ಈ ವ್ಯತ್ಯಾಸ ಇರಬಹುದು.

ಕಿ.ನಾ. ಮತ್ತೆ ನಿಮ್ಮ ಕುಸುಮಬಾಲೆ ಕೃತಿಯ ಹಿನ್ನೆಲೆಯಲ್ಲಿ ನೋಡಿದಾಗ ಪದ್ಯ ರಚನೆಗೂ ಕಾವ್ಯ ರಚನೆಗೂ ಏನಾರ ವ್ಯತ್ಯಾಸ ಇದೆ ಅಂತ ಅನಿಸುತ್ತ ?

ದೇ.ಮ. ನಾನೂನು ಪದ್ಯ ಬರೆಯಕ್ಕೆ ಪ್ರಯತ್ನಪಟ್ಟು ವಿಫಲ ಆಗಿದೀನಿ. ಆದರೆ ಕಾದಂಬರೀನೋ ಕಥೇನೋ ಬರೆಯೋವಾಗ ಪದ್ಯ ಬರೆಯೋ ಮನಸ್ಥಿತಿನಲ್ಲೇ ಅವನ್ನೂ ಕೂಡ ನಾನು ಬರೀತೀನಿ ಅನ್ಕೊಂಡಿದೀನಿ.

ಕಿ.ನಾ. ಅಂದರೆ ಅದು ಅವಕ್ಕೆ ಸೇರಿಕೊಂಡಿರುತ್ತೆ.... ಈಗ.... ಕುಸುಮಬಾಲೆಯಲ್ಲಿ ಜನಪದ ಅಂಶಗಳನ್ನ ನೀವು ಬಳಸಿಕೊಂಡಿದ್ದೀರಲ್ಲ, ಇದರ ಅವಶ್ಯಕತೆ ಏಕೆ ಬಂತು ?

ದೇ.ಮ. ನಾನು ಬಳಸಿಕೊಂಡಿಲ್ಲ, ಎಷ್ಟು ಸಾಧ್ಯವೋ ಅಷ್ಟು ಜಾನಪದ ಆಗಕ್ಕೆ ಪ್ರಯತ್ನ ಪಟ್ಟಿದೀನಿ. ಅದಷ್ಟು ಮಾತ್ರ ಬರ್ದಿದೀನಿ. ಯಾಕಂದ್ರೆ ನಾನು ಬರೀತಾ ಇರೋದೇ ಜಾನಪದ....

ಕಿ.ನಾ. ಕುಸುಮಬಾಲೆನಲ್ಲಿ ಒಂದು ರೀತಿಯ ಲಯ ಸೃಷ್ಟಿಸಿಕೊಂಡಿದಿರಲ್ಲಾ.... ಈ ಲಯಕ್ಕೂ ಮತ್ತದರ ವಸ್ತುಗೂ ಏನಾದರೂ ಸಂಬಂಧ ಇದೆ ಅಂತ ಅನಿಸುತ್ತ ?

ದೇ.ಮ. ಇಲ್ಲ. ಆ ತರ ಏನು ಸೃಷ್ಟಿಸಿ–ಬರೆಯುವಾಗ ಒಂದು ಲಯ ಸೃಷ್ಟಿಸಿದೀನಿ ಅಂತಾನೋ ಅಥವಾ ಯಾವ ಯಾವ ಪ್ರತಿಯೊಂದೂ ತನ್ನಷ್ಟಕ್ಕೆ ತಾನೇ ಒಂದು ಲಯ ಆಗತ್ತೇನೋ.... ಯಾವುದೇ ಮಾಡಿದ್ದರೂ ಇದು ನಾನು ಬರೆಯುವಾಗ ಇಷ್ಟೇ ಮಾಡಿಕೊಂಡದ್ದು–ಎಷ್ಟು ಪರಿಣಾಮಕಾರಿಯಾಗಬಹುದು....ಎಷ್ಟು ಆಳವಾಗಿ ಅರ್ಥ ಮಾಡ್ಕೋಬಹುದು—ಈ ತನ್ಕ ಅನ್ಕಂಡಿದ್ದು: ಅದು ತನ್ನಷ್ಟಕ್ಕೆ ತಾನೇ ಒಂದು ಲಯ ಆಗಿರಬಹುದು ಅಷ್ಟೇನೇ. ಆ ಲಯವೇ ಪ್ರತ್ಯೇಕವಾಗಿ ಸೃಷ್ಟಿಸಿದ್ದು ಅಂತೇನಲ್ಲ.

ಕಿ.ನಾ. ನೀವು ಪ್ರಜ್ಞಾಪೂರ್ವಕವಾಗಿ ಸೃಷ್ಟಿಸಿದೀರ ಅಂತ ಅಲ್ಲ, ನಾನು ಕೇಳಿದೆನಲ್ಲ.... ಆ ಲಯ ಬಂತಲ್ಲ ಆ ಲಯ ಬಂದಿದ್ದಕ್ಕೇನಾದರೂ ...

ದೇ.ಮ. ನಾನು ಕುಸುಮಬಾಲೆ ಬರೆದ ಮೇಲೆ ಓದಿಲ್ಲ.

ಕಿ.ನಾ. ಈಗ ನಿಮ್ಮ ಕೃತಿಯಲ್ಲಿ ಅಂಬೇಡ್ಕರವಾದ, ಲೋಹಿಯಾವಾದ ಇವುಗಳ ಪ್ರಭಾವ ಏನಾದರೂ ಇದೆಯ ?

ದೇ.ಮ. ನೀವು ಹೇಳಬೇಕು ಅದನ್ನ.

ಕಿ.ನಾ. ಈಗ ಓದುಗರಾಗಿ ನಾವು ಕೇಳಿದರೆ ಈ ಪ್ರಶ್ನೇನ ನೀವು ಏನು ಹೇಳ್ತೀರ ?

ದೇ.ಮ. ಅದು ನನಗೆ ಸಂಬಂಧಪಟ್ಟದ್ದಲ್ಲ ಅಂತ ಹೇಳ್ತೀನಿ ಅಷ್ಟೆ.

ಕಿ.ನಾ. ಈಗ ಕೆಲವು ವಿಮರ್ಶಕರು ಈ ವಾದಗಳ ಹಿನ್ನೆಲೆಯಲ್ಲಿ ನಿಮ್ಮ ಕೃತಿಯನ್ನು ನೋಡಹೊರಟಿದಾರೆ. ಅಂದರೆ ಒಂದು ಸಾಮಾಜಿಕ ಸಿದ್ಧಾಂತದ ಹಿನ್ನೆಲೆಯಲ್ಲಿ ಕೃತಿಯನ್ನು ನೋಡಕ್ಕೆ ಪ್ರಯತ್ನಪಟ್ಟಿದಾರೆ. ಹೀಗೆ ನೋಡೋದ್ರಿಂದ ಕೃತಿಯನ್ನು

ಓದೋದಕ್ಕೆ ಏನಾದರೂ ತೊಡಕಾಗತ್ತೆ ಅಂತ ಅನಿಸುತ್ಯ ನಿಮಗೆ ?... ಅಂದರೆ ಹೀಗೆ ನೋಡುವ ದೃಷ್ಟಿ restrict ಮಾಡುತ್ತೆ ಅಂತ ಅನಿಸತ್ಯ ?

ದೇ.ಮ. ಇದು ಕೂಡ ಒಬ್ಬ ಬರಹಗಾರನಿಗೆ ಸಂಬಂಧಪಟ್ಟದ್ದಲ್ಲ. ಯಾಕಂದ್ರೆ ಆದಷ್ಟೂ ಮುಕ್ತವಾಗಿರೋದು ಒಳ್ಳೇದು. ಯಾವುದೇ ಅಳತೆಗೋಲಿಲ್ಲದೆ ಮುಕ್ತ ವಾಗಿರೋದು ಒಳ್ಳೇದು ಅಂತ ನಾನು ಹೇಳಬಹುದೇ ಹೊರತು ಹಿಂಗಲ್ಲ ಹಿಂಗೆ ಓದಿ ಅಂತ ನಾನ್ಯಾಕೆ ಹೇಳ್ಲಿ ?

ಕಿ ನಾ. ಅಲ್ಲ ಈಗ ವಿಮರ್ಶಕರು ಹಾಗೆ ಓದೋಹಾಗೆ ಮಾಡ್ತಾರಲ್ಲ–ಈ ದೃಷ್ಟಿ ಯಿಂದ ನೋಡಿಕೊಂಡು ಹೋಗಬೇಕೂ ಅನ್ನೋದು. ಈಗ ನಾನು ಓದುಗನಾಗಿ ನನ್ನಮೇಲೆ ಒಂದು ರೀತಿಯಲ್ಲಿ ಅದು restrict ಮಾಡತ್ತೆ. ಈಗ ನನಗೆ ಅಂಬೇ ಡ್ಕರ್‌ವಾದ ಗೊತ್ತಿಲ್ಲದೇ ಇದ್ರೆ ಈ ಕೃತೀನ ಓದಕ್ಕಾಗಲ್ವೇನೋ ಅಂತ ಒಂದು ಇದು ಬರತ್ತೆ ಓದುಗನಲ್ಲಿ. ಈ ಹಿನ್ನೆಲೆಯಲ್ಲಿ ಏನು ಹೇಳ್ತೀರಿ ?

ದೇ.ಮ. ನನಗೆ ಅಂಬೇಡ್ಕರ್ ಆಗಲೀ, ಲೋಹಿಯಾ ಆಗಲೀ, ಮಾರ್ಕ್ಸ್ ಆಗಲೀ ಒಂದು ಅಂದಾಜು ಗೊತ್ತೇ ಹೊರತು ವಿವರಗಳು ನನಗೆ ಗೊತ್ತಿಲ್ಲ. ಮತ್ತೆ ಬರೆಯು ವಾಗ ಅಲ್ಲಿ ಸಣ್ಣಪುಟ್ಟ ಜನಸಾಮಾನ್ಯರಿರ್ತಾರಲ್ಲ ಅವರೇ ನನಗೆ ಅಂಬೇಡ್ಕರ್ ಆಗಿ ರ್ತಾರೆ, ಅವರೇ ಲೋಹಿಯಾ ಅನಿಸ್ತಾರೆ, ಅವರೇ ಮಾರ್ಕ್ಸ್ ಆಗಿರ್ತಾರೆ, ಅವರೇ ಇನ್ನೊಂದು ಆಗಿರ್ತಾರೆ, ಸರ್ವಸ್ವ ಆಗಿರ್ತಾರೆ.

ಕಿ.ನಾ. ಈಗ ಸೃಜನಶೀಲ ಬರಹಗಾರ ತನ್ನ ಸಾಮಾಜಿಕ ಅನುಭವದ ಹಿನ್ನೆಲೆಯಲ್ಲಿ ಕೃತಿ ರಚಿಸಿದರೆ ಹೆಚ್ಚು ಅಥೆಂಟಿಕ್ ಆಗಿರತ್ತೆ ಅನ್ನೋ ವಾದ ಇದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ ಏನು ?

ದೇ.ಮ. ಪ್ರೇಮ್‌ಚಂದ್ ಅವರು ದಲಿತರಲ್ಲ. ಅವರ....ಗಬನ್ ...ಗಬನ್ ಅಲ್ಲ.... 'ಹೆಣದ ಬಟ್ಟೆ' ಅಂತ ಒಂದು ಕಥೆ ಇದೆ. ಆ ಕಥೆಗಳ ಮಟ್ಟಕ್ಕೆ ನಾನು ಬರೆದಿಲ್ಲ. ಅದು ದಲಿತರ ಬಗ್ಗೆ ಬರೆದಿರೋ ಕಥೆ. ಅಂದರೆ ಅರ್ಥ, ಸೆನ್ಸಿಬಿಲಿಟಿ ಅಂತಾರಲ್ಲ, ಅದಕ್ಕೆ ಸಂಬಂಧಪಟ್ಟದ್ದು–ಎಷ್ಟು ಒಬ್ಬನಿಗೆ ಒಳಗೊಳ್ಳಕ್ಕೆ ಸಾಧ್ಯನೋ ಆ ಮಟ್ಟದಲ್ಲಿ ಸಾಧ್ಯವಾಗ್ತದೆ. ಗಂಡಸರ ಅನುಭವಾನ ಹೆಂಗಸರು ಬರೆಯೋಕ್ಕಾಗಲ್ಲ, ಹೆಂಗಸರ ಅನುಭವಾನ ಗಂಡಸರು ಬರೆಯೋಕಾಗಲ್ಲ. ಈ ತರ ಮಾಡೋಕೆ ಸಾಧ್ಯವಾ ? ಎಷ್ಟು ಹೆಣ್ಣಾಗಕ್ಕೆ ಸಾಧ್ಯ–ಎಷ್ಟು ಒಬ್ಬ ಕಲಾವಿದ ಗಂಡಾಗಕ್ಕೆ ಸಾಧ್ಯ–ಹೆಣ್ಣಾಗಿದ್ರೆ–ಇದರ ಮೇಲೆ ಅವಲಂಬನೆ ಆಗೋದು. ಆದರೆ ಅನುಭವದ್ದು–ಅದನ್ನೂ ಕಡೆಗಣಿಸಕ್ಕೆ ಆಗಲ್ಲ. ಇದಕ್ಕೆ theory ಅಥವಾ ಏನು ಒಂದು ನಿಯಮ ಅಂತ ಮಾಡಿಕೊಳ್ಳೋ ಕಾಗಲ್ಲ. ನಾವು ಬಾಳಿದ್ದು ಬದುಕಿದ್ದು ಇದೆಲ್ಲಾ ಕೂಡ ಅಲ್ಲಿ ಲೆಕ್ಕಕ್ಕೆ ಬರತ್ತೆ. ●

(ಕೃಪೆ: ಆಕಾಶವಾಣಿ, ಮೈಸೂರು)

ಕುಸುಮಬಾಲೆಯಲ್ಲಿ ಜನ್ಮಾಂತರಗೊಳ್ಳುವ

ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು

ಡಿ. ಎಸ್. ನಾಗಭೂಷಣ

ಸಾಹಿತ್ಯ ಆಂದೋಲನಗಳು ಸಕ್ರಿಯವಾಗಿದ್ದಾಗ ಸಾಹಿತ್ಯ ವಿಮರ್ಶೆ ಸುಲಭವೆನಿಸುತ್ತದೆ. ಆ ಆಂದೋಲನ ಒಪ್ಪಿಕೊಂಡಿರುವ ಸಾಹಿತ್ಯ ಮೌಲ್ಯಗಳ ಒಂದು ಚೌಕಟ್ಟು ನಿಮಗೆ ಲಭ್ಯವಿರುತ್ತದೆ. ಆ ಚೌಕಟ್ಟಿನಲ್ಲಿ ನೀವು ಮಾಡಬಹುದಾದ ಸ್ಥೂಲ ಟೀಕೆ, ಟಿಪ್ಪಣಿಗಳು ಆಂದೋಲನದ ಕಾವಿನಿಂದ ನಿರ್ದಿಷ್ಟ ಅರ್ಥಗಳ ಭ್ರಮೆಯನ್ನಾದರೂ ಹುಟ್ಟಿಸಬಲ್ಲವು. ಯಾಕೆಂದರೆ ಆಗ ನೀವು ಆಡುವ ಮಾತುಗಳಲ್ಲಿ ಅರ್ಧ ನಂಬಿಕೆ ಇದ್ದರೂ ಸಾಕು, ಆಂದೋಲನದ ಅಬ್ಬರ ಅವನ್ನು ಪೂರ್ಣಗೊಳಿಸುತ್ತದೆ. ಆಂದೋಲನಗಳ ಕಾಲದಲ್ಲಿ ನಂಬಿಕೆ ಆಳವಾಗಿ, ಸತ್ಯವಾಗಿ ಮಾರ್ಪಡುವ ವ್ಯವಧಾನವೇ ಇರುವುದಿಲ್ಲ. ಅನ್ನಿಸಿಕೆಗಳೇ ಆಂದೋಲನ ದಯಪಾಲಿಸುವ ಹುಚ್ಚು ಧೈರ್ಯದಿಂದಾಗಿ ಸತ್ಯಗಳಂತೆ ಮೆರೆಯುತ್ತವೆ. ಉದಾಹರಣೆಗೆ, ಮಾಸ್ತಿ ಕತೆಗಳೆಂದರೆ ಯಾವುದೇ ಬುಟ್ಟಿಯಲ್ಲಿ ಹಾಕಿಕೊಂಡು ಹೋಗಬಹುದಾದ ಸೌತೆಕಾಯಿ ತರಹ ಎಂಬ ಮಾತು ನವ್ಯ ಆಂದೋಲನದ ಕಾವಿನಲ್ಲೂ, ಅಡಿಗರ ಕವಿತೆ ಜೀವ ವಿರೋಧಿಯಾದದ್ದು ಎಂಬ ಮಾತು ಬಂಡಾಯ ಸಾಹಿತ್ಯ ಆಂದೋಲನದ ಕಾವಿನಲ್ಲೂ ಆಯಾ ಆಂದೋಲನಗಳಲ್ಲಿದ್ದ ಬಹಳಷ್ಟು ಜನರಿಗೆ ಬಹು ಗಂಭೀರವಾದ ಸಾಹಿತ್ಯ ವಿಮರ್ಶೆಯ ಮಾತುಗಳೆನಿಸಿದ್ದವು.

ಇವೊತ್ತು ಸಾಹಿತ್ಯ ವಿಮರ್ಶೆಗೆ ಆ ಅನುಕೂಲವಿಲ್ಲ. ಆಂದೋಲನಗಳಿಲ್ಲದ ಕಾಲವಿದು. ಆದುದರಿಂದ ವಿಮರ್ಶಕ ತನ್ನ ನಂಬಿಕೆಯನ್ನೇ ನಂಬಿ ವಿಮರ್ಶೆಯ ಮಾತುಗಳನ್ನಾಡಬೇಕಾಗುತ್ತದೆ. ಕಳೆದ ಮೂವತ್ತು ವರ್ಷಗಳ ಕಾಲ ಆಂದೋಲನಗಳಿಗೆ ಒಗ್ಗಿ ಹೋದ ಕನ್ನಡ ವಿಮರ್ಶೆಯ ಮನಸ್ಸಿಗೆ ಇದು ಕಷ್ಟಕಾಲ. ವಿಮರ್ಶಕನ ನಿಜವಾದ ಸತ್ವಪರೀಕ್ಷೆಯ ಕಾಲ. ವಿಮರ್ಶೆಗೆ ಆಂದೋಲನಗಳು ಒದಗಿಸುತ್ತಿದ್ದ

ಇತ್ತೀಚೆಗೆ ಮಲ್ಲಾಡಿಹಳ್ಳಿ ಸ್ವಾಮೀಜಿಯವರ ಜನ್ಮಶತಾಬ್ದಿ ಸಮಾರೋಪ ಸಮಾರಂಭದ ಅಂಗವಾಗಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಓದಲಾದ ಪ್ರಬಂಧದ ಪರಿಷ್ಕೃತ ರೂಪ.

ಸಾಪೇಕ್ಷವಾದದ್ದಾದರೂ ಒಂದು ಚೌಕಟ್ಟಿಗೆ ಬದಲಾಗಿ ಇಂದು ಆತ ತನ್ನದೇ ಆದ–ಅಂದರೆ, ಸಾಹಿತ್ಯವೆಂದರೆ ಮೂಲತಃ ಏನು ಎಂಬ ತನ್ನ ಗ್ರಹಿಕೆಯನ್ನೇ ಆಧರಿಸಿದ–ಒಂದು ಚೌಕಟ್ಟಿನಲ್ಲಿ ಸಾಹಿತ್ಯ ವಿಮರ್ಶೆ ಮಾಡಬೇಕಾಗಿದೆ. ಇದಕ್ಕೆ ಆತ ಪರಂಪರೆಯು ಹಾಗೂ ತನ್ನ ಹಿಂದಿನ ಆಂದೋಲನಗಳು ಕಲಿಸಿದ ಪಾಠಗಳ ನೆರವು ಪಡೆಯಲೂ ಬಹುದು. ಆದರೆ ವಸ್ತುತಃ ತನ್ನದೇ ಆದ ಸತ್ಯದ ಒಂದಂಶವನ್ನು ಸಾಧಿಸಿಕೊಂಡೇ, ಆದರಿಂದ ವಿಮರ್ಶೆಯ ಮಾತುಗಳನ್ನು ಹೊರಡಿಸಬೇಕಾಗಿದೆ.

ಇಂದಿನ ಸಾಹಿತ್ಯ ವಿಮರ್ಶೆ ಕುರಿತ ಈ ಮಾತುಗಳನ್ನೇ ಇಂದಿನ ಕೃತಿನಿರ್ಮಾಣದ ಕೆಲಸಕ್ಕೂ ಅನ್ವಯಿಸಬಹುದು. ಕೆಲವರಿಗೆ, ನಾನು ತಿರುಗು-ಮುರುಗಾಗಿ ಮಾತಾಡುತ್ತಿದ್ದೇನೆ ಎನ್ನಿಸಬಹುದು. ಕೃತಿ ಮತ್ತು ಕೃತಿವಿಮರ್ಶೆಗಳಲ್ಲಿ ಮೊದಲು–ನಂತರಗಳ ಕ್ರಮ ಇದೆಯೆಂದು ನಾನು ಭಾವಿಸುವುದಿಲ್ಲ–ಕೋಳಿ ಮತ್ತು ಕೋಳಿ ಮೊಟ್ಟೆಯಂತೆ. ಜೀವಂತ ಹಾಗೂ ನಿರಂತರವಾದ ಒಂದು ಸಾಹಿತ್ಯ ಪರಂಪರೆಯಲ್ಲಿ ಕೃತಿನಿರ್ಮಾಣ ಹಾಗೂ ವಿಮರ್ಶೆ ಬೇರೆಯಾಗಿರಲಾರದು. ಕೃತಿಕಾರನೇ ಅನುಸಂಗಿಕವಾಗಿ ವಿಮರ್ಶಕನೂ ಆಗಿರುವನಾದ್ದರಿಂದ ಕೃತಿನಿರ್ಮಾಣ ಹಾಗೂ ವಿಮರ್ಶೆ ಪರಸ್ಪರ ಮುಖಾಮುಖಿಯಾದ ಕ್ರಿಯೆಯೇ ಆಗಿರುತ್ತದೆ. ಹೀಗಾಗಿ ಇಂದಿನ ಕೃತಿಕಾರ ಕೂಡಾ ಚೌಕಟ್ಟಿಗೆ, ಬೆಂಬಲಕ್ಕೆ ಇಲ್ಲದ ಆಂದೋಲನಗಳಿಗೆ ಹೊರತಾಗಿಯೇ, ಇಡಿಯಾಗಿ ಸ್ವತಃ ತನ್ನ ಸೃಜನಶಕ್ತಿಯನ್ನೇ ನಂಬಿಕೊಂಡು ಕೃತಿರಚನೆ ಮಾಡಬೇಕಾಗಿದೆ. ಇದಕ್ಕಾಗಿ ಆತ ಇಡಿಯಾಗಿ ತನ್ನ ಬದುಕು ಹಾಗೂ ಗ್ರಹಿಕೆಗಳನ್ನೇ ನಂಬಬೇಕು ಮತ್ತು ಈ ನಂಬಿಕೆ ಸ್ವತಃ ತನ್ನ ಪ್ರಾಮಾಣಿಕತೆಯ ಆಧಾರದ ಮೇಲೆ ಸತ್ಯವೆನ್ನಿಸುವಷ್ಟರ ಮಟ್ಟಿಗೆ ಆಳವಾಗಬೇಕು. ಇದಕ್ಕಾಗಿ ಆತ ಆದಷ್ಟೂ ಹೆಚ್ಚು ಇತರರ–ತನ್ನ ಸುತ್ತಮುತ್ತಲಿನವರ–ಬದುಕನ್ನೂ, ಅರಿತು ನೋಡುವ ಪ್ರೀತಿಯನ್ನೂ ವ್ಯವಧಾನವನ್ನೂ ಪಡೆದಿರಬೇಕು. ಹೀಗೆ ಪ್ರೀತಿ, ವ್ಯವಧಾನಗಳ ಮೂಲಕ ದಕ್ಕುವ, ಆದಷ್ಟೂ ಹೆಚ್ಚು ಜನರ ಬದುಕಿನ ಕಾವಿನಲ್ಲಿ ಮಾಗಿದ, ಸ್ವಂತ ಬದುಕನ್ನೇ ಇಂದಿನ ಕೃತಿ ನೆಚ್ಚಬೇಕಾಗಿದೆ. ಇದು, ತನ್ನನ್ನು ತಾನೇ ಪರರಲ್ಲಿ ಹುಡುಕಿಕೊಳ್ಳುವ ಕಲೆಗಾರಿಕೆ. ಯಾವುದನ್ನು ನಾವು ಎಲ್ಲ ಧರ್ಮಗಳ ಮೂಲಕೇಂದ್ರವೆನ್ನುತ್ತೇವೋ ಅಲ್ಲಿ ತನ್ನ ಬೇರುಗಳನ್ನು ಪಡೆದುಕೊಂಡಿರುವ ಈ ಕಲೆಗಾರಿಕೆ ತನ್ನನ್ನು ತನ್ನೊಳಗೇ ಹುಡುಕಿಕೊಳ್ಳುವ ನವ್ಯ ಅಥವಾ ತನ್ನನ್ನು ಪರರಲ್ಲಿ ಕಳೆದುಕೊಳ್ಳುವ ಬಂಡಾಯದ ಒಲವುಗಳಿಗಿಂತ ಭಿನ್ನವಾದದ್ದು.

ಇತ್ತೀಚಿನ ಕನ್ನಡ ಸಾಹಿತ್ಯದ ಒಲವುಗಳ ಚಾಲಕ ಶಕ್ತಿಯಾಗಿ ಗುರುತಿಸಬಹುದಾದದ್ದು ಲೋಕವ್ಯವಹಾರವನ್ನು ಮೀರಿ ನಿಂತು ಅದನ್ನು ಗಮನಿಸುವ ನಿರಹಂಕಾರಿಯಾದ ಈ ಲೋಕೋತ್ತರ ತುಡಿತವನ್ನೇ. ನಿಜ, ಎಲ್ಲ ಕಾಲದ ಶ್ರೇಷ್ಠ ಸಾಹಿತ್ಯವೂ

ಒಂದಲ್ಲ ಒಂದು ರೂಪದಲ್ಲಿ ಈ ರೀತಿಯ ತುಡಿತವನ್ನು ಹೊಂದಿಯೇ ಇರುತ್ತದೆ. ಏಕೆಂದರೆ ಸಾಹಿತ್ಯದ ಮೂಲಶಕ್ತಿ ಸ್ರವಿಸುವುದೇ ಈ ತುಡಿತಗಳಿಂದ. ಆದರೆ, ಕಳೆದ ಮೂವತ್ತು-ನಲವತ್ತು ವರ್ಷಗಳ ಕಾಲ ಕನ್ನಡ ಸಾಹಿತ್ಯದಲ್ಲಿ, ಬಹುಶಃ ಈ ತುಡಿತ ವನ್ನು ವಾಚ್ಯವಾಡಿ ಸ್ಥೂಲಗೊಳಿಸಿದ ನವ್ಯೋದಯದ ಕೊನೆಗಾಲದ ಅತಿಗಳಿಗೆ ಪ್ರತಿ ಕ್ರಿಯೆಯಾಗಿ, ಕಂತಿಹೋಗಿದ್ದ ಈ ತುಡಿತ ಕ್ರಮೇಣ ಈಗ ಹೊಸ ರೂಪ-ರಚನೆ-ಲಯಗಳೊಂದಿಗೆ ವ್ಯಕ್ತವಾಗತೊಡಗಿದೆ.

ತನ್ನ ಮತ್ತು ಇತರರ ಲೋಪದೋಷಗಳನ್ನು ಆ ಲೋಪದೋಷಗಳ ನೆಲೆಗಟ್ಟಿ ನಲ್ಲಷ್ಟೇ ನೋಡದೆ, ಅವು ಜೀವದ ಹುಟ್ಟು-ಸಾವುಗಳಷ್ಟೇ ಸಹಜವೆಂದು ಗ್ರಹಿಸಿ, ಅವುಗಳೊಂದಿಗೆ ಹೊಡೆದಾಡುವುದರಿಂದ ಹುಟ್ಟುವ ರೂಪಗಳಿಗಿಂತ ಅವುಗಳನ್ನು ಮೀರುವ ಪ್ರಯತ್ನದಲ್ಲಿ ಹುಟ್ಟುವ ರೂಪಗಳು ಸುಂದರವೂ, ಸತ್ಯವೂ, ಸಾಂತ್ವನ ಪೂರ್ಣವೂ ಆಗಿರುತ್ತವೆಂಬ ಅರಿವು ಕನ್ನಡದ ಇತ್ತೀಚಿನ ಅನೇಕ ಪ್ರಮುಖ ಕೃತಿಗಳ ರಚನೆಯ ಹಿಂದೆ ಕಾಣುತ್ತದೆ. ಅಂತಿಮವಾಗಿ, ಸಿನಿಕತೆಗೆ ಎಳೆದೊಯ್ಯುವ ನವ್ಯದ ವಿಷಾದದ ಒಳನೋಟ ಹಾಗೂ ವ್ಯಗ್ರತೆಗೆ ಎಳೆದೊಯ್ಯುವ ಬಂಡಾಯದ ಕ್ರೋಧದ ಹೊರನೋಟಗಳ ಆಯಾಸದಿಂದ ಹುಟ್ಟಿರಬಹುದಾದ ಈ ಹೊಸ ನೋಟವು, ಕ್ಷಣ ದಲ್ಲಿ ಅನಂತದ ವಿವರಗಳನ್ನು ಕಾಣುವ ಮತ್ತು ಅನಂತದಲ್ಲಿ ಕ್ಷಣದ ತೀವ್ರತೆಯನ್ನು ಗಮನಿಸುವ-ಬದುಕಿನ ಮಧ್ಯವೇ ಕಣ್ಣು ಮುಚ್ಚಿ ಕೂತ ಗಾಢ ಧ್ಯಾನದಿಂದ ಮಾತ್ರ ದಕ್ಕುವ-ವ್ಯವಧಾನ ಹಾಗೂ ಪ್ರೀತಿಗಳನ್ನು ತನ್ನ ಎರಡು ಕಣ್ಣುಗಳನ್ನಾಗಿ ಪಡೆದು ಕೊಂಡಿರುವಂತೆ ತೋರುತ್ತಿದೆ. ಇದಕ್ಕೆ ತಕ್ಕುದಾಗಿಯೇ ಭಾಷೆ ನವ್ಯದ ಬಿಗಿಗಂಟು ಗಳನ್ನೂ ಬಂಡಾಯದ ಏದುಸಿರುಗಳನ್ನೂ ಕಳೆದುಕೊಂಡು ಆರೋಗ್ಯವಂತ ಮನುಷ್ಯನ ಉಸಿರಾಟದ ಲಯಗಳಿಗನುಸಾರವಾದ ಸಹಜ-ಸರಳ ನಡಿಗೆಯನ್ನು ಸಾಧಿಸಿಕೊಳ್ಳುತ್ತಿದೆ.

ಇದೆಲ್ಲದಕ್ಕೆ ನಾವು ಇಂದು ಅನೇಕ ಉದಾಹರಣೆಗಳನ್ನು ಕೊಡಬಹುದು. ಕಾವ್ಯವನ್ನೇ ತೆಗೆದುಕೊಂಡರೆ, ಮುಖ್ಯವಾಗಿ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಹಾಗೂ 'ಮೌನದ ಸುವರ್ಣ ಪುತ್ಥಳಿ', ಕೆ. ವಿ. ತಿರುಮಲೇಶರ 'ಅವಧ' ಹಾಗೂ 'ಪಾಪಿಯೂ', ಹೆಚ್. ಎಸ್. ಶಿವಪ್ರಕಾಶರ 'ಅಣುಕ್ಷಣ ಚರಿತೆ', ಹೆಚ್. ಎಸ್. ವೆಂಕಟೇಶಮೂರ್ತಿಯವರ 'ಅಗ್ನಿ ಸ್ತಂಭ' ಹಾಗೂ ಸುಬ್ರಾಯ ಚೊಕ್ಕಾಡಿ ಯವರ 'ಮೊನ್ನೆ ಸಿಕ್ಕವರು' ಕವನ ಸಂಕಲನಗಳ ಹಲವಾರು ಪದ್ಯಗಳನ್ನು ಉದಾ ಹರಿಸಬಹುದು. ಈ ಎಲ್ಲ ಪದ್ಯಗಳಲ್ಲೂ ಪಕ್ಷಿಯೋ, ಮರವೋ, ಹೂವೋ ಮನುಷ್ಯನೋ, ಪ್ರಾಣಿಯೋ ತನ್ನ ಇನ್ನೊಂದು ಭಾಗವಾಗಿ ಕಾಣುವ, ಕಾಡುವ

ಹಾಗೂ ಕರಗುವ ವಿಸ್ಮಯವನ್ನು-ಪ್ರೀತಿಯ ತೀವ್ರತೆಯನ್ನು ವ್ಯವಧಾನದ ವಿವರಗಳಿಂದ temper ಮಾಡಿ-ಹೇಳುವ ಹೊಸ ಹದದ ಕಲೆಗಾರಿಕೆಯನ್ನು ನೋಡಬಹುದು

ಚಿಂತಾಮಣಿಯ ಸಭಾಂಗಣದಲ್ಲಿ ಭಾಷಣ ಮಗ್ನ-
ಮನಸ್ಸು. ಮನಸ್ಸಿನ ಶೇಕಡಾ ತೊಂಭತ್ತು ಪಾಲು; ಕಣ್ಣು
ಹಾಯುತ್ತಿತ್ತು ಮುಖದಿಂದ ಮುಖಕ್ಕೆ, ಹುಡುಕುತ್ತಿತ್ತು
ರೇವುಳ್ಳ ನಡುಗಡ್ಡೆಯೊಂದ-ತಂಗಲು ನಿಮಿಷ; ತಂಗಿ
ಅಂತರಂಗದ ಅನಂಗಭಂಗಿಗೆ ತಕ್ಕ ಭಂಗಿ, ದೃಷ್ಟಿಗೆ ದೃಷ್ಟಿ
ಬಡಿತಕ್ಕೆ ತಕ್ಕ ಪ್ರತಿಬಡಿತ ಕೊಡುವಿನ್ನೊಂದು
ಸಮ ಹೃದಯದ ನಿಗೂಢ ಸಹಜ ಕಂಪನದ ರೋಮಾಂಚ,
ಪ್ರತಿಫಲಿಸಬಲ್ಲೊಂದು ಮುಖವ. ಹಠಾತ್ತಾಗಿ
ಮೂಡಿತ್ತಲ್ಲ, ಅಗೋ ಸಭಾಮಧ್ಯದಲ್ಲಿ ಪರಮಾಪ್ತ ಮುಖ
ಮಾತಿನಾಚೆಯ ಸಹಸ್ಪಂದಿ; ಮಾತಿಲ್ಲದೆಯೆ
ಇಂಗಿತವನರಿತ ಸಹಭಾಗಿನಿಯ ಸಹಜಮುದ್ರೆ
ಯಾವ ಮುಖ ಅದು ? ಎಲ್ಲಿ ಯಾವಾಗ ಯಾವ ಭವ-
ದಲ್ಲಿ, ಲೋಕದಲ್ಲಿ, ಸಂಭಾವ್ಯತೆಯ ಯಾವ ಆಕಸ್ಮಿಕದ
ಆತ್ಮೀಯತೆಯ ಅಪ್ಯಾಯಮಾನ ಕ್ಷಣದಲ್ಲಿ
ಕಂಡದ್ದು ಅದು ?

....ಹೀಗೆ ಸಾಗುವ ಅಡಿಗರ 'ಚಿಂತಾಮಣಿಯಲ್ಲಿ ಕಂಡ ಮುಖ' ಪದ್ಯ, ಕಿರಿಯ ಕವಿಗಳ ಅನುಭೂತಿಯ ಆವರಣದಲ್ಲಿ ಅನುರಣಿಸುವುದು ಹೀಗೆ:

ಎಲ್ಲಿಂದ ಬಂದಿತೋ ಅಲ್ಲಿಗೇ ಈ ನೋಟ
ಕಳೆದುಕೊಂಡಿದ್ದನ್ನು ಮತ್ತೆ ಪಡೆಯುವ ಹೂಟ
ಬದುಕಿನುದ್ದಕ್ಕೂ ಗಳಿಸಿದ್ದನ್ನು, ಮಣ್ಣಿಂದ
ಹೀರಿದ್ದನ್ನು, ಸಾಧ್ಯವಿಶಾಲ ಚಾಚುಗಳಿಂದ
ತನ್ನ ತೆಕ್ಕೆಗೆ ಒಗ್ಗಿದ್ದನ್ನು, ಪಂಚಭೂತಗಳೆದುರು
ತ್ರಿಕಾಲಗಳ ಬೆಸೆದ ಕಾಲಕ್ಕೆ ಮುಖಾಮುಖಿಯಾಗಿ
ಒಗ್ಗೂಡಿಸುವ ಯತ್ನದಲಿ
ಕಾಣ್ಕೆ-ಕಣ್ಕಟ್ಟುಗಳ ನಡುವೆ ತೆಳುಗೆರೆ ಹರಿದು
ಆಚೆಗೆ ಚಾಚಿಕೊಳ್ಳುವ ಸಿದ್ಧಿಯಾಕಾಂಕ್ಷೆಯಲಿ
ಎದುರು ನಿಂತಿದೆ ಇಲ್ಲಿ ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥ
ಆಕಾಶಕ್ಕೆ ಲಗ್ಗೆಯಿಟ್ಟಂಥ ಪಾರಿಜಾತ

–ಇದು ಸುಬ್ರಾಯ ಚೊಕ್ಕಾಡಿಯವರ 'ಧ್ಯಾನಸ್ಥ' ಪದ್ಯದ ಕೊನೆಯ ಸಾಲುಗಳು. ಹೀಗೇ ನಾವು ಜಿ. ಎಸ್. ಶಿವರುದ್ರಪ್ಪನವರ 'ಕಂಪಿನ ಕರೆ', ತಿರುಮಲೇಶರ 'ಚಿಪ್ಪು ಪಾಲ ಮಹಾತೇರ', ಶಿವಪ್ರಕಾಶರ 'ನಾಗಾರ್ಜುನ', 'ಶಂಸ್ ತಬ್ರೀಜ್', ವೆಂಕಟೇಶ ಮೂರ್ತಿಯವರ 'ಕಾರಂಜಕೆ ಕೊಕ್ಕರೆ' ಮುಂತಾದ ಕನ್ನಡದ ಇತ್ತೀಚಿನ ಬಹುಮುಖ್ಯ ಕವನಗಳಿಂದ ಸಾಲುಗಳನ್ನು ಉಲ್ಲೇಖಿಸುತ್ತಾ ಹೋಗಬಹುದು–ಈ ಲೋಕೋತ್ತರ ತುಡಿತ ಹೇಗೆ ಇತ್ತೀಚಿನ ಕನ್ನಡ ಕಾವ್ಯದ ಮೂಲಸೆಲೆಯಾಗಿ ಕಾಣಿಸಿಕೊಳ್ಳತೊಡಗಿದೆ ಎಂಬುದರ ಉದಾಹರಣೆಗಳಾಗಿ. ಅಷ್ಟೇ ಅಲ್ಲ, ಅನುಭಾವದ ಕಡೆಗೆ ಎನ್ನಬಹುದಾದ ಈ ತುಡಿತ ಸ್ವಲ್ಪ ಕಾಲ ಬಂಡಾಯದ ಬಣ್ಣ ಬಳಿದುಕೊಂಡು ಕುಣಿದ ಸಿದ್ಧಲಿಂಗಯ್ಯ, ಚಂದ್ರಶೇಖರ ತಾಳ್ಯ, ಶಂಕರ ಕಟಗಿ ಹಾಗೂ ಚೆನ್ನಣ್ಣ ವಾಲೀಕಾರರಂತಹ ಕವಿಗಳಲ್ಲೂ ಕಾಣತೊಡಗಿರುವುದು ಮತ್ತು ಅತಿ ಇತ್ತೀಚಿನ ಕವಿಗಳೆಂದು ಗುರುತಿಸಬಹುದಾದ ಕೆ.ಬಿ. ಸಿದ್ಧಯ್ಯ, ಎಸ್. ಮಂಜುನಾಥ್, ನಜೀರ ಚಂದಾವರ, ಸವಿತಾ ನಾಗಭೂಷಣ, ವೈದೇಹಿ ಮುಂತಾದವರಲ್ಲಿ ಪ್ರಧಾನ ಪ್ರೇರಣೆಯಾಗಿ ಹೊರ ಹೊಮ್ಮುತ್ತಿರುವುದನ್ನು ನಾವು ಗಮನಿಸಬಹುದು.

ಗದ್ಯಕ್ಕೆ ಬಂದರೆ ಇದೇ ತೀವ್ರತೆ ಹಾಗೂ ವ್ಯವಧಾನಗಳನ್ನು ತೇಜಸ್ವಿ, ಜಯಂತ ಕಾಯ್ಕಿಣಿ, ರಾಘವೇಂದ್ರ ಪಾಟೀಲ ಹಾಗೂ ಆಶ್ಚರ್ಯವೆಂಬಂತೆ ಬೊಳುವಾರರ ಇತ್ತೀಚಿನ ಕಥೆಗಳಲ್ಲಿ ಮತ್ತು ಚಿತ್ತಾಲರ 'ಪುರುಷೋತ್ತಮ' ಹಾಗೂ ಮಹಾದೇವ ಅವರ 'ಕುಸುಮಬಾಲೆ'ಯಲ್ಲಿ ನೋಡಬಹುದು. ತೇಜಸ್ವಿ, ಕಾರಂತರಂತೆ ವಿಚಾರವಾದೀ ನಿಲುವುಗಳ ಮೂಲಕವೇ ಆತ್ಯಂತಿಕವೆಂದು ಕರೆಯಲಾಗುವ ಸತ್ಯ ಗಳನ್ನು ಹಿಡಿಯಲೆಣಿಸುವ ಕಲೆಗಾರ. ಅವರ 'ಕರ್ವಾಲೋ' ಹಾಗೂ 'ಚಿದಂಬರ ರಹಸ್ಯ'ಗಳಲ್ಲಿ ವಿಜ್ಞಾನ ಮತ್ತು ಧರ್ಮ ತಮ್ಮ ವಿವಿಧ ರೂಪಗಳಲ್ಲಿ ಮುಖಾಮುಖಿ ಯಾಗಿ ನಿಂತು ಕಾದಂಬರಿಯ 'ಕ್ರಿಯೆ'ಗಳಲ್ಲಿ ಬೆಂದು ಒಂದಾಗುವ ತಾರ್ಕಿಕ ರೂಪ ಗಳನ್ನು ನೋಡುತ್ತೇವೆ. ಬಹುಶಃ ಕಾದಂಬರಿಗಳ ಸ್ವರೂಪವೇ ಆಂತರಿಕವಾಗಿ ತಾರ್ಕಿಕವಾದದ್ದು. ಆದರೆ ಸಣ್ಣಕತೆಗಳಲ್ಲಿ ಹಾಗಲ್ಲ. ಉದಾಹರಣೆಗೆ ಇವರ 'ಮಾಯಾಮೃಗ', 'ಕೃಷ್ಣೇಗೌಡನ ಆನೆ' ಹಾಗೂ 'ನಾನು ಸೈಕಲ್ ಕಲಿತಿದ್ದು' ಕಥೆಗಳು ವಾಸ್ತವವನ್ನು ಹೇಳುವ ಬೆರಗಿನಲ್ಲೇ ಆತ್ಯಂತಿಕ ಸತ್ಯದ ಬೆಡಗನ್ನು ಸಾಧಿಸಿಬಿಡುತ್ತವೆ. ಈ ಕಥೆಗಳಲ್ಲಿ ಒಂದು ನಾಯಿ, ಒಂದು ಸಾಕು ಆನೆ ಹಾಗೂ ಒಂದು ಸೈಕಲ್, ಲೋಕ–ಲೋಕೋತ್ತರಗಳ ನಡುವಣ ಪಾರದರ್ಶಕ ಸೇತುವೆಗಳಂತೆ ಮೂಡಿ ನಿಲ್ಲುವುದು ತರ್ಕವನ್ನು ಮೀರಿದ ಇಂತಹ ತುಡಿತಗಳ ಮೂಲಕವೇ, ಕಾಯ್ಕಿಣಿಯವರ 'ತನ್ಮಯಿಯ ಸೂಟ', 'ದಗಡೂಪರಬ...' ಹಾಗೂ 'ಬನ್ನಿಕೃಷ್ಣನ್...', ರಾಘವೇಂದ್ರ

ಪಾಟೀಲರ 'ಕರಿ ಟೊಪಗಿ....' ಹಾಗೂ ಬೊಳುವಾರರ 'ಇಬಾದತ್' ಇಂತಹುದೇ ಧ್ವನಿಗಳನ್ನು ಮಂದ್ರಸ್ವರದಲ್ಲಿ ಹೊರಡಿಸುವ ಪ್ರಯತ್ನಗಳು.

ಯಶವಂತ ಚಿತ್ತಾಲರ 'ಪುರುಷೋತ್ತಮ', ಕಾದಂಬರಿ ರೂಪದಲ್ಲೇ ಆನುಷಂಗಿಕವಾಗಿರುವ ತಾರ್ಕಿಕತೆಯನ್ನು ಪ್ರತಿತಾರ್ಕಿಕತೆಯ ಸಹಾಯದಿಂದ ಒಡೆಯುವ ಮೂಲಕ, ಆಧುನಿಕ ಮನುಷ್ಯ 'ತ್ರಿಭಂಗಿ ನಿಲುವಲ್ಲಿ ಧ್ಯಾನಸ್ಥ-ಆಕಾಶಕ್ಕೆ ಲಗ್ಗೆಯಿಟ್ಟಂಥ ಪಾರಿಜಾತ'ವಾಗಲು ನಡೆಸುವ ಹೋರಾಟದ ವಿವರ ಹಾಗೂ ತೀವ್ರತೆಗಳೆರಡನ್ನೂ ಒಟ್ಟಿಗೆ ಬೆಸೆದುಕೊಂಡು, ಮೂಡಿನಿಂತ ಕೃತಿ. ಬದ್ಧನಾದ ಹಾಗೂ ಅದರಿಂದಾಗಿ ಅಶಾಂತನಾದ ಆಧುನಿಕ ಮನುಷ್ಯ ಬುದ್ಧನಾಗಿ ಶಾಂತನಾಗುವ ಮಹಾ ಹೋರಾಟದ ಹಾಗೂ ಮಹಾ ಪ್ರಯಾಣದ ಈ ಕಥೆ, ಈಚಿನ ಕನ್ನಡ ಸಾಹಿತ್ಯದ ಮಹಾ ಹೋರಾಟದ ಹಾಗೂ ಮಹಾ ಪ್ರಯಾಣದ ಕಥೆಯಂತೆಯೂ ಕಾಣುತ್ತದೆ! ಒಂದು ಚಲನಶೀಲ ಸಂಸ್ಕೃತಿಯ-ಇಲ್ಲಿ ಕೈಗಾರಿಕಾ ಹಾಗೂ ನಗರೀಕರಣ ಸಂಸ್ಕೃತಿ-ಇಡೀ ಬೀಸನ್ನು ಮನುಷ್ಯ ಜೀವ ತನ್ನ ಪ್ರಜ್ಞೆಯ ಅತ್ಯಂತ ಎತ್ತರಗಳಲ್ಲಿ ಕಂಡುಕೊಳ್ಳಬಹುದಾದ ಅತ್ಯಂತ ನಿರ್ಗುಣವಾದ ಮೌಲ್ಯಗಳಲ್ಲಿ ಲೀನಗೊಳಿಸಿಬಿಡುವ ಕಲಾವಂತಿಕೆ ಆ ಎತ್ತರಗಳು ಅನುಭಾವಿಕವಾದಾಗ ಮಾತ್ರ ಸಾಧ್ಯ-ಅಲ್ಲಮನ ವಚನಗಳಲ್ಲಾದಂತೆ. ಹೀಗಾಗಿ ಇಲ್ಲಿ 'ಪುರುಷೋತ್ತಮ' ಗದ್ಯದಲ್ಲಿ ಸಾಧಿಸಿರುವುದನ್ನು ಅಸಾಮಾನ್ಯವೆಂದೇ ಹೇಳಬೇಕು. ತೇಜಸ್ವಿ ತಮ್ಮ 'ಚಿದಂಬರ ರಹಸ್ಯ'ದಲ್ಲಿ ಕಥೆಗಾರಿಕೆಯ ಧಾವಂತದಿಂದಾಗಿ ಸಾಧಿಸಲಾಗದೇ ಹೋದದ್ದನ್ನು ಚಿತ್ತಾಲರು ಇಲ್ಲಿ ಸಾವಧಾನದಿಂದ ಸಾಧಿಸಿದ್ದಾರೆ. ಬರವಣಿಗೆ ಧ್ಯಾನವನ್ನು ಸಮೀಪಿಸುವುದು ಹೀಗೇ.

ಸ್ಪೆಂಗ್ಲರ್ ಎಂಬ ಇತಿಹಾಸಜ್ಞನ ಪ್ರಕಾರ ಪ್ರತಿಯೊಂದು ಸಂಸ್ಕೃತಿಗೂ ಒಂದು ಆಯುಸ್ಸಿರುತ್ತದೆ. ಆ ಆಯುಸ್ಸು ಮುಗಿಯುವ ಸ್ವಲ್ಪ ಮುನ್ನ 'ಸೆಕೆಂಡ್ ರಿಲಿಜಿಯಾಸಿಟಿ' ಎಂಬುದೊಂದನ್ನು ಸಾಧಿಸಿಕೊಂಡು, ಅದರ ಒಡಲಿಂದ-ದೀಪ ಆರುವ ಮುನ್ನ ಚೆನ್ನಾಗಿ ಉರಿದು ಆರುವಂತೆ-ಒಂದು ನಾಗರೀಕತೆಯನ್ನು ಕಟ್ಟಿ ಕುಸಿದು ಬೀಳುತ್ತದಂತೆ. ಅದರ ಪಾಳಿನಲ್ಲಿ ಹೊಸದೊಂದು ಸಂಸ್ಕೃತಿಯ ಉದಯವಾಗಬೇಕು. ಆಧುನಿಕ ಕನ್ನಡ ಸಾಹಿತ್ಯದ ಪರಂಪರೆಯನ್ನು ಒಂದು ಸಂಸ್ಕೃತಿಯಾಗಿ ಪರಿಗಣಿಸಿದರೆ ಇದರ 'ಸೆಕೆಂಡ್ ರಿಲಿಜಿಯಾಸಿಟಿ' ಈಗ ವ್ಯಕ್ತವಾಗುತ್ತಿದ್ದಂತೆ ತೋರುತ್ತದೆ. 'ಪುರುಷೋತ್ತಮ' ಇದರ ನಾಗರೀಕತೆಯ ಒಂದು ರೂಪವಾಗಿರಬಹುದು. ಹಾಗಾದರೆ ಇದರ ಪಾಳಿನಲ್ಲಿ ಹುಟ್ಟುವ ಹೊಸ ಸಂಸ್ಕೃತಿ ಎಂತಹದಿರಬಹುದು ?

ಈ ಪ್ರಶ್ನೆಗೆ ಉತ್ತರವನ್ನು ಊಹಿಸಿಕೊಂಡಾಗಲೆಲ್ಲಾ ನನಗೆ 'ಕುಸುಮಬಾಲೆ' ನೆನಪಿಗೆ ಬರುತ್ತದೆ. ಈಗಾಗಲೇ ಕನ್ನಡ ಓದುಗರನ್ನು 'ಅರ್ಥವಾಗದ ಮಹಾಕೃತಿ'

ಯಾಗಿ ಕಾಡಿರುವ 'ಕುಸುಮ ಬಾಲೆ' ಐದಾರು ಓದುಗಳ ನಂತರ ನನಗೆ ಬರವಣಿಗೆಯ ಹೊಸ ಸಂಸ್ಕೃತಿಯ ತೊದಲ್ನುಡಿಯಂತೆ ಕೇಳಿಸುತ್ತಿದೆ.

ಇದು ಮಾದರಿಗಳು, ಮೌಲ್ಯಗಳು ಹಾಗೂ ಮಾರ್ಗಗಳು ಪಲ್ಲಟಗೊಳ್ಳುತ್ತಿರುವ ಕಾಲ. ನಲ್ವತ್ತು ವರ್ಷಗಳ ಹಿಂದೆಯೂ—ಅಂದರೆ ನಮಗೆ ಸ್ವಾತಂತ್ರ್ಯ ಬಂದಾಗಲೂ ಹೀಗೇ ಆಗಿತ್ತು. ಜಾತಿ ಪದ್ಧತಿ, ಜಮೀನುದಾರಿಕೆ ಹಾಗೂ ಮಿತಿಗಳುಳ್ಳ ಬದುಕಿನ ಕ್ರಮವನ್ನು ಪ್ರಜಾಪ್ರಭುತ್ವ ಹುಟ್ಟುಹಾಕಿದ ಕನಸುಗಳು ಅಲ್ಲಾಡಿಸಿದವು. ಈವರೆಗಿನ ಆಧುನಿಕ ಕನ್ನಡ ಸಾಹಿತ್ಯ ಹೊಡೆದಾಡಿರುವುದು ಈ ಕನಸುಗಳೊಂದಿಗೇ. ಇನ್ನಷ್ಟು ವಿವರವಾಗಿ ಹೇಳುವುದಾದರೆ, ಆಧುನಿಕ ಕನ್ನಡ ಸಾಹಿತ್ಯ ಭಾರತೀಯ ಪ್ರಜಾಪ್ರಭುತ್ವದ ಆಶೋತ್ತರಗಳನ್ನೇ ತನ್ನ ಕೇಂದ್ರ ಕಳಕಳಿಯನ್ನಾಗಿಟ್ಟುಕೊಂಡು, ಅದರ ಆದರ್ಶ-ವಿರೋಧಾಭಾಸಗಳು ಹಾಗೂ ವೈಫಲ್ಯ-ಹತಾಶೆಗಳನ್ನೇ ತನ್ನ ವಿವಿಧ ಸ್ತರದ ಅನುಭವ ಹಾಗೂ ಗ್ರಹಿಕೆಗಳ ಮೂಲಕ ಪ್ರತಿಫಲಿಸುತ್ತಾ ಒಂದು ಸಾಹಿತ್ಯ ಸಂಸ್ಕೃತಿಯನ್ನು ನಿರ್ಮಿಸಿ, ಅದರ ವಿಮರ್ಶೆಗೆ ತಕ್ಕುದಾದ ಪರಿಕರಗಳನ್ನು ಆ ತನ್ನ ಒಡಲಿನಿಂದಲೇ ಪಡೆದುಕೊಂಡಿತ್ತು. ಅಂತರಂಗದ ಶೋಧನೆ, ಅನುಭವದ ಸಂಕೀರ್ಣತೆ, ಬಂಧದ ಸಾವಯವ ಸಮಗ್ರೀಕರಣ, ಸಾಮಾಜಿಕ ಕಳಕಳಿ, ಖಿನ್ನ ಕಾವ್ಯ—ಈ ಎಲ್ಲ ಪರಿಕಲ್ಪನೆಗಳೂ ಪ್ರಜಾಪ್ರಭುತ್ವ ದಯಪಾಲಿಸುವ ಅನೇಕ ಸ್ತರಗಳ ಸ್ವಾತಂತ್ರ್ಯದ ಹಾಗೂ ನಿಷೇಧದ ಅನ್ವೇಷಣಾ ಪರಿಕರಗಳಷ್ಟೇ. ಸಾಂಪ್ರದಾಯಿಕ ಅಥವಾ ಮಧ್ಯಕಾಲೀನ ನಂಬುಗೆಗಳನ್ನೇ ತನ್ನ ಅಂತರಂಗದಲ್ಲಿಟ್ಟುಕೊಂಡು ಬಹಿರಂಗವಾಗಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸ್ವೀಕರಿಸುವ ವಿರೋಧಾಭಾಸದ ಹಾಗೂ ಸಂಘರ್ಷದ ಸಂದರ್ಭದಲ್ಲಿ ಹುಟ್ಟಿದ ಈ ಗ್ರಹಿಕೆಗಳು ಸಂಕೀರ್ಣತೆ, ಒಳಶೋಧನೆ, ಸಮಗ್ರೀಕರಣ, ಸಾಮಾಜಿಕತೆಗಳ ಬಗ್ಗೆ ಎಷ್ಟೇ ಮಾತಾಡಿದರೂ ಅವಕ್ಕೆ ಈ ವಿರೋಧಾಭಾಸ ಹಾಗೂ ಸಂಘರ್ಷದ ಎಲ್ಲ ಪರಿಮಿತಿಗಳೂ ಇದ್ದವು ಎಂಬುದನ್ನು ನವ್ಯ-ಬಂಡಾಯಗಳ ಸೋಲು-ಗೆಲುವುಗಳ ನೆಲೆಗಳನ್ನು ಬಲ್ಲವರಿಗೆ ವಿವರಿಸಿ ಹೇಳಬೇಕಾಗಿಲ್ಲ. ಈವರೆಗಿನ ನಮ್ಮ ಸಾಮಾಜಿಕ-ರಾಜಕೀಯ ಪ್ರಕ್ರಿಯೆಗಳಂತೆಯೇ ಈ ಸಾಹಿತ್ಯಕ ಪರಿಕರಗಳು ಕೂಡಾ ಈ ವಿರೋಧಾಭಾಸ ಹಾಗೂ ಸಂಘರ್ಷಗಳನ್ನು ಮೀರಿ ಅಥವಾ ಸಂಪೂರ್ಣವಾಗಿ ಅರಗಿಸಿಕೊಂಡು ಶುಭದಾಯಕ ಎನ್ನಿಸುವ ಒಂದು ನೆಲೆಯನ್ನು ತಲುಪಲು ವಿಫಲವಾದವು. ಇದು ಒಂದು ಬರವಣಿಗೆ ಸಂಸ್ಕೃತಿ ಮುಟ್ಟಬಹುದಾದ dead-end. 'ತಾ ಕಳ್ಳ ಪರರ ನಂಬ'ದ ಈ ಸಂಸ್ಕೃತಿಯ ಶಬ್ದ-ವ್ಯಾಕರಣಗಳೂ ಜಡತೆಯನ್ನು ಮುಟ್ಟಿದಂತಹ ಬಿಕ್ಕಟ್ಟು ಇದು. ಆದರೆ 'ಕುಸುಮಬಾಲೆ' ಈ ಬಿಕ್ಕಟ್ಟಿಗೆ ಒಂದು ಉತ್ತರವೆಂಬಂತೆ ನಮ್ಮ ಮುಂದೆ ನಿಂತಿದೆ. ನಾನು ಈ ಮೊದಲು ಪ್ರಸ್ತಾಪಿಸಿದ ಕನ್ನಡ ಸಾಹಿತ್ಯದ ಇತ್ತೀಚಿನ ಪ್ರಮುಖ ಕೃತಿಗಳ ಒಲವುಗಳು ಈ ಕೃತಿಯಲ್ಲಿ ಜನ್ಮಾಂತರಗೊಂಡಂತೆ

ಹೊಚ್ಚ ಹೊಸ ರೂಪ-ಲಯಗಳೊಂದಿಗೆ ಮೈದಾಳಿವೆ. ಈ ಅರ್ಥದಲ್ಲಿ ಈ ಕೃತಿ ಬರವಣಿಗೆಯ ಹೊಸ ಸಂಸ್ಕೃತಿಯ ತೊದಲ್ನುಡಿ. ತೊದಲ್ನುಡಿ ಏಕೆಂದರೆ ಈ ಕೃತಿ ತನ್ನ ಸಂಪೂರ್ಣ ಅರ್ಥವನ್ನು ಇನ್ನೂ ಬಿಟ್ಟುಕೊಡಬೇಕಾಗಿದೆ–ಬಹುಶಃ ಇದೇ ಪರಂಪರೆಯಲ್ಲಿ ಬರಬಹುದಾದ ಇನ್ನಿತರ ಕೃತಿಗಳ ಮೂಲಕ.

ಮೂಲಭೂತವಾಗಿ ಯಾರ ಪುರುಷಾರ್ಥಕ್ಕಾಗಿ ಪ್ರಜಾಪ್ರಭುತ್ವ ಒಂದು ಮೌಲ್ಯವಾಗಿ ಪವಿತ್ರವೆನಿಸಿತೋ ಆ ದಲಿತರ ಒಂದು ಶ್ರೇಷ್ಠ ಸೃಜನಶೀಲ ಮನಸ್ಸೇ, ಪ್ರಜಾಪ್ರಭುತ್ವ ಪ್ರಯೋಗದಲ್ಲಿನ ಸಂಘರ್ಷ ವಿರೋಧಾಭಾಸಗಳನ್ನು ಗೆದ್ದುಕೊಳ್ಳುವ ಬಗೆಯೇ ಈ ಕೃತಿಯ ಒಂದು (ಸಾಹಿತ್ಯ ಇತಿಹಾಸದ) ಹಂತದ ಯಶಸ್ಸಾದರೆ, ಇದು ಕೇವಲ ದಲಿತರ ಕಥೆಯಾಗದೆ ದಲಿತರ ಮೂಲಕ ಕಂಡುಕೊಂಡ ಎಲ್ಲರ ಕತೆಯಾಗುವುದು ಇನ್ನೊಂದು ಹಂತದ ಯಶಸ್ಸು. ಬಸಪ್ಪಸೋಮಿ, ಸಿದ್ಧೂಧರರ ಮಧ್ಯಯುಗೀನತೆ, ಅಕ್ಕಮಾದೇವಮ್ಮನ ಯುಗಾತೀತ ತಾಯ್ತನ, ಯಾಡನ ಬೂದಿಮುಚ್ಚಿದ ಕೆಂಡದಂತಹ ಛಲ, ಅಮಾಸನ ನಿಗೂಢತೆ, ಸೋಮಪ್ಪನ ದಿಗ್ಭ್ರಮೆ, ಕುಸುಮಾಳ ವಿಷಾದ, ಮಧ್ವಾಚಾರ್ಯರ ಬಡ ಬಿಗುಮಾನ, ಗಾರೆ ಸಿದ್ಮಾವನ ಜೀವನ ಪ್ರೀತಿ, ಈರಿಯ ನೋವು, ಆಕೆಯ ಮಗನ ರೋಗ. ತೂರಮ್ಮನ ಮಂತ್ರ, ದಲಿತ ಸಂಘರ್ಷ ಸಮಿತಿಯ ಅರೆ ಗಂಭೀರ–ಅರೆ ತಮಾಷೆಯ ಮೆರವಣಿಗೆ–ಈ ಎಲ್ಲವೂ ಇಲ್ಲಿ ಒಂದಕ್ಕೊಂದು ಸಂಬಂಧ ಕಲ್ಪಿಸಿಕೊಳ್ಳುವುದು ದಲಿತ ಹುಡುಗ ಚೆನ್ನನು ತಾನು ಮಾಗದೆ, ಪ್ರಜಾಪ್ರಭುತ್ವದ ಮೂಲಕ ಮಾಗಿದ ಹಣ್ಣನ್ನು ಪಡೆಯಲು ಹೋಗಿ ತಾನೇ ಇಲ್ಲವಾದ ದುರಂತದಲ್ಲಿ. ಆದರೆ ಈ ಕೃತಿ ಇದನ್ನು ಬರೀ ದುರಂತವಾಗಿ ಗ್ರಹಿಸುವುದಿಲ್ಲ. ಆದರೆ ಅದನ್ನು ದುರಂತವಾಗಷ್ಟೇ ಕೊನೆಗಾಣಲು ಬಿಡುವುದಿಲ್ಲ. ಹೊಸ ಭರವಸೆಯಲ್ಲಿ ಈ ದುರಂತ ತನ್ನ ಅರ್ಥಪೂರ್ಣತೆಯನ್ನು ಕಂಡುಕೊಳ್ಳುತ್ತದೆ. ಚೆನ್ನನ ಬರುವಿಕೆಗಾಗಿ, ಬದುಕಿನಲ್ಲಿ ಗಾಢ ನಂಬಿಕೆಯಿಟ್ಟು ಕಾಯುತ್ತಲೇ ಇರುವ ಅವನ ತಂದೆ ತಾಯಿಗಳ ಈ ಸಂಭಾಷಣೆಯೊಂದಿಗೆ ಕಾದಂಬರಿಯ ನಾಟಕ ಮುಗಿಯುತ್ತದೆ:

"ನಮ್ಮ ಆ ಕ್ರಿಯಾ ಒಂದು ಸುದ್ದ ಇದ್ರ ಒಂದಲ್ಲ ಒಂಜಿನ ಅವ್ನೇ ಬತ್ತನ ಕನಾ. ಸಾಸ್ತ್ರ ಹೇಳವ್ನ ರೂಪ್ದಲಿ ಬರಬೌದು....ದಾಸಯ್ಯನ ರೂಪ್ದಲಿ ಬರಬೌದೂ ....ಮಾಟ ಮಂತ್ರದವನ ರೂಪ್ದಲಿ ಬರಬೌದು,...."

"ಯಾವ ರೂಪ್ದಲಿ ಆಗ್ಲಿಕನಾ...ಯಾವತ್ತಾದರೂ ಬಂದಾನಾ....?"

"ಬರ್ದೆ ? ಸಂಬಂಜ ಅನ್ನೋದು ದೊಡ್ಡದು ಕನಾ...,"

ಕ್ರಿಯೆಯಲ್ಲಿ ಶುದ್ಧಿ ಹಾಗೂ ಸಂಬಂಧಗಳಲ್ಲಿ ನಂಬಿಕೆ–ಇವೆರಡೇ ಬದುಕಿನ ಎಲ್ಲ ಪ್ರಯತ್ನಗಳನ್ನೂ ಅರ್ಥಪೂರ್ಣಗೊಳಿಸುವ ಶಕ್ತಿಗಳು ; ಇವುಗಳಾಚೆಗೆ ಎಲ್ಲವೂ

ಮಂಜು ಎಂಬ ಸತ್ಯದ ಕಡೆ ತುಡಿಯುವ ಈ ಕೃತಿ, ಬದುಕಿನ ಈ ಎಲ್ಲ ಪ್ರಯತ್ನಗಳನ್ನೂ ಆಯಾ ಪ್ರಯತ್ನಗಳ ಭಾವ-ಬಣ್ಣಗಳೊಂದಿಗೇ ನಾಟ್ಯೀಕರಿಸಿದೆ.

ಆಧುನಿಕ ಜೀವನ ಹಾಗೂ ಆಧುನಿಕ ಕನ್ನಡ ಸಾಹಿತ್ಯ ನಂಬಿರುವ ಆಂತರಿಕ ತರ್ಕವನ್ನೇ ಮರೆತಂತೆ ತೋರುವ ಈ ಕೃತಿ ಸಹಜವಾಗಿಯೇ ಈ ತರ್ಕದ ಉತ್ಪನ್ನಗಳಂತಿರುವ ಸರಿ-ತಪ್ಪುಗಳ, ಇತಿಹಾಸ-ವರ್ತಮಾನಗಳ, ವಸ್ತು-ಶಕ್ತಿಗಳ, ಗದ್ಯ-ಪದ್ಯಗಳ, ಆಡುಮಾತು-ಗ್ರಂಥಮಾತುಗಳ, ಶಬ್ದ-ಮೌನಗಳ, ಜಾನಪದ-ಶಾಸ್ತ್ರೀಯ ಶೈಲಿಗಳ ಭೇದಗಳನ್ನೇ ಅಳಿಸಿಕೊಂಡು ಹೋಗುತ್ತಾ ಎಲ್ಲವನ್ನೂ ಒಂದಾಗಿ ಕಾಣುವ ತರ್ಕಾತೀತ ನೋಟದಲ್ಲಿ ನೆಲೆಗೊಳ್ಳುತ್ತದೆ. ಈವರೆಗಿನ ಆಧುನಿಕ ಕನ್ನಡ ಬರವಣಿಗೆಯ ಸಂಸ್ಕೃತಿಗೆ ಸಾರಾಸಗಟಾದ ಪ್ರತಿಕ್ರಿಯೆಯೆಂಬಂತೆ ಬರೆಯಲ್ಪಟ್ಟಿರುವ ಈ ಕೃತಿ ಆಧುನಿಕ ಜೀವನದ ತತ್ತ್ವಮೀಮಾಂಸೆ ಹಾಗೂ ಹೋರಾಟಗಳ ವ್ಯಾಕರಣದ ಅಸಂಗತತೆಯನ್ನು ತಮಾಷೆಯಾಗಿ ನೋಡುತ್ತಾ, ಮನುಷ್ಯ ಚೇತನ ಈ ತತ್ತ್ವ-ವ್ಯಾಕರಣಗಳನ್ನು ಮೀರಿದ ನೆಲೆಯಲ್ಲಿ ತನ್ನ ಸಾಂಗತ್ಯವನ್ನು ಪಡೆದುಕೊಂಡಿರುವ ಕಡೆ ಬೊಟ್ಟು ಮಾಡುತ್ತದೆ. ಇದಕ್ಕಾಗಿ ಕೃತಿ ಕನ್ನಡ ಜನಪದ ಪ್ರಜ್ಞೆಯ ಸುಪ್ತದಲ್ಲಿ ಮಲಗಿರುವ ಲಯಗಳನ್ನೂ ಮೌನಗಳನ್ನೂ ಎಬ್ಬಿಸುತ್ತದೆ. ಈ ವಿಚಿತ್ರ ಮೌನ-ಲಯಗಳ ಮೂಲಕ ಕಾಲದ ಕಳ್ಳ ಹೆಜ್ಜೆಗಳನ್ನು ಗುರುತಿಸುವ ಶಕ್ತಿ ಪಡೆದುಕೊಳ್ಳುತ್ತದೆ. ಲೋಕದ ಬಗೆಗಿನ ಅವಿರತವಾದ ಪ್ರೀತಿಯಿಂದ ಮಾತ್ರ ಹುಟ್ಟಬಹುದಾದ ಈ ಶಕ್ತಿ ತನ್ನ ಸಾವಧಾನ ಗತಿಯಲ್ಲಿ ಎಲ್ಲವನ್ನೂ ಮುಟ್ಟುತ್ತ ಸಾಯುತ್ತಿರುವ ಬದುಕಿಗೆ ಜೀವದಾನ ಮಾಡುತ್ತದೆ-ಇತಿಹಾಸ-ವರ್ತಮಾನಗಳ ಕಳ್ಳಗಂಟುಗಳು ತಂತಾನೇ ಬಿಚ್ಚಿಕೊಂಡು ಬದುಕು ಬಯಲಾಗುತ್ತದೆ: ಆಲಯವಾಗಲು ಹಂಬಲಿಸುತ್ತದೆ. ಲೋಕ ಬರೀ 'ಲೋಕ'ದಲ್ಲಿಲ್ಲ ಎಂಬ ಅರಿವನ್ನು ಲೋಕವ್ಯವಹಾರಗಳ ಮೂಲಕವೇ ಮಂಡಿಸಲು ಯತ್ನಿಸುವ ಈ ಕೃತಿ, ಬದುಕಿನ ಜೀವಜಲಕ್ಕಾಗಿ ಮನುಷ್ಯ ಗಾಳಿಯಲ್ಲಿ ಸುರಿಯುವ ಸಕ್ಕರೆಗೆ ಸರಿಯಾಗಿ ಬಾಯೊಡ್ಡಿ ನಿಲ್ಲುವ ಹೊಲೆಗೇರಿಯ ಆ ಹೈಕಳಿನಂತೆ ಧ್ಯಾನಸ್ಥನಾಗಬೇಕು; ಲೋಕೋತ್ತರನಾಗಬೇಕು ಎಂದು ಧ್ವನಿಸುತ್ತದೆ. ಆದರೆ ಈ ಧ್ವನಿ ಅಪಾರ್ಥದಲ್ಲಿ, ಅಸ್ಪಷ್ಟ ತರಂಗಗಳಲ್ಲಿ ನಮ್ಮನ್ನು ಮುಟ್ಟುತ್ತಿರುವುದಕ್ಕೆ ಈ ಕೃತಿಯ ಕೃತಕ ಹೊರರೂಪವೇ ಕಾರಣವಿರಬಹುದು.

'ಕುಸುಮಬಾಲೆ' ಮೂಲತಃ ಒಂದು ಆಧುನಿಕ ತತ್ತ್ವಪದ. ತತ್ತ್ವಪದದಂತೆಯೇ ಅದನ್ನು ಆಲಿಸಬೇಕು. ಆಗಮಾತ್ರ ಅದರ ಅರ್ಥ ಮತ್ತು ಮಿತಿಗಳು ಹೊಳೆಯುತ್ತವೆ. ಕಾದಂಬರೀ ರೂಪವಾಗಿ ಈ ಕೃತಿ ಪ್ರಸ್ತುತಗೊಂಡಿರುವುದೇ ಇದು 'ಅರ್ಥವಾಗದ ಮಹಾಕೃತಿ'ಯೆಂದು ಹೆಸರಾಗಲು ಕಾರಣವೆಂದು ತೋರುತ್ತದೆ.

ಲಿಖಿತ ರೂಪಕ್ಕೆ ಒಗ್ಗದ, ಓದಿನ ತರ್ಕಕ್ಕೆ ಸಿಗದ ಈ ಕೃತಿ ಅಧ್ಯಾಯಗಳಲ್ಲಿ ಒಡೆದು ಕಾದಂಬರಿಯಾಗಲು ಹೆಣಗಿ ಸೋಲುತ್ತದೆ. ಇದರಿಂದಾಗಿ ಅದು ತತ್ತ್ವಪದವಾಗಿಯೂ ತನ್ನ ಪೂರ್ಣ ರೂಪ ಪಡೆಯದೆ, ತನ್ನ ಐಕ್ಯತೆಯನ್ನು ಕಳೆದುಕೊಂಡಿದೆ. ರೂಪದ ಈ ಬಿಕ್ಕಟ್ಟು ನಮ್ಮ ಸಮಕಾಲೀನ ಸಾಹಿತ್ಯ ಸಂದರ್ಭದ, ಹಾಗೇ ಸಮಕಾಲೀನ ಜೀವನದ ಬಿಕ್ಕಟ್ಟು ಕೂಡಾ ಹೌದು. ಪ್ರಜಾಪ್ರಭುತ್ವವನ್ನು ವಿಚಾರದಿಂದ ಅಧ್ಯಾತ್ಮಿಕಗೊಳಿಸುವ ಬಿಕ್ಕಟ್ಟು. ಪ್ರಜಾಪ್ರಭುತ್ವವನ್ನು ವಿರೋಧಾಭಾಸ ಹಾಗೂ ಸಂಘರ್ಷಗಳಿಂದ ಪಾರುಮಾಡುವ ಬಿಕ್ಕಟ್ಟು. ಈ ಬಿಕ್ಕಟ್ಟಿನಲ್ಲಿ ಹುಟ್ಟಿರುವ 'ಕುಸುಮಬಾಲೆ' ಏನನ್ನೋ ಹೊಸದಾಗಿ ಹೇಳಲು ಯತ್ನಿಸುತ್ತಿರುವಂತಿದೆ. ಅದರ ಈ ತೊದಲ್ನುಡಿಯನ್ನು ನಾವೆಲ್ಲಾ ಕೊಂಚ ಸಹನೆ–ಪ್ರೀತಿಗಳಿಂದ ಕೇಳೋಣ.

ಟಿಪ್ಪಣಿ: ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳನ್ನು ಗುರುತಿಸುವ ಕೆಲಸವನ್ನಷ್ಟೇ ನಾನು ಇಲ್ಲಿ ಮಾಡಿರುವುದು, ಈ ಒಲವುಗಳನ್ನು ಪ್ರಕಟಪಡಿಸದೇ ಸಾಹಿತ್ಯ ಕೃತಿಯೊಂದು ಶ್ರೇಷ್ಠವೆನ್ನಿಸಿಕೊಳ್ಳಲಾರದೆಂಬ ಮೌಲ್ಯ ನಿರ್ಣಯದ ಕೆಲಸವನ್ನು ನಾನು ಮಾಡಿಲ್ಲ. ●

ಕುಸುಮಬಾಲೆ: ದಲಿತರ ನೇಣುಗಂಬ

ಕರ್ನಾಟಕದಲ್ಲಿ ಯಾರಿಗೂ ಅರ್ಥವಾಗದ 'ಕುಸುಮಬಾಲೆ' ನನಗೆ ಅರ್ಥವಾಗಿದೆ. ಕಾವ್ಯಾತ್ಮಕ ಲಾಲಿತ್ಯದಿಂದ ಕೂಡಿದ ಆ ಕಾದಂಬರಿ ದಲಿತ ಮತ್ತು ದಲಿತ ಸಂಸ್ಕೃತಿಯ ವಿರೋಧಿಯಾಗಿದೆ. ಇತಿಹಾಸದ ಇತರ ಕತೆಯಾಗಬಹುದಾಗಿದ್ದ 'ಕುಸುಮಬಾಲೆ' ಸದ್ಯಕ್ಕೆ ಉಳ್ಳವರ ಮೇಲುವರ್ಗದವರ ಆತ್ಮಚರಿತ್ರೆಯಾಗಿದೆ. ಆ ಕತೆಯ ಒಡಲಿನಂತ ಆ ಕಲಾತ್ಮಕ ಚೆಲುವಿನ ಭಾಷೆಯನ್ನು ತೆಗೆದುಬಿಟ್ಟರೆ ಅದು ದಲಿತರ ನೇಣುಗಂಬದಂತೆ ಕಾಣಿಸುತ್ತದೆ.

...ದಲಿತ ವಿರೋಧಿಯಾದ ಸರ್ಕಾರ, ದಲಿತರ ಕೊಲೆಯನ್ನು ಬಯಸುವ ಸರ್ಕಾರ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಳು ದಲಿತ ವಿರೋಧಿಗಳಾಗಿರುವುದರಿಂದ ದಲಿತ ವಿರೋಧಿ ಕತೆಯನ್ನು ಪುರಸ್ಕರಿಸಿವೆ. ಈ ಗೌರವ ದಲಿತರಿಗೆ ಗೌರವವಲ್ಲ. ಬದಲಿಗೆ ಅಗೌರವವೆಂದೇ ನನ್ನ ಭಾವನೆ.

—**ಮುಳ್ಳೂರು ನಾಗರಾಜ**
ಸಂಕ್ರಮಣ–೨೨೪ರಲ್ಲಿ

ಕಥೆ

ಮಂದಿರ-ಮಸೀದಿ....

ಮೂಲ: ಪ್ರೇಮಚಂದ್

ಕನ್ನಡಕ್ಕೆ: ರಾಘವೇಂದ್ರ ಪಾಟೀಲ

ಇಶ್ರತ್‌ಅಲಿ ಚೌಧರಿಯವರು ಜಿಲ್ಲೆಯಲ್ಲಿಯೇ ದೊಡ್ಡ ಜಮೀನುದಾರರು. ಇವರ ಪೂರ್ವಿಕರು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದ ಸೇವೆಗಾಗಿ ದೊರೆತ ಜಹಗೀರು ಇವರ ಕಾಲದಲ್ಲಿ ತುಂಬ ಊರ್ಜಿತವಾಗಿತ್ತು. ಇದೇ ಜಿಲ್ಲೆಯಲ್ಲಿ ಚೌಧರಿಯವರು ಸಂಪನ್ನರಾದ. ಅತ್ಯಂತ ಮುಖ್ಯರಾದ ವ್ಯಕ್ತಿ ಎನ್ನಿಸಿಕೊಂಡಿದ್ದರು. ಚೌಧರಿಯವರ ಪ್ರದೇಶದ ಖಾನೇಸುಮಾರಿಗೆ ಬಂದ ಯಾವುದೇ ಬ್ರಿಟಿಷ್ ಅಧಿಕಾರಿಯು ಇವರ ಮನೆಗೆ ಬಂದು ಭೆಟ್ಟಿಯಾಗುವುದನ್ನು ಮರೆಯುತ್ತಿರಲಿಲ್ಲ. ಆದರೆ ಇವರು ಮಾತ್ರ ಎಂದೂ ಯಾವ ಅಧಿಕಾರಿಯನ್ನೂ ಭೆಟ್ಟಿಯಾಗಲು ಹೋಗುವವರಲ್ಲ. ಕಮಿಷನರ್ ಸಾಹೇಬರೇ ಬರಲಿ ಇವರು ಅವರನ್ನು ಭೆಟ್ಟಿಯಾಗಲು ಹೋಗುವವರಲ್ಲ. ಅವರು ಕೋರ್ಟು ಕಚೇರಿಗಳಿಗೆ ಹೋಗಲೇಬಾರದಾಗಿ ಆಣೆಇಟ್ಟುಕೊಂಡವರಂತೆ ಆಡುವರು.. ಅಧಿಕಾರಿಗಳ ಮುಂದೆ ತಲೆಬಗ್ಗಿಸಿ ಕೈಜೋಡಿಸಿಕೊಂಡು ನಿಂತು ಅವರು ಹೇಳಿದ್ದಕ್ಕೆಲ್ಲ ಜೀ ಹುಜೂರ್....ಅಂತನ್ನುವುದು ಇವರಿಗೆ ಹೊಂದದ ಸಂಗತಿಯಾಗಿತ್ತು. ಸಾಧ್ಯವಾದಷ್ಟು ಮಟ್ಟಿಗೆ ಅವರು ಕಾಯ್ದೆ ಕಾನೂನುಗಳ ಗೊಂದಲಕ್ಕೆ ಸಿಕ್ಕಿಹಾಕಿಕೊಳ್ಳದಂತೆ ನೋಡಿಕೊಳ್ಳುತ್ತಿದ್ದರು. ತಮಗೆ ಹಣಕಾಸಿನ ಲುಕ್ಸಾನು ಆದರೂ ಸರಿ. ಆದರೆ ಇಂಥದರ ಗದ್ದಲ ಬೇಡವೆನ್ನುವುದು ಅವರ ಭಾವನೆಯಾಗಿತ್ತು. ತಮ್ಮ ಭೂಮಿ, ಆಸ್ತಿಗಳ ಮೇಲ್ವಿಚಾರಣೆಗೆ ಜೇಲೀಫರನ್ನು ನೇಮಿಸಿದ್ದರು. ಅವರು ದುಡ್ಡುಕಾಸಿನ ಲೆಕ್ಕಾಚಾರವನ್ನು ಪ್ರಾಮಾಣಿಕವಾಗಿ ಇಡುತ್ತಿದ್ದರೇ ಇಲ್ಲವೇ ಅನ್ನುವುದು ಬೇರೆ ಮಾತು. ಆದರೆ ಎಲ್ಲ ಕಾರುಬಾರು ಅವರದೇ.

ಚೌಧರಿಯವರು ಪರ್ಶಿಯನ್ ಮತ್ತು ಅರಬೀ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದರು. ಮುಸ್ಲಿಂ ವೈಯಕ್ತಿಕ ನಿಯಮಗಳಾದ 'ಶರಾ'ದ ನಿಷ್ಠ ಅನುಯಾಯಿಗಳು. ಸಾಲಕ್ಕೆ ಬಡ್ಡಿ ತಕ್ಕೊಳ್ಳುವುದು ಪಾಪವೆಂಬ ನಂಬಿಕೆಯವರು. ದಿನಕ್ಕೆ ಐದು ಸಲ ನಮಾಜು ಮಾಡುವವರು. ರಮಜಾನ್ ತಿಂಗಳು ಉಪವಾಸವಿರುವವರು ಮತ್ತು

ನಿತ್ಯ ಕುರಾನಿನ ಪಠಣ ಮಾಡುವವರು. ಇಂಥ ನಿಷ್ಠ ಧಾರ್ಮಿಕ ದೃಷ್ಟಿಕೋನ ಹೊಂದಿದವರಾದರೂ ಚೌಧರಿಯುವರು ಸಂಕುಚಿತ ಮನಸ್ಸಿನ ಸನಾತನಿಯೇನೂ ಆಗಿರಲಿಲ್ಲ. ಪ್ರಾತಃಸಮಯದಲ್ಲಿ ಪವಿತ್ರವಾದ ಗಂಗೆಯಲ್ಲಿ ಸ್ನಾನಮಾಡುವುದು ಅವರ ನಿತ್ಯರೂಢಿಯಾಗಿತ್ತು. ಚಳಿ ಮಳೆ ಏನೇ ಇದ್ದರೂ ಚೌಧರಿಯುವರು ಮಾತ್ರ ಎರಡು ಮೈಲಿ ನಡೆದು ಗಂಗೆಗೆ ಹೋಗುವುದನ್ನು ಮಾತ್ರ ತಪ್ಪಿಸುವವರಲ್ಲ. ಅಲ್ಲಿಂದ ವಾಪಸಾಗುವಾಗ ಅವರು ಬೆಳ್ಳಿಯ ಬಿಂದಿಗೆಯಲ್ಲಿ ಗಂಗೆಯ ಪವಿತ್ರಜಲವನ್ನು ತುಂಬಿ ತಂದಿಟ್ಟುಕೊಂಡು ಇಡೀ ದಿನ ಆ ಪವಿತ್ರ ಜಲವನ್ನೇ ಕುಡಿಯುತ್ತಿದ್ದರು. ಹಿಂದೂ ಸಾಧು ಸಂತರಿಗೆ ಗಂಗೆಯ ಬಗ್ಗೆ ಇರುವ ಭಕ್ತಿಗಿಂತ ಚೌಧರಿಯುವರದು ಕಡಿಮೆ ಯಾಗಿರಲಿಲ್ಲ.

ಪ್ರತಿ ವಾರವಾರವೂ ಚೌಧರಿಯುವರ ಇಡೀ ಮನೆಯನ್ನು ಆಕಳ ಸಗಣಿಯಿಂದ ಸಾರಿಸುತ್ತಿದ್ದರು. ಅವರ ಧರ್ಮನಿರಪೇಕ್ಷತೆ ಅನ್ನುವುದು ಇಷ್ಟೇಅಲ್ಲ. ಅವರ ಬಗೀಚದಲ್ಲಿ ಇಡೀ ವರ್ಷಕಾಲವೂ ಒಬ್ಬ ಹಿಂದೂ ಪಂಡಿತನು ಧರ್ಮಗ್ರಂಥಗಳ ಪಠಣ ಮಾಡುತ್ತಿದ್ದನು. ಅವರು ಸಾಧು ಸಂತರಿಗೆ ಭಕ್ತಿಪೂರ್ವಕವಾಗಿ ನೀಡುವ ಆತಿಥ್ಯ ಹಿಂದಿನ ಕಾಲದ ರಾಜ ಮಹಾರಾಜರು ಋಷಿ ಮುನಿಗಳಿಗೆ ನೀಡುತ್ತಿದ್ದ ಆತಿಥ್ಯಕ್ಕಿಂತ ಯಾವ ದೃಷ್ಟಿಯಿಂದಲೂ ಕಡಿಮೆ ಎಂದು ಹೇಳಲು ಆಗುತ್ತಿರಲಿಲ್ಲ. ಒಂದು ಮಾತಿನಲ್ಲಿ ಹೇಳಿ ಮುಗಿಸುವುದಾದರೆ ಚೌಧರಿಯುವರ ಮನೆಯ ಬಾಗಿಲು ಎಲ್ಲ ಮತಗಳ ಸಾಧು ಸಂತರಿಗೆ ಸದಾ ತೆರೆದಿರುತ್ತಿತ್ತು.

ಮುಸ್ಲಿಂ ಫಕೀರರಿಗೆ ಅವರ ಮನೆಯ ಪಾಕಶಾಲೆಯಲ್ಲಿಯೇ ಅಡಿಗೆ. ದಿನಾಲು ನೂರಾರು ಮುಸ್ಲಿಂರ ಸಹಭೋಜನ ಅಲ್ಲಿ ನಡೆಯುತ್ತಿತ್ತು. ಇಷ್ಟೆಲ್ಲ ದುಂದು ಎನ್ನಿಸುವಂತಹ ಪರೋಪಕಾರ ಚಟುವಟಿಕೆಗಳಿದ್ದರೂ ಚೌಧರಿಯುವರು ಮಾತ್ರ ಒಂದು ಕವಡೆಯಷ್ಟು ಕೂಡ ಸಾಲ ಮಾಡಿರಲಿಲ್ಲ. ದೇವರ ದಯದಿಂದ ಅವರ ಸಂಪತ್ತು ದಿನಗಳು ಕಳೆದಂತೆ ವರ್ಧಿಸುತ್ತಲೇ ನಡೆದಿತ್ತು.

ಅವರು ತಮ್ಮ ಜಹಗೀರಿನ ಪ್ರದೇಶದ ಜನರ ಅನುಕೂಲಕ್ಕಾಗಿ ಒಂದು ಆಜ್ಞೆ ಯನ್ನು ಹೊರಡಿಸಿದ್ದರು. ಅದೆಂದರೆ–ಸಂಸ್ಕಾರಕ್ಕಾಗಿ; ಹೋಮ ಹವನಾದಿಗಳಿಗಾಗಿ ಅಥವಾ ಮದುವೆಯ ಅಡಿಗೆಗಾಗಿ ಆ ಜಹಗೀರಿನ ಪ್ರಜೆಗಳು ಚೌಧರಿಯುವರ ಕಾಡಿನಿಂದ ಬೇಕಾಗುವಷ್ಟು ಉರುವಲು ಕಡಿದುಕೊಂಡು ಹೋಗಬಹುದು. ಅದಕ್ಕಾಗಿ ಚೌಧರಿ ಯುವರ ಅನುಮತಿಗಾಗಿ ಕಾಯಬೇಕಾಗಿಲ್ಲ. ಇನ್ನು ಹಿಂದೂ ರೈತರುಗಳ ಮನೆಗಳಲ್ಲಿ ಮದುವೆಗಳಿದ್ದರೆ–ಮದುವೆಯ ಮೆರವಣಿಗೆಗಾಗಿ ಆನೆ, ಕುದುರೆ, ಮೇಣೆ, ಕಾರ್ಪೆಟ್ಟು

ಗಳು ಮತ್ತು ಬೇಕಾಗುವ ಯಾವುದೇ ಸಾಮಾನುಗಳನ್ನು ಚೌಧರಿಯವರ ಮನೆಯಿಂದ ನಿರಾತಂಕವಾಗಿ ಪಡೆಯಬಹುದಾಗಿತ್ತು. ಇವರುಗಳ ಮದುವೆಗೆ ಹಾಜರಾಗಲು ಚೌಧರಿಯವರು ತಮ್ಮ ಪ್ರತಿನಿಧಿಯೊಬ್ಬನನ್ನು ನೇಮಿಸಿದ್ದರು. ಈ ಕಾರ್ಯಕ್ಕೆ ಆ ಪ್ರತಿನಿಧಿಗೆ ಪ್ರತಿ ಮದುವೆಗೆ ಹೋದಾಗ ನಿರ್ದಿಷ್ಟವಾದ ಸಂಭಾವನೆ ದೊರೆಯುತ್ತಿತ್ತು. ಅದಲ್ಲದೇ, ಕನ್ಯಾದಾನದ ಕಾಲಕ್ಕೆ ಚೌಧರಿಯವರ ಪರವಾಗಿ ಕಾಣಿಕೆ ಸಂದಾಯ ವಾಗುತ್ತಿತ್ತು.

ಚೌಧರಿಯವರ ಅಂಗರಕ್ಷಕನಾಗಿ ಠಾಕೂರ್ ಭಜನ್‌ಸಿಂಗ್‌ನೆಂಬ ರಜಪೂತ ವ್ಯಕ್ತಿ ಇದ್ದ. ಆರಡಿ ಎತ್ತರದ ಹರವಾದ ಎದೆಯ ಈ ಮನುಷ್ಯ ಬಿಲ್ಲಿಗೆ ಹೂಡಿದ ಬಾಣ ದಂಥವನು, ಧೈರ್ಯಶಾಲಿ. ಚೌಧರಿಯವರಿಗೆ ಇವನ ಮೇಲೆ ಎಷ್ಟು ನಂಬಿಕೆಯೆಂದರೆ ತಾವು ಹಜ್‌ಗೆ ಹೋದಾಗ ಕೂಡ ಇವನನ್ನು ಜೊತೆಗೆ ಕರೆದುಕೊಂಡು ಹೋಗಿದ್ದರು. ಠಾಕೂರ್ ಭಜನಸಿಂಗ್ ಜೊತೆಗಿದ್ದರೆ ಚೌಧರಿಯವರಿಗೆ ಯಾವ ಭಯವೂ ಇಲ್ಲ. ಅವ ಜೊತೆಗಿದ್ದರೆ ತಮ್ಮ ಶತ್ರುವಿನ ಮನೆಯ ಬಾಗಿಲ ಮುಂದೆಯೇ ನಿದ್ರಿಸಿಯಾರು! ಚೌಧರಿಯವರಿಗೆ ಶತ್ರುಗಳೂ ಇದ್ದರು! ಅಕ್ಕಪಕ್ಕದ ಜಮೀನುದಾರರೆಲ್ಲ ಇವರ ಪ್ರಭಾವ ಪ್ರಸಿದ್ಧಿ ಕಂಡು ಕರುಬುವವರಾಗಿದ್ದರು. ಈ ಚೌಧರಿಯವರ ದೆಸೆಯಿಂದ ಅವರು ತಮ್ಮ ಟೆನೆಂಟುಗಳೊಂದಿಗೆ ಇಷ್ಟಬಂದಂತೆ ನಡೆದುಕೊಳ್ಳುವಂತೆ ಇರಲಿಲ್ಲ. ಯಾಕೆಂದರೆ ಯಾರೇ ದುರ್ಬಲರಿಗೆ ಅನ್ಯಾಯವಾದರೆ ಚೌಧರಿಯವರು ಅಂಥವರಿಗೆ ನ್ಯಾಯ ದೊರಕಿಸಿಕೊಡಲು ಮುನ್ನುಗ್ಗುವಂಥವರಾಗಿದ್ದರು.

ಚೌಧರಿಯವರಿಗೆ ಈ ಭಜನ್‌ಸಿಂಗ್ ಮನೆಯಿಂದ ಹೊರಗೆ ಹೊರಟನೆಂದರೆ ಎಲ್ಲಿಲ್ಲದ ಚಿಂತೆ. ಯಾರ ಜೊತೆಗೆ ಏನು ಉಲಕೋಚಿತನವಾಡಿ ಯಾವ ಜಗಳ ತಂದಿಟ್ಟುಕೊಳ್ಳುತ್ತಾನೆಯೋ....ಎಲ್ಲಿ ಪೆಟ್ಟು ತಿನ್ನುತ್ತಾನೆಯೋ ಎನ್ನುವ ಕಾಳಜಿ. ಭಜನಸಿಂಗ್ ಕಟ್ಟಿ ಮೇಯಿಸಿದ ಟಗರಿನಂಥವನು, ಬಿಚ್ಚಿ ಬಿಟ್ಟರೆ ಸಾಕು–ಎದುರಿಗೆ ಸಿಕ್ಕವರತ್ತ ನುಗ್ಗಿ ತಲೆಗೆ ಗುದ್ದುವಂಥವನು. ಇವನಿಗೆ ಚೌಧರಿಯವರೆಂದರೆ ಸರ್ವಸ್ವ. ಮೂರು ಲೋಕದಲ್ಲಿನ ಯಾರಿಗೂ ಕಡಿಮೆಯಲ್ಲ. ರಾಜನೆನ್ನಿರಿ, ಒಡೆಯನೆನ್ನಿರಿ· ದೇವರೆನ್ನಿರಿ... ಠಾಕೂರನಿಗೆ ಚೌಧರಿಯವರೆಂದರೆ ಇದೆಲ್ಲವೂ ಆಗಿದ್ದರು. ಅವನು ತನ್ನ ಜೀವವನ್ನೇ ಪಣಕ್ಕೆ ಒಡ್ಡಿ ಚೌಧರಿಯವರನ್ನು ಅನೇಕಲ ರಕ್ಷಿಸಿದ್ದಾನೆ.

ಚೌಧರಿ ಸಾಹೇಬರ ನಡಾವಳಿಕೆಯಿಂದ ಮುಸ್ಲಿಮರ ಮನಸ್ಸಿಗೆ ಮುಳ್ಳು ಚುಚ್ಚಿದಂತಾಗುತ್ತಿತ್ತು. ಇವರು ಅದೆಂಥ ಮುಸ್ಲಿಮರು ಎಂದು ಅವರು ಬೇಸರ ಪಟ್ಟುಕೊಳ್ಳುತ್ತಿದ್ದರು. ಇವರ ವಿಚಿತ್ರ ನಂಬಿಕೆಗಳೋ!.... ಯಾವ ಮುಸ್ಲಿಮನು

ಅವುಗಳನ್ನು ಒಪ್ಪಿಕೊಳ್ಳಲಾದೀತು ? ಗಂಗಾ ನದಿಯ ನೀರನ್ನು ಪವಿತ್ರವೆಂದು ಭಾವಿಸಿ ನಿತ್ಯ ಆ ನೀರನ್ನೇ ಕುಡಿಯುವ ಇವರನ್ನು ನಿಜವಾದ ಮುಸ್ಲಿಂ ಎಂದು ಹೇಳಲಾದೀತೆ? ....ಹಿಂದೂ ಸಾಧು ಸಂತರಿಗೆ ಅದ್ದೂರಿಯ ಆತಿಥ್ಯ ನೀಡುತ್ತಾರಲ್ಲ ಇವರು. ಸರಿಯೆ ? ಪಂಡಿತನನ್ನು ಮನೆಗೆ ಕರೆಸಿ ಹಿಂದೂ ಧರ್ಮಗ್ರಂಥಗಳನ್ನು ಓದಿಸುತ್ತಾರಲ್ಲ–ಇದು ಯೋಗ್ಯವೆ ?....ಸನಾತನ ಮುಸ್ಲಿಮರು ಚೌಧರಿಯವರ ವಿರುದ್ಧ ಸಂಚಿನ ಯೋಜನೆ ರೂಪಿಸತೊಡಗಿದರು. ಹೇಗಾದರೂ ಮಾಡಿ ಈ ಹಿಂದೂಗಳನ್ನು ಬಗ್ಗು ಬಡಿಯ ಬೇಕೆಂದು ಹಂಚಿಕೆ ಮಾಡತೊಡಗಿದರು.... ಅಂತೂ ಕೊನೆಗೆ ಅವರು ಯೋಜನೆ ಯೊಂದನ್ನು ಸಿದ್ಧಪಡಿಸಿಯೇಬಿಟ್ಟರು. ಭಗವಾನ್ ಕೃಷ್ಣ ಜನ್ಮಾಷ್ಟಮಿಯ ದಿವಸ ದೇವಸ್ಥಾನ ನುಗ್ಗಿ, ಹಿಂದುಗಳು ಎಂದೆಂದಿಗೂ ಮರೆಯದಂತೆ ಚಚ್ಚಬೇಕೆಂದು ನಿರ್ಧರಿಸಿದರು....ಚೌಧರಿಯ ಆಶ್ರಯದಲ್ಲಿ ಕೊಬ್ಬಿದ್ದಾರೆ ..ಕೊಬ್ಬು ಇಳಿಸಬೇಕು.... ಈ ಚೌಧರಿ ತಾನೇ ಏನು ಮಾಡಿಯಾನು ? ಒಂದು ವೇಳೆ ಹಿಂದೂಗಳ ಬಾಜೂ ಹಿಡಿದರೆ ಇವನನ್ನೂ ಒಂದು ಕೈ ನೋಡಿಕೊಳ್ಳುವುದು. ಅಂದರೆ ಇವನನ್ನು ಹಿಡಿದು ಕೊಂಡ ಹಿಂದೂ ಭೂತ ಕೂಡ ಬಿಟ್ಟೋಡಬಹುದು ...

ಅಂದು ಜನ್ಮಾಷ್ಟಮಿ. ಕಾರ್ಗತ್ತಲು. ಗುಡಿಯಲ್ಲಿ ಉತ್ಸವ ನಡೆದಿದೆ....ಬಚ್ಚ ಬಾಯಿಯ ಮುದುಕನೊಬ್ಬ ತಾನಪೂರಾದ ಶೃತಿಯಲ್ಲಿ ಧ್ರುಪದವೊಂದನ್ನು ಹಾಡು ತ್ತಿದ್ದನು. ಢೋಲು, ತಾಳಗಳನ್ನು ಹಿಡಿದ ನೂರಾರು ಭಕ್ತರ ಗುಂಪು....ಈ ಮುದುಕ ಯಾವಾಗ ತನ್ನ ರಾಗ ಮುಗಿಸಿಯಾನು–ಯಾವಾಗ ನಾವು ಭಜನೆಗಳನ್ನು ಹಾಡೇವು ಎಂದು ಕುತೂಹಲದಿಂದ ಕಾಯುತ್ತಿದ್ದರು. ಭಕ್ತಸಮೂಹಕ್ಕೆ ಕೊನೆಗೆ ಹಂಚಬೇಕಾದ ಪ್ರಸಾದದ ಅಡಿಗೆಯೂ ಮುಗಿದಾಗಿತ್ತು. ಗಂಡಸರು, ಹೆಂಗಸರು ಅತ್ಯಂತ ಉತ್ಸಾಹ ದಿಂದ ಉತ್ಸವದಲ್ಲಿ ಭಾಗಿಗಳಾಗಿದ್ದರು ...ಅಷ್ಟರಲ್ಲಿ ಲಾಠಿಗಳನ್ನು ಹಿಡಿದ ಮುಸ್ಲಿಮರ ಗುಂಪೊಂದು ಅಲ್ಲಿಗೆ ಬಂದು ದಬ ದಬ ಎಂದು ಗುಡಿಯತ್ತ ಕಲ್ಲುಬೀಸತೊಡಗಿದರು.... 'ಕಲ್ಲು !....ಎಲ್ಲಿಂದ ಬರಲಿಕತ್ಯಾವ ?' 'ಕಲ್ಲು....ಯಾರ ಒಗೀಲಿಕತ್ಯಾರ !? ಅಂತ ಒದರಾಟ ಚೀರಾಟ ಸುರುವಾಗಿ ಗುಡಿಯೊಳಗೆ ಅಲ್ಲೋಲ ಕಲ್ಲೋಲವುಂಟಾಯಿತು. ಇದು ಏನು ಹಕೀಕತ್ತು .. ಎಂದು ತಿಳಿದುಕೊಳ್ಳುವ ಉದ್ದೇಶದಿಂದ ಒಂದಿಷ್ಟು ಮಂದಿ ಹೊರಗೆ ಬಂದರು....ಹೊರಗೆ ಬರಲಿ ಎಂದು ಕಾಯುತ್ತಿದ್ದ ಮುಸ್ಲಿಮರು ಇವರ ಮೇಲೆ ಬಿದ್ದು ಲಾಠಿ ಬೀಸತೊಡಗಿದರು. ಹೌಹಾರಿದ ಈ ನಿರಾಯುಧ ಹಿಂದುಗಳಲ್ಲಿ ಒಂದಿಷ್ಟುಮಂದಿ ಅಡಗಿಕೊಳ್ಳಲು ಓಡಿ ಗುಡಿಹೊಕ್ಕರೆ ಉಳಿದವರು ದಾರಿ ಸಿಕ್ಕತ್ತ ಓಡಿದರು....ಭಯಂಕರ ಗಲಾಟೆ ಶುರುವಾಯಿತು.

ಹೊಡೆದಾಟದ ಸುದ್ದಿ ಚೌಧರಿಯವರಿಗೆ ಮುಟ್ಟಿದ ಕೂಡಲೇ ಅವರು ಭಜನಸಿಂಗನನ್ನು ಕೂಗಿದರು....'ನೋಡು....ಅದೇನು ಗಲಾಟೆ ನೋಡು.... ದೊಂಬೀ

ಬಿಟ್ಟಿಸಿದವರಿಗೆ ಜಾಗ ಖಾಲೀಮಾಡಲಿಕ್ಕೆ ಹೇಳು, ಅವರು ಮಾತು ಕೇಳದಿದ್ದರ ಕಪಾಳಿ ಗೆರಡು ಬಿಗೀ ... ಹಾಂ ... ನೀ ಯಾರದರೇ ತಲೀಗಿಲೀ ಒಡೀಲಿಕ್ಕೆ ಹೋಗಬ್ಯಾಡಾ ಮತ್ತ...' ಅಂತ ತಾಕೀತುಮಾಡಿ ಕಳಿಸಿದರು. ಇಷ್ಟರೊಳಗೆ ಠಾಕೂರ್ ಭಜನಸಿಂಗನಿಗೆ ಈ ಜಗಳದ ಸುದ್ದಿ ತಿಳಿದು ಅವನ ರಕ್ತ ಕುದಿಯುತ್ತಿತ್ತು. ಅವನು ಹಲ್ಲು ಕಡಿಯುತ್ತಿದ್ದನು. ಚೌಧರಿಯವರ ಈ ಆಜ್ಞೆ ಅವನ ಮೌನ ಪ್ರಾರ್ಥನೆಗೆ ದೊರೆತ ವರದಂತಾಯಿತು ! ಅವ ದೊಣ್ಣೆಯನ್ನು ಹೆಗಲಿಗೇರಿಸಿಕೊಂಡವನೇ ಗುಡಿಯತ್ತ ಓಡಿದ....ಅಲ್ಲಿ ಹೋಗಿ ನೋಡಿದರೆ ಮುಸ್ಲಿಮರು ಅಧ್ವಾನವೆಬ್ಬಿಸಿದ್ದಾರೆ. ಹಿಂದುಗಳನ್ನು ಗುಡಿಯೊಳಗೆ ಅಟ್ಟಿಸಿಕೊಂಡು ಹೋಗಿ....ಅಲ್ಲಿ ಕಪ್ಪು ಬಸಿಗಳ ಅಂಗಡಿಯೊಳಗೆ ಹೊಕ್ಕ ಸೊಕ್ಕಿದ ಗೂಳಿಯ ಹಂಗೆ ಆಡುತ್ತಿದ್ದಾರೆ !

ಠಾಕೂರ್ ಕೆಂಡಾಮಂಡಲವಾದ. ಅವನ ಹಣೆಯ ನಾಡಿಗಳು ರಕ್ತದ ನುಗ್ಗುವಿಕೆಯಿಂದ ಟಪಟಪವೆಂದು ಹೊಡೆದುಕೊಳ್ಳತೊಡಗಿದವು. ಅವನು ಒಮ್ಮೆ ಜೋರಾಗಿ ಗರ್ಜಿಸಿದವನೇ ಗುಡಿಯೊಳಗಿನ ದೊಂಬಿಕೋರರಿಗೆ ಇಕ್ಕತೊಡಗಿದನು. ಸುಮಾರು ಐವತ್ತು ಜನರ ನಡುವೆ ಒಬ್ಬನೇ ಸಿಕ್ಕಿಹಾಕಿಕೊಂಡ ಇವನು ಹುಲಿಯಂತೆ ಹೋರಾಡತೊಡಗಿದ್ದನು. ಅವನು ಕ್ರೋಧದಿಂದ ಕುರುಡಾಗಿದ್ದನು. ಸತ್ತರೋ ಬದುಕಿದರೋ ಎನ್ನುವ ಪರಿವೆ ಇಲ್ಲದವನಂತೆ ಇವರನ್ನು ಮುರಿದು ಮುದ್ದಿಯಾಗುವಂತೆ ಹೊಡೆಯತೊಡಗಿದ್ದನು....ಠಾಕೂರನಿಗೆ ಈ ಅತಿಮಾನುಷ ಶಕ್ತಿ ಎಲ್ಲಿಂದ ಬಂದಿತೋ ಯಾರು ಬಲ್ಲರು ! ಅವನು ಯಾವುದೋ ದೈವೀಶಕ್ತಿ ತನ್ನ ಸಹಾಯಕ್ಕೆ ಬಂದಿದೆ ಎಂದು ಭಾವಿಸಿಕೊಂಡಿದ್ದನು....ಭಗವಾನ್ ಕೃಷ್ಣನೇ ಅವನನ್ನು ರಕ್ಷಿಸುತ್ತಿದ್ದಾನೆ ಅನ್ನುವಂತಿತ್ತು....ಧರ್ಮದ ಪಾವಿತ್ರ್ಯ ರಕ್ಷಣೆಗಾಗಿನ ಹೋರಾಟಗಳಲ್ಲಿ ತೊಡಗುವ ಮನುಷ್ಯರು ಹೀಗೆಯೇ ಅದ್ಭುತ ಧೈರ್ಯ ಮೆರೆಯುತ್ತಿರಬಹುದಲ್ಲವೆ !

ಇತ್ತ–ಈ ಠಾಕೂರನು ಯಾರದಾದರೂ ತಲೆ ಒಡೆದು ಹಾಕುವವನೇ ಎನ್ನುವ ಸಂಶಯ ಕಾಡಿದ ಚೌಧರಿಯವರು ಅವನ ಹಿಂದೆ ಹಿಂದೆಯೇ ಓಡಿಬಂದರು. ಅವರು ಗುಡಿಯನ್ನು ತಲುಪುತ್ತಿದ್ದಂತೆ ವಿನಾಶದ ದೃಶ್ಯ ಗೋಚರವಾಯಿತು. ಓಡಬಲ್ಲವರು ಜೀವ ಉಳಿಸಿಕೊಳ್ಳಲು ಓಡಿಹೋಗುತ್ತಿದ್ದರೆ, ಪೆಟ್ಟು ಬಿದ್ದವರು ನೆಲಕ್ಕೆ ಬಿದ್ದು ನೋವಿನಿಂದ ನರಳುತ್ತಿದ್ದರು. ಜನ ಭಯದಿಂದ ಕಿರಿಚುತ್ತಿದ್ದರು. ಚೌಧರಿಯವರು ಠಾಕೂರನನ್ನು ಕೂಗಬೇಕೆನ್ನುವಷ್ಟರಲ್ಲಿ ಓಡುತ್ತ ಬಂದ ವ್ಯಕ್ತಿಯೊಬ್ಬ ಇವರ ಮುಂದುಗಡೆಯೇ ಧೂಪ್ಪೆಂದು ಬಿದ್ದನು. ಚೌಧರಿಯವರಿಗೆ ಅವನ ಗುರುತು ಸಿಕ್ಕಾಗ ಅವರ ಕಣ್ಣಿಗೆ ಕತ್ತಲೆ ಕವಿದಂತಾಯಿತು. ಅವನು ಶಾಹಿದ್ ಹುಸೇನ್ ! ಬೇರೆ ಯಾರೂ ಅಲ್ಲ.... ಚೌಧರಿ ಸಾಹೇಬರ ಖಾಸಾ ಅಳಿಯ.... ಅವರ ಇಡೀ ಆಸ್ತಿಯ ಏಕೈಕ ವಾರಸುದಾರ !

ಶಾಹಿದ್‌ನನ್ನು ಎತ್ತಲು ಮುನ್ನುಗ್ಗಿದ ಚೌಧರಿಯವರು 'ಠಾಕೂರ್....ಬಾ ಇಲ್ಲಿ..,ಯಾರು....ಆ ಕಂದೀಲು ತರ್ರಿ. ,.ಅಯ್ಯೋ....ಇವ ನನ್ನ ಶಾಹೀದ..,.'ಎಂದು ಗೋಳಾಡತೊಡಗಿದರು. ಠಾಕೂರ್ ನಿಶ್ಚೇಷ್ಟಿತನಾದ....ಅವನು ಯಾರದೋ ಕೈ ಯಿಂದ ಕಂದೀಲನ್ನು ಕಿತ್ತಿಕೊಂಡವನೇ ಹೊರಗೆ ಓಡಿ ಬಂದ...,ಬೋರಲು ಬಿದ್ದ ಆ ಮನುಷ್ಯ ಶಾಹಿದನೇ ಆಗಿದ್ದ.,..ತಲೆ ಒಡೆದು ರಕ್ತ ಚಿಮ್ಮುತ್ತಿತ್ತು 'ಠಾಕೂರ್...,ನನ್ನ ಮನೀ ದೀಪಾ ಆರಿಸಿಬಿಟ್ಟೆ ...' ಅಂತ ಗೋಳಾಡತೊಡಗಿದರು. ಭಜನ್‌ಸಿಂಗ್ ಪಾದ ದಿಂದ ನೆತ್ತಿಯತನಕಾ ಗದಗದ ಅಂತ ನಡಗುತ್ತಿದ್ದ. 'ಒಡೆಯಾ....ದೇವರ ಪ್ರಮಾಣ ಮಾಡಿ ಹೇಳತನು... ನನಗೆ ಅವರ ಗುರತು ಹತ್ತಿದ್ದಿಲ್ಲ....' ಅಂತ ಠಾಕೂರ್ ಹೇಳ ತಿದ್ದರೆ ಚೌಧರಿಯವರು ತಮಗ ತಾವs ಸಮಾಧಾನ ತಂದಕೊಂಡವರಂಗ 'ಇಲ್ಲ. ನಾ ನಿನ್ನ ಬಯ್ಯೂದಿಲ್ಲ....ದೇವಸ್ಥಾನದೊಳಗೆ ನುಗ್ಗಿ ದಾಂಧಲೇ ಮಾಡುವ ಅಧಿಕಾರ ಯಾರಿಗೂ ಇಲ್ಲ....ಆದರ....ನನ್ನ ಗೋಳಂದರ. ..ನನ್ನ ವಂಶದ ಕುಡೀ ಇಲ್ಲಿಗೇ ಮುರಟಿತು....ಅದೂ ನಿನ್ನ ಕೈಯಿಂದ....ನಿಮಗಾಗಿ ನನ್ನ ಜೀವ ಮುಡಪು ಅಂತಿದ್ದ ನಿನ್ನ ಕೈಯಿಂದನs ದೇವರು ನನ್ನ ಮನೀ ಮುರದಾ....' ಅಂತ ಧಾರಾಕಾರವಾಗಿ ಕಂಬನಿ ಸುರಿಸುತ್ತ ಚೌಧರಿಯವರು ದುಃಖಿಸತೊಡಗಿದರು. ಅಪರಾಧೀ ಭಾವ ತುಂಬಿದ ಠಾಕೂರ್ ನಿಶ್ಚಲನಾಗಿ ನಿಂತುಕೊಂಡ...ಅವನಿಗೆ ತನ್ನ ಸ್ವಂತ ಮಗ ಸತ್ತಿದ್ದರೆ ಆಗುತ್ತಿದ್ದಕ್ಕಿಂತಲೂ ಹೆಚ್ಚು ದುಃಖವಾಗಿತ್ತು....ಅಯ್ಯೋ ನನ್ನ ದೇವರ ಕಣ್ಣು ಕಿತ್ತು ಕೊಂಡೆನಲ್ಲ....ಇವರು ಒಡಲೊಳಗೆ ಹಾಕಿಕೊಂಡು ಸಾಕಿದರೆ ನಾನು ಸರ್ಪವಾಗಿ ಅವರನ್ನೆ ಕಚ್ಚಿದೆನಲ್ಲ.. .ಎಂತನ್ನುವ ಅಪರಾಧೀ ಭಾವನೆಯಿಂದ ತಳಮಳಗೊಂಡ ಠಾಕೂರ್ ಹೇಳಿದ್ದು ಇಷ್ಟೇ, 'ಒಡೆಯಾs...ನನಗಿಂತ ಪಾಪಿ ಯಾರಿದ್ದಾರು ?...ನಾನು ದ್ರೋಹಿಯಾಗಿಬಿಟ್ಟೆ...'. ಇಷ್ಟು ಮಾತಾಡಿದ ಭಜನ್‌ಸಿಂಗ್ ತನ್ನ ಸೊಂಟದಿಂದ ಚಾಕುವನ್ನು ಇರಿದುಕೊಂಡು ತಾನು ಮಾಡಿದ ಅಪರಾಧದ ಕಶ್ಮಲವನ್ನು ತನ್ನ ಎದೆಯ ರಕ್ತದಿಂದ ತೊಳಿದುಕೊಳ್ಳಲು ಇರಿದುಕೊಳ್ಳಲು ಕೈ ಎತ್ತಿದ.,..ಚೌಧರಿಯವರು ಥಕ್ಕನೇ ಅವನ ಕೈಯಿಂದ ಚಾಕುವನ್ನು ಕಿತ್ತುಕೊಳ್ಳುತ್ತ–'ಇದೇನು ಮಾಡ್ಲಿಕತ್ತೀ.... ಸಂಯಮ ಅನ್ನೂದು ಇರ್ಲಿ....ಇದು ನನ್ನ ಹಣೇ ಬರಹ. ಭಗವಂತನ ಇಚ್ಛಾ ಇದು, ನೀನರೇ ಏನು ಮಾಡೀ ?....ಒಂದ ವ್ಯಾಳ್ಯಾ ನಾನs ಸೈತಾನನ ಬಲಿಗೆ ಬಿದ್ದು ಇಂಥಾ ಕೆಲಸ ಮಾಡಿದ್ದರ–ನಾ ಚೌಧರೀ ಅನ್ನೂದು ನಿನಗೆ ತಿಳಿದೂ ನೀ ನನ್ನ ಕೊಂದಿ ದ್ದರ ಸಹಿತ ಅದು ತಪ್ಪು ಅಲ್ಲ....ಒಬ್ಬರ ಧರ್ಮಾ ಅಪಮಾನ ಮಾಡೂದರಕಿಂತಾ ದೊಡ್ಡ ಪಾಪ ಯಾವುದೂ ಇಲ್ಲ. ಭಗವಂತನ ಪ್ರಮಾಣ ಮಾಡಿ ಹೇಳತನು–ನನಗ ನಿನ್ನ ಮ್ಯಾಲ ಸಿಟ್ಟಿಲ್ಲ, ..ಆದರ ಈ ದುಃಖ ಮಾತ್ರ ನಂಗ ಮರೀಲಿಕ್ಕೆ ಆಗೂದುಲ್ಲ.. ಹೂಂ....ಈಗ ಇನೂ ಕತ್ತಲ ಅದ, ನೀ ಈಗ ಇಲ್ಲಿಂದ ಓಡು...ನನ್ನ ಎಸ್ಟೇಟಿನ

ಯಾವದರೇ ಹಳೇ ಮನಿಯೊಳಗ ಅಡಗಿಕೋ.... ನನಗ ಗೊತ್ತದ....ನನ್ನ ಮನೆಯವರು ಚುಚ್ಚಿ ಚುಚ್ಚಿ ಮಾತಾಡಬಹುದು. ನನ್ನ ಮಗಳು ತನ್ನ ಗಂಡನ ಖೂನಿಯ ಸೇಡು ತೀರಿಸಿಕೋಲಿಕ್ಕೆ ಒತ್ತಾಯ ಮಾಡತಾಳ. ಇಡೀ ಮುಸ್ಲಿಂ ಸಮಾಜ ನನ್ನ ರಕ್ತ ಕುಡಿಯಲಿಕ್ಕೆ ಹವಣಿಸಬಹುದು...ಒಬ್ಬ ಯಾವನರೇ ಹರೇದ ಹುಡುಗ ನನ್ನ ಖೂನಿ ಮಾಡಲಿಕ್ಕೆ ಹವಣಿಸಬಹುದು....ಇವು ಏನs ಆಗಲಿ....ನಾ ಮಾತ್ರ ನನ್ನ ವಿವೇಕ ಅಂಬೂದನ್ನ ಕಳಕೋದುಲ್ಲ...ನೀ ಅವಸರ ಮಾಡು...ನಡೀ...ಅಲ್ಲಿ ಯಾರೋ ಬರಲಿಕ್ಕತ್ತ್ಯಾಂಗಿದೆ...ನಮ್ಮ ಮಂದೆನs...ಹೂಂ...ಓಡು...ಓಡ ನೀ...'ಎಂದು ಚೌಧರಿಯವರು ಅವಸರಾವಾಡಿ ಠಾಕೂರ ಓಡಿ ಹೋಗುವ ಹಂಗ ಮಾಡಿದರು.

ಭಜನಸಿಂಗ್ ಒಂದು ವರ್ಷ ಪೂರಾ ಅಡಗಿಕೊಂಡ. ಇಂವ ಹೊರಗೆ ಬಂದಾದರೂ ಬರಲಿ ಎಂದು ಒಂದು ಕಡೆ ಮುಸ್ಲಿಮರು ಕಾದಿದ್ದರೆ ಇನ್ನೊಂದು ಕಡೆಗೆ ಪೋಲೀಸರು ಕಾಯುತ್ತಿದ್ದರು...ಚೌಧರಿಯವರು ತಮ್ಮ ಮನಿಯವರ ಮಾತಿನ ಬಾಣಗಳನ್ನ, ಮುಸ್ಲಿಂ ಸಮಾಜದವರ ಬೈಗುಳನ್ನ, ಪೋಲೀಸರ ಆರೋಪಗಳನ್ನ ಮತ್ತು ಮುಲ್ಲಾಗಳ ದಬಾವಣೆಯನ್ನ ನಿರ್ಲಿಪ್ತವಾಗಿ ಸ್ವೀಕರಿಸುತ್ತ ಠಾಕೂರನನ್ನು ಸುರಕ್ಷಿತವಾಗಿ ಮುಚ್ಚಿಟ್ಟಿದ್ದರು. ತಾವು ಜೀವದಿಂದ ಇರುವವರೆಗೆ ಸ್ವಾಮಿನಿಷ್ಠನಾದ ಭಜನಸಿಂಗನನ್ನು ಕುರುಡು ಕಾನೂನಿನ ಕೈಗೆ ಒಪ್ಪಿಸಬಾರದೆಂದು ಅವರು ನಿರ್ಧರಿಸಿದ್ದರು. ಪೋಲೀಸರು ಅವರ ಎಸ್ಟೇಟಿನ ಮನೆಗಳ ಮೇಲೆ ರೇಡ್ ಮಾಡಿದರು....ರೊಚ್ಚಿಗೆದ್ದ ಒಂದಿಷ್ಟು ಮುಸ್ಲಿಮರು ಇವರ ಆಳುಗಳನ್ನು ಒಡೆದುಕೊಳ್ಳಲು ನೋಡಿದರು. ಏನೂ ಪ್ರಯೋಜನವಾಗಲಿಲ್ಲ. ಚೌಧರಿ ಸಾಹೇಬರ ಎಲೆಮರೆಯ ಕಾಯಿಯ ರೀತಿಯ ಪರೋಪಕಾರಬುದ್ಧಿಯಂತೆಯೇ ಠಾಕೂರ್ ಸಹಿತ ಯಾರ ಕಣ್ಣಿಗೂ ಬೀಳದೇ ಉಳಿದ.

ಆದರೆ ತನ್ನಿಂದ ಚೌಧರಿಯವರು ನಿತ್ಯ ಹಿಂಸೆ ಅನುಭವಿಸಬೇಕಾಗಿದೆ ಎನ್ನುವುದು ಠಾಕೂರನಿಗೆ ಅರ್ಥವಾದಾಗ ಅವನು ತಳಮಳಕ್ಕೆ ಒಳಗಾದ. ಅವನು ಚೌಧರಿಯವರನ್ನು ಹಗಲಿಲ್ಲ ಭೆಟ್ಟಿಯಾಗಿ ತನ್ನನ್ನು ಪೋಲೀಸರಿಗೆ ಒಪ್ಪಿಸಿಬಿಡಿರಿ ಎಂದು ಬೇಡಿಕೊಳ್ಳತೊಡಗಿದ. ಆದರೆ ಚೌಧರಿಯವರು ಮಾತ್ರ ಪ್ರತಿಸಲವೂ ಅವನಿಗೆ 'ಇನ್ನೊಂದಿಷ್ಟು ದಿನಾ ತಡೀ ...ಇನ್ನೊಂದಿಷ್ಟು ದಿನಾ ತಡೀ' ಎಂದು ಹೇಳಿ ಸಮಾಧಾನಗೊಳಿಸಿ ಕಳಿಸುತ್ತಿದ್ದರು.

ಚೌಧರಿಯವರು ತಮ್ಮ ಮನೆಯವರ ಭರ್ತ್ಸನೆ ಬಿರುನುಡಿಗಳನ್ನು ತಪ್ಪಿಸಿಕೊಳ್ಳುವ ಉದ್ದೇಶಕ್ಕೋ ಎನ್ನುವಂತೆ ಆದಷ್ಟು ಹೊರಗೇ, ಪ್ರವಾಸದ ಮೇಲೆ ಇದ್ದುಬಿಡುತ್ತಿದ್ದರು. ಈ ಸಲದ ಚಳಿಗಾಲ ಬರುತ್ತಿದ್ದಂತೆಯೇ ಅವರು ತಮ್ಮ ವಿಶಾಲವಾದ ಎಸ್ಟೇಟಿನ ಇನ್‌ಸ್ಪೆಕ್ಷನ್‌ಗೆಂದು ಪ್ರವಾಸಕ್ಕೆ ಹೊರಟರು. ಆಗ ಒಂದು ರಾತ್ರಿ

ಅವರು ತಮ್ಮ ಊಟ ಮುಗಿಸಿ ಕೂತಿದ್ದಂತೆಯೇ ಭಜನಸಿಂಗ್ ಅವರ ಮುಂದೆ ಹಾಜರಾದನು... ಎಷ್ಟೊಂದು ಇಳಿದು ಹೋಗಿದ್ದಾನಿವ...!...ಎಂದುಕೊಳ್ಳುತ್ತಾ ಚೌಧರಿಯವರು ಆಶ್ಚರ್ಯಚಕಿತರಾದರು. ಠಾಕೂರ್ ಮೊದಲು ಮಾತನಾಡಿಸಿದ–

'ದಣೇರು ಆರಾಮಲ್ರ್ಯಾ...'

'ಹಾಂ...ಅಲ್ಲಾನ ದಯಾ!...ಅಗದೀ ಗುರ್ತ ಪತ್ತ ದಂಗ ಆಗೀ. ಇಷ್ಟ ರಾತ್ರ್ಯಾಗ ಎತ್ಲಾಗಿಂದ ಬಂದಿ ?

'ದಣೇರ್‍ರ...ಇನ್ನ ನಾ ಈ ಗುದ್ದಿನಾಗ ಅಡಿಕ್ಕೊಂಡ ಇರಲಾರೆ ನಮ್ಮಪ್ಪಾ. ನೀವು ಹೂಂ ಅನ್ನರಿ...ನಾನು ಮ್ಯಾಜಿಸ್ಟ್ರೇಟರ ಮುಂದ ಹಜರ ಆಗತನ:... ಮುಂದ ನನ್ನ ಹಣ್ಯಾಗ ಏನ ಬರದತ್ತೋ ಅದು ಆಗಲಿ ..ನನ್ನ ದಸಿಂದ ನಿಮಗ ಎಷ್ಟುತ್ರಾಸು'

'ಹಾಂಹಾಂ... ಹಂಗ ಮಾಡೀಗೀಡೀ ಮತ್ತ, ನಾ ಜೀವಂತ ಇರೋತನಕಾ ಹಂತಾ ಕೆಲಸಾ ಮಾಡಬ್ಯಾಡಾ ಈ ಪೋಲೀಸರಂದರ ಏನಂತ ತಿಳದೀ.. ಸಾಕ್ಷಿಗೋಳನ ಹೆಂಗಬೇಕಾದಂಗ ಹೊಳ್ಳಸ್ತಾರು...ಪುಕ್ಕಟ ಜೀವಾ ಕಳಕೋಬ್ಯಾಡಾ...ನನ್ನ ಸಲುವಾಗಿ ನೀ ಎಷ್ಟು ಸರತೇ ಜೀವಕ್ಕ ಜೀವ ಪಣಾ ಹಚ್ಚಿದ್ದಿಲ್ಲ ಹೇಳೂ ? ನಾ ಇಷ್ಟೂ ಮಾಡದಿದ್ದರ ಏನ ಸಾರ್ಥಕ ಆದಂಗಾತು ? ...ಇನ್ನೊಮ್ಮೆ ಈ ಹಾಜರಾಗೂ ಮಾತ್ಸ ಆಡಬ್ಯಾಡಾ....'

'ಆದರ...ಯಾರೇ ನಿಮಗ. .'

'ನಿನಗ ಅದರ ಚಿಂತಿಬ್ಯಾಡ. ದೇವರ ಇಚ್ಛಾದ ವಿರುದ್ಧ ಯಾರೂ ನನ್ನ ಒಂದ ಕೂದಲಾ ಕೊಂಕಸಾಕ ಆಗೂದುಲ್ಲ... ನೀ ಇನ್ನ ನಡೀ ಇಲ್ಲಿ ಭಾಳೊತ್ತು ಇರೂದು ಕ್ಷೇಮ ಅಲ್ಲ'

'ಮಂದಿ ಈಗ ನಿಮ್ಮನ್ನ ಒಬ್ಬರನ್ಸ ಮಾಡ್ಯಾರಂತಲಾ ?'

'ಆದರೇನು...ಭಲೋನ ಆತ ಬಿಡು. ಶತೃ ದೂರ ಇದ್ದಷ್ಟ ಭಲೋನ್ಸ !'

ಆದರೆ ಠಾಕೂರನ ನಿರ್ಧಾರ ಮಾತ್ರ ಅಚಲವಾಗಿಯೇ ಉಳಿಯಿತು. ಹಂಗೆ ಕೇಳಿದರೆ ಈ ಭೆಟ್ಟಿಯಿಂದ ಅವನ ನಿರ್ಧಾರ ಇನ್ನಷ್ಟು ಗಟ್ಟಿಯಾಯಿತು..., 'ನನ್ನಿಂದ ಚೌಧರೀ ಸಾಹೇಬರು ನೆಲೆಯಿಲ್ಲದವರಂಗೆ ಅಲೆದಾಡುವಂತಾಗಿದೆ... ಯಾವನಾದರೂ ಅವರ ಮೈಮೇಲೆ ಏರಿಹೋದರೆ...ನಾನೇಥಾ ಪಾಪಿ... ನಾ ಇಲ್ಲಿ ಕೈ ಕಟ್ಟಸಿಕೊಂಡು ಕೂತೀನಿ...' ಅಂತ ಠಾಕೂರನು ಅಪರಾಧೀ ಭಾವನೆಯಿಂದ ತಳಮಳಕ್ಕೆ ಒಳಗಾಗಿದ್ದ. ಚೌಧರಿಯವರನ್ನು ಭೆಟ್ಟಿಯಾದ ಮರುದಿನವೇ ಅವನು ಬೆಳಿಗ್ಗೆ ಎದ್ದು ಜಿಲ್ಲಾ ಮ್ಯಾಜಿ

ಸ್ಟೇಟರ ಬಂಗಲೆಗೆ ಹಾಜರಾದ...ಇಂಗ್ಲಿಷ್ ಸಾಹೇಬ–'ಇದುವರೆಗೆ ನೀನು ಚೌಧರಿ ಸಾಹೇಬರ ಆಶ್ರಯದಲ್ಲಿ ಇದ್ದೆಯಾ ?' ಅಂತ ಕೇಳಿದ. ಠಾಕೂರ–'ಇಲ್ಲ ಸಾಹೇಬರ... ನನ್ನ ಜೀವಕ್ಕ ಅಂಜಿ ನಾ ಅಡಿಕ್ಕೊಂಡಿದ್ದೆ' ಅಂತ ಉತ್ತರಿಸಿದನು.

ಚೌಧರಿ ಸಾಹೇಬರಿಗೆ ಈ ಸುದ್ದಿ ಮುಟ್ಟಿದಾಗ ಅವರು ಹೌಹಾರಿದರು... ಈಗೇನು ಮಾಡುವುದು ಎಂದು ಅವರು ಕೈಕೈ ಹಿಚಿಕಿಕೊಂಡರು. ಒಬ್ಬ ವಕೀಲನ್ನ ಹಿಡಿದು ವ್ಯವಸ್ಥೆ ಮಾಡದಿದ್ದರೆ ಠಾಕೂರ ಉಳಿಯುವುದು ಸಾಧ್ಯವೇ ಇಲ್ಲ...ಅವರು ತಾವೇ ಈ ವ್ಯವಸ್ಥೆ ಮಾಡಿದರೆ ಇಸ್ಲಾಮೀ ಸಮಾಜದಲ್ಲಿ ಅಲ್ಲೋಲಕಲ್ಲೋಲವಾಗುತ್ತದೆ. ಫತ್ವಾಗಳ ಬಾಣಗಳು ಚಿಮ್ಮುತ್ತವೆ. ಚೌಧರಿಯವರು ಸಂದಿಗ್ಧದಲ್ಲಿ ಬೇಯುವಂತಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಮುಸ್ಲಿಂ ಸಮಾಜಕ್ಕೆ ಯಾವ ಸಂದಿಗ್ಧವೂ ಇರಲಿಲ್ಲ. ಈ ಠಾಕೂರನಿಗೆ ಗಲ್ಲು ಶಿಕ್ಷೆ ಸಿಗುವವರೆಗೆ ಅವರು ವಿರಮಿಸುವುದಿಲ್ಲವೆಂದು ನಿರ್ಧರಿಸಿಬಿಟ್ಟಿದ್ದರು. ಅವರು ಇದಕ್ಕಾಗಿ ಒಂದು ನಿಧಿಯನ್ನು ಕೂಡಿಸತೊಡಗಿದರು. ಮುಲ್ಲಾಗಳು ಮಸೀದಿ ಮಸೀದಿಗಳಲ್ಲಿ ಈ ನಿಧಿಯ ಸಲುವಾಗಿ ಉದಾರ ದಾನ ನೀಡುವಂತೆ ಮನವಿ ಮಾಡಿಕೊಳ್ಳತೊಡಗಿದರು. ಜನ ಮನೆ ಮನೆಗೆ ಹೋಗಿ ಹಣ ಕೂಡಿಸತೊಡಗಿದರು. ಈಗ ಕೋರ್ಟಿನಲ್ಲಿದ್ದ ಈ ಜಗಳ ಧಾರ್ಮಿಕ ಬಣ್ಣ ತಾಳಿತು. ಮುಸ್ಲಿಂ ವಕೀಲರು ಈ ಕೇಸಿನಲ್ಲಿ ತಮ್ಮ ಕಾಣಿಕೆ ಸಲ್ಲಿಸಿ ಪ್ರತಿಭೆ ಮೆರೆಯುವ ಉದ್ದೇಶದಿಂದ ನುಗ್ಗತೊಡಗಿದರು. ಪಕ್ಕದ ಜಿಲ್ಲೆಗಳಿಂದಲೂ ಇಂಥ ಲಾಯರು ಮಂದಿ ಹರಿದು ಬರತೊಡಗಿದ್ದರು. ಈ ಜಗಳ ಜೆಹಾದ್ (ಧರ್ಮಯುದ್ಧ) ಅನಿಸಿಕೊಳ್ಳತೊಡಗಿತು ...

ಇಷ್ಟರ ನಡುವೆ ಚೌಧರಿಯವರು ಭಜನಸಿಂಗ್‌ನ ಪರವಾಗಿ ವಾದಿಸಲು ವಕೀಲನನ್ನು ನೇಮಿಸಲು ನಿರ್ಧರಿಸಿದರು. ಹೇಗಾದರೂ ಮಾಡಿ ಠಾಕೂರನನ್ನು ಉಳಿಸಿಕೊಳ್ಳಬೇಕೆಂದು ಅವರು ಮನಸ್ಸು ಮಾಡಿದ್ದರು. ಕಾನೂನಿನ ದೃಷ್ಟಿಯಿಂದ ಅವನು ನಿರ್ದೋಷಿ ಎನ್ನುವುದು ಅವರ ಮನಸ್ಸಿಗೆ ಖಾತ್ರಿಯಾಗಿತ್ತು. ನಿರ್ದೋಷಿಯಾದವನನ್ನು ರಕ್ಷಿಸಲಿಕ್ಕೆ ಭಯಪಡುವುದು ಏಕೆ ಎಂದುಕೊಂಡರು. ಈ ಗಲಾಟೆಯ ಸಲುವಾಗಿ ಅವರು ಒಂದಿಷ್ಟು ದಿನ ಜಿಲ್ಲಾ ಕೇಂದ್ರದಲ್ಲಿಯೇ ಇರಲು ನಿರ್ಧರಿಸಿದರು... ಆರು ತಿಂಗಳುಗಳ ಕಾಲ ಇವರ ಬದುಕು ಈ ಕೋರ್ಟಿನ ಕಛೇರಿಗಳ ಕಾರುಬಾರಿನ ಸುತ್ತ ಗಿರಕಿ ಹೊಡೆಯಿತು. ಅವರು ಕೋರ್ಟಿನ ಕಂಬ ಕಂಬ–ಕುರ್ಚಿ ಕುರ್ಚಿ ಅಲೆದಾಡಿದರು. ದುಡ್ಡನ್ನು ನೀರಿನಂತೆ ಖರ್ಚು ಮಾಡಿದರು. ಅವರು ಹಿಂದೆಂದೂ ಮಾಡಿರದ್ದನ್ನ, ಮುಂದೆಂದೂ ಮಾಡಲಾರದ್ದನ್ನ ಈ ಆರು ತಿಂಗಳುಗಳಲ್ಲಿ ಮಾಡಬೇಕಾಯಿತು. ಗುಮಾಸ್ತರು–ಕೆಳಗಿನ ಅಧಿಕಾರಿಗಳನ್ನ ಪೂಸಿಮಾಡುವುದು–ಅಧಿಕಾರಿಗಳಿಗೆ ಲಂಚ ರುಷುವತ್ತು ನೀಡುವುದು ! ಅಂತೂ ಕೊನೆಗೆ ಠಾಕೂರ್ ಭಜನಸಿಂಗ್

ಬಿಡುಗಡೆ ಹೊಂದಿದನು. ಚೌಧರಿಯವರು ಠಾಕೂರನನ್ನು ಗಲ್ಲು ಕಂಬದಿಂದ ಬಿಡಿಸಿ ಕೊಂಡಿದ್ದರು... ಜಿಲ್ಲೆಯಲ್ಲೆಲ್ಲ ಈ ಸುದ್ದಿ ಕಾಡ್ಗಿಚ್ಚಿನಂತೆ ಹರಡಿತು.,.

ಚೌಧರಿಯವರ ಈ ಸತ್ಕೃತಿ ಜಾತಿವಾದಿಗಳ ಕಾಮಾಲೆ ದೃಷ್ಟಿಯಲ್ಲಿ ಹಳದಿ ಯಾಗಿ ಕಂಡಿತು. ಮುಸ್ಲಿಮರಲ್ಲಿ ಇದು ಅಸಾಧ್ಯ ಕ್ರೋಧವನ್ನು ಹುಟ್ಟಿಸಿದ್ದರೆ ಹಿಂದೂಗಳಲ್ಲಿ ಇದು ರಣೋತ್ಸಾಹವನ್ನು ಮೂಡಿಸಿತು. ಮುಸ್ಲಿಮರು, ಈ ಚೌಧರಿ ತಾನು ಹುಟ್ಟಿದ ಧರ್ಮದಲ್ಲಿ ಸಂಪೂರ್ಣವಾಗಿ ನಂಬಿಕೆ ಕಳೆದುಕೊಂಡುಬಿಟ್ಟಿದ್ದಾನೆ– ಇವನೊಬ್ಬ 'ಕಾಫಿರ' ಅಂತನ್ನತೊಡಗಿದರು. ಇನ್ನು ಹಿಂದೂಗಳಿಗೆ, ಚೌಧರಿಯವರು ಈಗಾಗಲೇ ಸಾಕಷ್ಟು ಶುದ್ಧರಾಗಿಬಿಟ್ಟಿದ್ದಾರೆ–ಅವರನ್ನು ಮತಾಂತರಗೊಳಿಸಲು ಪಕ್ವಕಾಲ ಅಂದುಕೊಂಡರು....ಮುಲ್ಲಾಗಳು ಮಸೀದಿಗಳಲ್ಲಿ ಉದ್ದುದ್ದ ಧರ್ಮೋಪ ದೇಶಮಾಡಿ ಜನಜಾಗೃತಿಗಾಗಿ ಪ್ರಯತ್ನಿಸತೊಡಗಿದರು. ಹಿಂದೂಗಳು ಏಕತೆಯ ಧ್ವಜ ಎತ್ತಿಹಿಡಿದರು. ಪ್ರತಿಯೊಬ್ಬ ಮುಸ್ಲಿಮನಲ್ಲಿಯೂ ತಾನೊಬ್ಬ 'ಮುಸ್ಲಿಂ' ಎಂಬ ಭಾವನೆಯಿರುವಂತೆ ಈಗ ಪ್ರತಿಯೊಬ್ಬ ಹಿಂದುವೂ ತಾನೊಬ್ಬ 'ಹಿಂದೂ' ಎಂಬ ಪ್ರಜ್ಞೆಯನ್ನು ತುಂಬಿಕೊಳ್ಳತೊಡಗಿದನು. ಠಾಕೂರ ಈ ಧಾರ್ಮಿಕ ಪ್ರವಾಹ ದಲ್ಲಿ ಕೊಚ್ಚಿಹೋದನು. ಉತ್ಸಾಹದ ಬುಗ್ಗೆಯಾದ ಅವನು ಸಹಜವಾಗಿ ಹಿಂದೂ ಗುಂಪಿನ ನೇತಾರನಾಗಿಬಿಟ್ಟನು. ಇದುವರೆಗೆ ಯಾವ ಧಾರ್ಮಿಕ ಭಾವನೆಯನ್ನೂ ಹೊಂದದ ಅವನು ಇಂದು ಧರ್ಮದ ಹೆಸರಿನಲ್ಲಿ ಕಾಲುಕೆರೆದು ಜಗಳಕ್ಕೆಳಸುವ ಮಟ್ಟಿಗೆ ಬಂದನು. ಮುಸ್ಲಿಮರು, ಅವರು ಸಿಗದಿದ್ದರೆ ಒಂದಿಷ್ಟು ಚಮ್ಮಾರರನ್ನಾ ದರೂ ಹಿಡಿದು ಅವರ ಶುದ್ಧೀಕರಣ ಕ್ರಿಯಾವಿಧಿ ಏರ್ಪಡಿಸತೊಡಗಿದನು.

ಚೌಧರಿ ಸಾಹೇಬರ ಉಳಿದ ಆಳುಗಳೂ ಈ ಧಾರ್ಮಿಕ ಉತ್ತೇಜನದ ಪ್ರವಾಹ ದಲ್ಲಿ ಸಿಕ್ಕಿಹಾಕಿಕೊಂಡರು. ಮಸೀದಿಯ ಕಡೆಗೆ ಎಂದೂ ಸುಳಿದಾಡದಂತಹ ಮುಸ್ಲಿಮರು ಇಂದು ಪ್ರತಿನಿತ್ಯ ಐದು ಸಲ ನಮಾಜು ಮಾಡುವವರಾಗಿದ್ದರು. ಇನ್ನು ಗುಡಿಯೊಳಗೆ ಹಣಿಕಿ ನೋಡದ ಹಿಂದುಗಳು ಪ್ರಾತಃಕಾಲ, ಸಾಯಂಕಾಲ ಗಳೆರಡೂ ಹೊತ್ತು ಗುಡಿಗೆ ಹೋಗಿ ಪೂಜೆ–ಮಂಗಳಾರತಿ ಮಾಡಿಸತೊಡಗಿದರು. ....ಹಿಂದೂಗಳು ಇಲ್ಲಿ ಬಹುಸಂಖ್ಯಾತರು. ಬಲಶಾಲಿಯಾದ ಭಜನಸಿಂಗ್‌ನು ಇವರಿಗೆ ಮುಖ್ಯಸ್ಥನಾದ. ಇಲ್ಲಿಯ ತನಕ ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿದ್ದರೂ ಹಿಂದೂ ಗಳನ್ನು ಹೆದರಿಸುತ್ತಿದ್ದರು. ಯಾಕೆಂದರೆ ಇವರಲ್ಲಿ ಒಗ್ಗಟ್ಟೆನ್ನುವುದು ಇರಲಿಲ್ಲ. ಈಗ ಅವರು ಒಂದಾದರು–ಸಂಘಟಿತರಾದರು....ಈಗ ಕೇವಲ ಒಂದು ಮುಷ್ಟಿ ತುಂಬ ಇದ್ದ ಮುಸ್ಲಿಮರು ಇವರನ್ನು ಹೇಗೆ ಎದುರಿಸುವುದು ?

ಹೀಗೇ ಒಂದು ವರ್ಷ ಕಳೆಯಿತು. ಇನ್ನೊಂದು ಜನ್ಮಾಷ್ಟಮಿ ಸಮೀಪಿಸಿತು. ಹಿಂದಿನ ವರ್ಷದ ಕಹಿ ಅನುಭವವನ್ನು ಹಿಂದುಗಳು ಮರೆತಿರಲಿಲ್ಲ. ಈ ಹಳೆಯ

[illegible] ಕಾಗದಗಳಿಂದಲೇ [illegible]....
[illegible]
[illegible]
[illegible]
[illegible] ಮೆರವಣಿಗೆ [illegible]
[illegible] ಮೆರವಣಿಗೆ [illegible]
[illegible] ಜನರನ್ನು
[illegible] ಮೆರವಣಿಗೆ
[illegible] ಕಹಳೆಗಳು [illegible] ಡೋಲು
[illegible] ಮೆರವಣಿಗೆಯು [illegible] ಯುವಕರ [illegible]
ಇದ್ದಿತು.

[illegible]. ಯುವಕರು ತಮ್ಮ [illegible] ಹಿಗ್ಗಿನಿಂದ [illegible]. ಅಕ್ಕ ಪಕ್ಕ ನೆರೆದಿದ್ದವರು ಹತ್ತಿರ ಹತ್ತಿರ ಬಂದು ಮೆರವಣಿಗೆ [illegible] ಬಂಧಿಸಿದಂತೆ [illegible]. ಈಗ [illegible] ಮಾಡಿದರು. [illegible] ಡೋಲುಗಳು [illegible]. ಜನರ ಉತ್ಸಾಹದ ಕೇಕೆ ಮುಗಿಲು ಮುಟ್ಟಿತು. ಆಗ ಮೆರವಣಿಗೆ [illegible] ಮುಂದೆ ಬಂದು ನಿಂತಿತ್ತು.

[illegible] ಹೊರಗೆ ಬಂದು 'ಈಗ [illegible] ನಿಮ್ಮ ವಾದ್ಯಗೋಷ್ಠಿ ನಿಲ್ಲಿಸಿ' ಅಂದರು. [illegible] 'ಆಗೋದಿಲ್ಲ' ಅಂದ.

'ವಾದ್ಯ ನಿಲ್ಲಿಸಲಿಕ್ಕೇ ಬೇಕು'

'[illegible] ನಿಲ್ಲಿಸಬೇಕು ?'

'[illegible] ನಿಮ್ಮ [illegible]. ಈ [illegible]'

[illegible] 'ಹಾಗಾದರೆ [illegible] ನಮ್ಮ ತಯಾರಿಯೊಳಗ

ನಾವು ಅದೀವು, ಇದು ನಮ್ಮ ಧರ್ಮದ ಪ್ರಶ್ನಾ ಐತಿ. ನಮ್ಮ ನಂಬಿಕೀ ಪ್ರಶ್ನಿ ಐತಿ' ಅಂತಂದ.... ಮಸೂತಿಯೊಳಗಿಂದ ಇನಷ್ಟ ಮಂದಿ ಹೊರಗಬಂತು. ಅವರೆಲ್ಲಾ ಡೋಲುಬಾರಸೂದನ್ನ ತಕ್ಷಣ ನಿಲ್ಲಿಸಬೇಕಂತ ಒತ್ತಾಯಮಾಡಿದರ ಡೋಲುಗೋಳು ಮಾತ್ರ ಇನ್ನಷ್ಟು ಜೋರಾಗಿ ನುಡಿಯಲಿಕ್ಕೆ ಶುರುಮಾಡಿದವು. ಹಿಂಗ ಒಂದಕ್ಕೆ ಒಂದು ಸೇರಿ ಪರಿಸ್ಥಿತಿ ಹದಾ ತಪ್ಪಲಿಕ್ಕತ್ತಿತು. ಒಬ್ಬ ಮುಲ್ಲಾ, ಭಜನಸಿಂಗಗೆ-ಏನಲೇ ಏ ಕಾಫಿರ-ಅಂದ. ಇವ ಸಿಟ್ಟಗೆದ್ದು ಅವನ ಗಡ್ಡಾ ಹಿಡದು ಎಳದ. ತಕೋ....ಗದ್ದಲ ಶುರುವಾತು. ವಿವೇಕಶೂನ್ಯರಾದ ಮಂದಿ ನುಗ್ಗಿ ಕೈಗೆ ಸಿಕ್ಕವರನ್ನು ಜಜ್ಜತೊಡಗಿದರು ..ಇದರೊಳಗೆ ಯಾರ ಕೈ ಮ್ಯಾಲಾತು-ಯಾರ ಕೈ ಕೆಳಗಾತು ಅಂತ ಯಾರಿಗೂ ತಿಳಿಯದಂತಾ ಗೊಂದಲ ಇತ್ತು. ಹಿಂದೂಗಳು-ಅವರ ಸೊಕ್ಕು ಪೂರಾ ಮುರದಿವು.... ಅಂತ ಅಂತಿದ್ದರೆ ಮುಸ್ಲಿಮರು-ಇನ್ನ ಮುಂದ ಎಂದೆಂದೂ ತಲೀ ಎತ್ತಧಂಗ ಕೊಟ್ಟೆವು ನೋಡು ಅಂತ ಅಂತಿದ್ದರು. ಈ ವಾದಗಳ ಗೊಂದಲದೊಳಗೆ ಎಲ್ಲಾರೂ ಒಪ್ಪಿಗೊಳ್ಳೂ ಮಾತ ಅಂದರ ಭಜನಸಿಂಗ್‌ನ ಅತಿ ಮಾನುಷ ಶಕ್ತಿ. ಮುಸಲ್ಮಾನರು-ಈ ಪಾಪಿ ಒಬ್ಬ ಇಲ್ಲದಿದ್ದರ ಇಂದ ಒಬ್ಬ ಹಿಂದೂ ಸೈತ ಜೀವಂತ ಹೋಗತಿದ್ದಿಲ್ಲ ಎಂದು ಪರಿತಪಿಸುತ್ತಿದ್ದರೆ ಹಿಂದೂಗಳಿಗೆ ಭಜನಸಿಂಗ್‌ನೆಂದರೆ ಸಾಕ್ಷಾತ್ ಮಾರುತಿಯ ಅವತಾರ ಅನಿಸಿಬಿಟ್ಟಿತು. ಅತುಲ ಪರಾಕ್ರಮಿ-ರಾಮುಬಂಟ ಸಾಕ್ಷಾತ್ ಹನುಮಾನ್ !...ಅವನ ದೊಣ್ಣೆಯ ಒಂದೇ ಒಂದು ಏಟು ತಿಂದ ಒಬ್ಬೊಬ್ಬ ಮುಸ್ಲಿಮನೂ ನಿಶ್ಚೇಷ್ಟಿತನಾಗಿ ಬಿದ್ದಿದ್ದ !

ಜನ್ಮಾಷ್ಟಮಿಯ ಉತ್ಸವ ಮುಗಿದಿತು...ಚೌಧರೀ ಸಾಹೇಬರು ತಮ್ಮ ದಿವಾನ ಖಾನೆಯಲ್ಲಿ ಹುಕ್ಕಾ ಸೇದಿಕೋತ ಕೂತಿದ್ದರು. ಅವರ ಮುಖ ಸಿಟ್ಟಿನಿಂದ ಕೆಂಪಾಗಿದೆ. ಹುಬ್ಬುಗಳು ಗಂಟಿಕ್ಕಿವೆ...ಕಣ್ಣಿನಿಂದ ಕಿಡಿಹಾರುತ್ತಿವೆ....ಹುಂ....ದೇವರ ಮನೀ ಹೊಲಸು ಮಾಡಿದರಂತೆ....!....ಈ ವಿಚಾರದಿಂದ ಅವರ ಎದಿ ಬಿರಿದಂಗಾಯಿತು.... 'ಮಸೀದಿಯ ಹೋಗಿನ ಜಾಗಾ ಇವರ ಹೊಡದಾಟಕ್ಕ ಸಾಕಾಗತಿರಲಿಲ್ಲೇನು... ದೇವರ ಮುಂದನ್ನ ರಕ್ತಪಾತ ! ಗುಡಿ ಅನ್ನುವುದು ಹೆಂಗ ಭಗವಂತನ ಮನಿಯೋ ಹಂಗ ಮಸೀದಿ ಅನ್ನೂದು ಭಗವಂತನ ನಿವಾಸ...ಗುಡಿಯ ಪಾವಿತ್ರ್ಯ ಹಾಳುಮಾಡಿದ ಮುಸ್ಲಿಮನಿಗೆ ಶಿಕ್ಷಾ ಸಿಕ್ಕಂಗ ಮಸೀದಿಯನ್ನು ಹಾಳುಮಾಡಿದ ಹಿಂದೂಗೂ ಶಿಕ್ಷಾ ಆಗಬೇಕು...ಈ ಕೆಲಸ ಮಾಡಿದವನು ಠಾಕೂರನಂತೆ ! ಇಂಥಾ ಕೆಲಸ ಮಾಡಿದ ನನ್ನ ಅಳಿಯನ್ನ ಕೊಂದ ಠಾಕೂರನ್ನ ಈಗ ಈ ಕೆಲಸ ಮಾಡ್ಯಾನ....ಇವನೂ ಇಂಥಾವ ಅಂತ ಗೊತ್ತಿದ್ದರ ನಾನು ಇವನ್ನ ಉಳಿಸಲಿಕ್ಕೆ ಹೋಗತಿದ್ದಿಲ್ಲ. ಫಾಸೀ ಆಗಿ ಸತ್ತ ಹೋಗಲೆಂತ ಬಿಡತಿದ್ದೆ...ಠಾಕೂರ್...ನನ್ನ ಜೀವಕ್ಕ ತನ್ನ ಜೀವಾನ್ನ ಪಣ ಇಟ್ಟಂಥಾ

ಸ್ವಾಮಿಭಕ್ತ ಬಂಟ....ನನ್ನ ಕೊಪಲಿಗೆ ಸೈತ ಧಕ್ಕಿ ಆಗಧಂಗ ನೋಡಿಕೊಂಡವನು.... ಆದರ ಅಂವ ದೈವದ್ರೋಹದ ಕೆಲಸಾ ಮಾಡ್ಯಾನ....ಅಂವಗ ನರಕದ ಶಿಕ್ಷಾ ಸಿಗ ಬೇಕು . . ದ್ರೋಹಿ.... ನರಕದ ಘೆಂಕಿಯೊಳಗ ಬೇಯಬೇಕು ..'... ಚೌಧರಿಯವರ ಮನಸಿನೊಳಗ ಈ ತಳಮಳ ನಡದಿದ್ದಾಂಗs ಭಜನಸಿಂಗ್ ಅವರ ಮುಂದ ಪ್ರತ್ಯಕ್ಷ ನಾಗಿದ್ದ.

ಕೆಂಗಣ್ಣು ಬಿಡುತ್ತ ಠಾಕೂರನನ್ನು ಕೇಳಿದರು-'ನೀ ಮಸೀದೀಯೊಳಗ ಹೊಕ್ಕಿದ್ದಿ ಏನು ?' ಠಾಕೂರ್ ಅಂದ-'ಧಣೇರs.... ಮುಸಲ್ಮಾನರೋಳು ನಮ್ಮ ಮೈಮ್ಯಾಲ ಬಿದ್ದರು'.

'ನಾ ಕೇಳಿದ್ದಕ್ಕ ಮೊದಲ ಉತ್ತರಾ ಕೊಡು...ಹೇಳು...ನೀ ಮಸೀದೀಯೊಳಗ ಹೊಕ್ಕಿದ್ದೇನು ?'

'ಮಸೂತಿಯೊಳಗಿಂದ ಅವರು ಕಲ್ಲು ಒಗೀಲಿಕ್ಕತ್ತಿದರು. ಅವರನ ಹಿಡೀಲಿಕ್ಕೆ ಮಸೂತ್ಯಾಗ ಹೋಗಬೇಕಾತು'.

'ಮಸೀದೆಂದರ ದೇವರಮನಿ ಅನ್ನೂದು ನಿನಗ ಗೊತ್ತದ ಇಲ್ಲೋ ?'

'ಗೊತ್ತಿರದ ಏನ್ರೀ ಧಣೇರs...'

'ಅದೂ ಗುಡಿಯಷ್ಟs ಪವಿತ್ರಂತ ನಿನಗ ಗೊತ್ತದ ಹೌದಲ್ಲೋ ?' ಠಾಕೂರ ಏನೂ ಉತ್ತರಿಸದಾದ. ಚೌಧರಿಯವರು ಮತ್ತು ತಾವs ಹೇಳಲಿಕ್ಕತ್ತಿದರು.

'ನೋಡು ದೇವಸ್ಥಾನ ಹಾಳು ಮಾಡಿದ ಮುಸಲ್ಮಾನಗ ಏನ ಶಿಕ್ಷಾ ಆತೋ ಆ ಶಿಕ್ಷಾ ಮಸೀದೀ ಹಾಳುಮಾಡಿದವಗೂ ಆಗಬೇಕು'

ಭಜನಸಿಂಗ್ ಮೌನಿಯಾದ, ಅವ ಚೌಧರಿಯವರು ಇಷ್ಟು ಸಿಟ್ಟಿಗೆದ್ದದ್ದನ್ನ ಎಂದೂ ನೋಡಿರಲಿಲ್ಲ.

'ನೀನು ನನ್ನ ಅಳಿಯನ್ನ ಕೊಂದಿ. ಆದರ ನಿನ್ನ ನಾ ಯಾಕ ಉಳಿಸಿಕೊಂಡೆ ? ಯಾಕಂದರ ನನ್ನ ಅಳಿಯ ಮಾಡಿದ ದೈವದ್ರೋಹಕ್ಕ ನೀ ಕೊಟ್ಟ ಶಿಕ್ಷಾ ಬರೋಬ್ಬರಿ ಆಗಿತ್ತು. ಇಂಥಾ ತಪ್ಪಿಗೆ ನನ್ನ ಮಗನ್ನ ಅದ್ಯಾಕ ಸ್ವಂತ ನನ್ನ ಕೊಂದರೂ ನನಗ ತಪ್ಪ ಅನಸೂದುಲ್ಲ. ಆದರ ಇಂದ ನೀನs ಅಂಥಾ ಪಾತಕ ಮಾಡೀ...ಅಲ್ಲೇ ಆ ಆ ಮಸೀದೀ ಒಳಗs ಯಾರರೆ ನಿನ್ನ ಕೊಂದು ನರಕಕ್ಕೆ ಕಳಿಸಿದ್ದರೆ ನನಗೆ ಸಂತೋಷ ಆಗತಿತ್ತು...ನಿರ್ಲಜ್ಜ ಹುಳಧಂಗ ಉಳಿದಬಂದೀ. ದೇವರು ನಿನ್ನ ಹಂಗs ಬಿಡತಾನಂತ ಮಾಡೀ ಏನು ? ...ಹೇಳು... ನೀ ಮಾಡಿದ ಕೆಲಸ ಭಗವಂತನ ಅಪಮಾನ ಹೌದಲ್ಲೋ ?' ಚೌಧರಿಯವರ ನಿಚ್ಚಳ ಪ್ರಾಮಾಣಿಕವಾದ ಧಾರ್ಮಿಕತೆಯ ಮುಂದೆ

ಠಾಕೂರನಿಗೆ ತಾನು ನಿರಪರಾಧಿ ಎಂದು ಹೇಳಲು ಸಾಧ್ಯವೇ ಇರಲಿಲ್ಲ. ಅವನು ತಲೆ ತಗ್ಗಿಸಿ 'ಹೌದು ಧಣೇರ್ರ... ನಾನೂ ಇಂಥಾ ಪಾಪ ಮಾಡಿದೆ'.

'ಇಂಥಾ ಪಾಪ ಮಾಡಿದ್ದಕ್ಕ ಹಿಂದ ನೀನ್ರ ಏನ ಶಿಕ್ಷಾ ಕೊಟ್ಟೆಯೋ ಅದ್ರ ಶಿಕ್ಷಾ ಅನುಭವಿಸಲಿಕ್ಕೆ ನೀ ತಯಾರ ಇದ್ದೀ ಹೌದಲ್ಲೋ'.

'ಧಣೇರ್ರ... ದುಲ್ಹಾಮಿಯಾನ (ಅಳಿಯನ) ಗುರತ್ರ ಹತ್ತಿರಲಿಲ್ಲ....'

'ಏ ...ಇಲ್ಲಿ ನೋಡು. ಆಗ ನೀ ಅವನ್ನ ಕೊಂದಿರದಿದ್ದರ ಸ್ವತಃ ನಾನ್ರ ಅವನ್ನ ಕೊಲತಿದ್ದೆ. ಹಂಗಂತ್ರ ನಿನ್ನ ಬಿಡುಗಡೆ ಮಾಡಿಸಿದ್ದು.... ಈಗ ನೀನು ಮಾಡಿದ ದೈವದ್ರೋಹಕ್ಕೆ ನಾನು ಶಿಕ್ಷಾ ಕೊಡತನು... ನಿನ್ನ ಪೋಲೀಸರಿಗೆ ಕೊಡೂದುಲ್ಲ. ಕಾಯ್ದೆಶೀರ ಆದರ ನಿನಗ ಬರೇ ಸ್ವಲ್ಪ ದಿವಸ ಜೇಲಿಗೆ ಹಾಕತಾರು...ನನ್ನ ನಂಬಿಕಿ ಹೇಳೂ ಪ್ರಕಾರ ನಿನ್ನ ತಲೀ ತಗೀಬೇಕು.... ಠಾಕೂರ್.... ನನಗ ನಿನ್ನ ವ್ಯಾಲ ಬ್ಯಾರೇ ಏನೂ ಸಿಟ್ಟಿಲ್ಲ. ನೀ ನನ್ನ ಗೆಳ್ಯಾ ಇದ್ದಂಗ ಇದ್ದಿ. ನನ್ನ ಪ್ರಾಣ ಉಳಸಾಕ ನಿನ್ನ ಜೀವಾ ಪಣಕ್ಕೆ ಹಚ್ಚ ತಿದ್ದಿ ನನಗ ಇಂದ ಸಂಕಟ ಆಗಾಕತ್ತೇತಿ...ಆದರೆ ಅದ ನನಗ ಲೆಕ್ಕಕ್ಕಿಲ್ಲ... ನಾ ನಿನ್ನ ಕೊಲ್ಲಾಕ ಬೇಕು...,'

–ಅಂತಂದು ಚೌಧರಿಯವರು ತಮ್ಮ ಖಡ್ಗ ಹಿರದು ಠಾಕೂರನ ಮುಂದ ನಿಂತರು.

ಇದು ಅಗದೀ ದೃಶ್ಯ. ಬಿಳೀ ಕೂದಲಿನ ಬಾಗುಬೆನ್ನಿನ ಮುದುಕ ಒಬ್ಬ ಎಳೆವಯದ ಬಲಶಾಲಿಯಾದ ತರುಣನ ಮುಂದೆ ಖಡ್ಗಾ ಹಿಡಕೊಂಡು ನಿಂತನೆ ! ಠಾಕೂರ್ ತನ್ನ ದೊಣ್ಣೆಯ ಒಂದೇ ಒಂದು ಹೊಡೆತದಿಂದ ಚೌಧರಿಯವರ ಮಗ್ಗಲಾ ಮುರಿದು ಅಲ್ಲಿಂದ ನಡದು ಹೋಗಬಹುದಿತ್ತು. ಆದರ ಅವ ತಲೀ ಬಗ್ಗಿಸಿಕೊಂಡು ನಿಶ್ಚಲವಾಗಿ ನಿಂತುಬಿಟ್ಟಿದ್ದ...ಠಾಕೂರನಿಗೆ ತನ್ನ ಎದುರುಗಡೆ ನಿಂತಿರುವ ಮನುಷ್ಯನ ಒಂದೊಂದು ಎಳೆಯ ಬಗೆಗೂ ಆಳವಾದ ಗೌರವ ಇದ್ದಿತು. ಆದರೆ ಚೌಧರಿ ಸಾಹೇಬರು ಇಷ್ಟು ಆಳವಾದ ಧಾರ್ಮಿಕ ಭಾವನೆ ಹೊಂದಿದವರೆನ್ನುವುದು ಮಾತ್ರ ಅವನಿಗೆ ತಿಳಿದಿರಲಿಲ್ಲ. ಬಾಕೀ ಮಂದಿ ಭಾವಿಸಿದಂತೆ ಚೌಧರಿಯವರು ಒಳಗಿನ ಒಳಗೆ ಹಿಂದೂ ಆಗಿದ್ದಾರೆ ಎಂದು ಅವನು ತಪ್ಪಾಗಿ ಭಾವಿಸಿದ್ದ ...ತನ್ನನ್ನು ನೇಣುಗಂಬದಿಂದ ಉಳಿಸಿದ ಚೌಧರಿಯವರ ವಿರುದ್ಧ ಅವನಲ್ಲಿ ಹಿಂಸಾತ್ಮಕವಾದ ಇಲ್ಲವೇ ಪ್ರತೀಕಾರದ ಭಾವನೆ ಮೂಡಲಿಲ್ಲ. ಅವನು ಶೂರನಂತೆ ನಿರ್ಭಯನಾಗಿದ್ದನು. ಕಪಟ ಮೋಸ ಗಳನ್ನು ಅರಿಯದ ಮುಗ್ಧತೆಯಿಂದ ಚೌಧರಿಯವರ ಮುಂದೆ ತಲೆ ತಗ್ಗಿಸಿ ನಿಂತು ಕೊಂಡಿದ್ದನು.... ಆ ಕ್ಷಣದಲ್ಲಿ ಅವನಲ್ಲಿ ತುಂಬಿದ ಭಾವ ಕ್ರೋಧವಾಗಿರಲಿಲ್ಲ. ಅದು ಅಪರಾಧೀ ಪ್ರಜ್ಞೆಯಾಗಿತ್ತು. ಸಾವಿನ ಬರುವಿಕೆ ಅವನಲ್ಲಿ ಹುಟ್ಟಿಸಿದ್ದು ಭಯವನ್ನಲ್ಲ, ಕೇವಲ ವಿಷಾದವನ್ನ !

...ಚೌಧರಿಯವರು ಖಡ್ಗ ಹಿಡಿದು ಕೈಯೆತ್ತಿ ನಿಂತೇ ಇದ್ದಾರೆ. ಅವರ ನಂಬಿಕೆ 'ಕೊಲ್ಲು ಇವನನ್ನ' ಅಂತ ಆಣತಿ ನೀಡುತ್ತಿದ್ದರೆ ಅವರ ಸಾತ್ವಿಕತೆ 'ಹೋಗಲಿ.... ಬದುಕಲು ಬಿಡು' ಎಂದು ಸೂಚಿಸುತ್ತಿತ್ತು. ಅವರು ಸಂದಿಗ್ಧಕ್ಕೆ ಸಿಕ್ಕಿಹಾಕಿಕೊಂಡಿದ್ದರು... ಠಾಕೂರನಿಗೆ ಇವರ ಧರ್ಮಸಂಕಟ ತಿಳಿಯುತ್ತಿತ್ತು. ಗಂಟಲು ಕಟ್ಟಿದ ಅವನು ಏನು ನುಡಿದ... 'ಧಣೇರs ನಿಮ್ಮ ಹೂವಿನ ಹಂತಾ ಮನಸು ನನ್ನ ಕೊಲ್ಲಾಕ ಬಿಡೂದುಲ್ಲ. ನೀವs ಹಾಲಿಕ್ಕಿ ದೊಡ್ಡವನ್ನ ಮಾಡಿದ ಈ ನಿಮ್ಮ ಸೇವಕನ್ನ ಕೊಲ್ಲಾಕ ನಿಮ್ಮ ಕೈ ವರ್ಯಾಲಕ ಏಳವಲ್ಲತು ...ಈ ನನ್ನ ಶಿರಾ ಅನ್ನೂದು ನಿಮಗೆ ಸೇರಿದ್ದು. ಇದ ನಿಮ್ಮ ವಸ್ತು. ಇದನ್ನ ನೀವು ಯಾವಾಗ ಬೇಕಾದಾಗ ತಗೋಬಹುದು...ನಾಳೆ ಬೆಳಿಗ್ಗೆ ನೀವು ಯಾರನರೇ ನಮ್ಮ ಮನೆಗೆ ಕಳಿಸಿ ಈ ಶಿರವನ್ನ ತರಿಸಿಗೋರಿ... ಈ ಸದ್ಯೇಕ್ಕ ನಾನು ಇದನ್ನ ತಗದು ನಿಮ್ಮ ಪಾದದ ಮುಂದ ಇಡತಿದ್ದೆ. ಆದರೆ ಊರಾಗ ನಿಮ್ಮ ಏರುವ್ದ ದಂಗೇ ಏಳತೈತಿ...ನನ್ನ ಮನಿಯೊಳಗಾದರ ಇದ ಯಾರ ಮಾಡದರು ಏನ ಹಕೀಕತ್ತಂತ ಯಾರಿಗೂ ತಿಳ್ಯೂದುಲ್ಲ.. ನಾಳೆ ಬೆಳಿಗ್ಗೆಂದರ ಒಬ್ಬ ಮನಶಾನ್ನ ಕಳಿಸಿಬಿಡ್ರಿ... ನನಗ ತಿಳೀದನs ನಿಮ್ಮ ಮನಸಿಗೆ ನೋವ ಮಾಡಿದ್ದರ ನನ್ನ ಕ್ಷಮಿಸಬೇಕರೀ...ನಾ ಬರತನರೀ...' ಎಂದು ನುಡಿದ ಠಾಕೂರ್ ಭಜನಸಿಂಗ್ ಅಲ್ಲಿಂದ ನಿಧಾನವಾಗಿ ನಡೆದುಹೋದನು ... ●

ಮತಾಂಧತೆಯು ಹಿಂದೂ ಧರ್ಮದ ಮೇಲೆ ಸಮವಸ್ತ್ರದ ಏಕತೆಯನ್ನು ತೊಡಿಸಲು ಅನೇಕ ಸಾರಿ ಪ್ರಯತ್ನಿಸಿದೆ. ಅವರ ಉದ್ದೇಶಗಳು ಎಲ್ಲ ಸಮಯದಲ್ಲೂ ಸಂಶಯಾಸ್ಪದವಾಗಿಲ್ಲ. ಅದರ ಚಾಲನಾ ಶಕ್ತಿ ಕೆಲವು ವೇಳೆ ಧನ್ಯತೆ ಮತ್ತು ಬಲದ ಹಂಬಲದಿಂದಾಗಿರಬಹುದು. ಆದರೆ ಅದರ ಪರಿಣಾಮವು ಮಾತ್ರ ಯಾವಾಗಲೂ ವಿನಾಶಕಾರಿಯಾಗಿದೆ. ಭಾರತದ ಇತಿಹಾಸದ ಯಾವುದೇ ಕಾಲದಲ್ಲಿ ಮತಾಂಧ ಹಿಂದೂ ಧರ್ಮ ಭಾರತಕ್ಕೆ ಏಕತೆಯನ್ನಾಗಲಿ, ಒಳ್ಳೆಯದನ್ನಾಗಲಿ ಉಂಟು ಮಾಡಿರುವುದು ನನಗೆ ತಿಳಿಯದು. ಭಾರತದಲ್ಲಿ ಏಕತೆ ಮತ್ತು ಸಮೃದ್ಧಿಗಳಿದ್ದ ಕಾಲದಲ್ಲೆಲ್ಲಾ ಜಾತಿ, ಮಹಿಳೆ, ಆಸ್ತಿ ಮತ್ತು ಸಹಿಷ್ಣುತೆಗಳಿಗೆ ಸಂಬಂಧಿಸಿದಂತೆ ಹಿಂದೂ ಧರ್ಮದ ಉದಾತ್ತ ಗುಣ ಪ್ರಬಲವಾಗಿದ್ದುದು ಕಂಡು ಬಂದಿದೆ. ಹಿಂದೂ ಧರ್ಮದ ಮತಾಂಧತೆಯ ತೂಗುಯ್ಯಾಲೆ ಮೇಲ್ಮುಖವಾಗಿದ್ದಾಗಲೆಲ್ಲಾ ದೇಶದ ಸಾಮಾಜಿಕ ಮತ್ತು ರಾಜಕೀಯ ವಿಭಜನೆಗೆ ಕಾರಣವಾಗಿ ಭಾರತೀಯ ಸಮಾಜ ಮತ್ತು ರಾಷ್ಟ್ರ ತುಂಡು ತುಂಡಾಗಿ ಹೋಗಿದೆ. ಭಾರತವು ಛಪ್ಪನ್ನಾರು ದೇಶ–ರಾಜ್ಯಗಳಾಗಿ ವಿಭಜನೆ ಹೊಂದಿದಾಗಲೆಲ್ಲಾ ಮತಾಂಧತೆಯ ಹುಮ್ಮಸ್ಸು ಇತ್ತೋ ಇಲ್ಲವೋ ನನಗೆ ತಿಳಿಯದು. ಆದರೆ ಭಾರತೀಯ ಮನಸ್ಸಿನ ಮೇಲೆ ಉದಾತ್ತ ಹಿಂದೂ ಧರ್ಮ ತನ್ನ ಪ್ರಭಾವವನ್ನು ಹೊಂದಿದ್ದ ಕಾಲದಲ್ಲಿ ಮಾತ್ರ ದೇಶದ ಏಕತೆ ಸಾಧ್ಯವಾಯಿತು ಎಂಬುದು ನಿರ್ವಿವಾದವಾಗಿದೆ.

—**ಡಾ॥ ರಾಮ್ ಮನೋಹರ್ ಲೋಹಿಯಾ**

ಕವಿತೆಗಳು

1. ನವಿಲೆಲ್ಲಿ

ಎಷ್ಟು ಕಣ್ಣಿನ ನವಿಲೊ
ಯಾವ ಬಣ್ಣದ ನವಿಲೊ
ಕನಸು ಕಂಡರಿಸಿದ್ದು
ನೂರು ಸಾವಿರ ಕಣ್ಣು
ಕಣ್ಣು ತುಂಬಿದ ಬಣ್ಣ.

ಬಯಲ ರಂಗೋಲಿಯಲಿ
ಅಡಿ ಅಡಿಯ ಮೇಲಿರಿಸಿ
ಮುಡಿಕಟ್ಟಿ ಹೂ ಮುಡಿದ
ವಯ್ಯಾರಿ ಭುವನ ಮನೋಹರಿ
ಮಯೂರಿ

ಭೂಮಂಡಲದೆಚ್ಚರದ ಮುಸುಕೊಳಗೆ
ಕಟ್ಟಿರುವೆ ಗೊದ್ದ ಉದ್ದ
ಸುಡು ಬಂಡೆ ಕೋಟೆ
ಬ್ಲೇಡುಗುರು ಸೀಳು ಗಾಳಿ
ಇರುಳ ಗಾವಿಲ ಗೂಳಿ
ಕೆಣಕುವೀ ಮೌನದ ನಾಯಿ
ಸದ್ದೊಡೆದು, ವಿಹ್ವಲ ಕೂಗು
ಬಯಲ ಬಸುರಿನ ಹುತ್ತ ತೇಗು
ಭುಸಭುಸನೆ ಮೇಲೆದ್ದು ಉರಿಗೋಲು
ಉರಿ ಚಾಚಿ ಕೊಳ್ಳಿ ಕಾಲು ಸಾಲು
ಹಸುರಿನೆದೆ ಸುಟ್ಟು
ಕಂಗೆಟ್ಟ ಮುಖ ವಿಕಾರ
ನಿಟ್ಟುಸುರಿನಾಕಾಶ ಹೊಗೆ

ಆರಗಿನರಮನೆಯೊಳಗೆ
ಏಂಗಿ ತಾಪದ ಗೋರಿ
ಮೇಲೊಂದು ನವಿಲಗರಿ

೨

ಕುಣಿವಂಗಾಂಗ ಮಣಿದು
ಕುಂಕುಮ ಕೆಂಪು ಹಣೆ ಹಣೆಗೂ ಸೂಣೆದು
ಉರಿ, ಉರಿಯು ರಥವೇರಿ
ಧಗೆ. ಧಗೆಯು ಬೆನ್ನೇರಿ
ದೈವದ ದಾರಿಯಲಿ
ಕೂಸು ಕಸಿವಿಸಿ
ನಿತ್ರಾಣ ತಾಯಿ
ಎದೆ ಬಗಿದು
ಒಂದೊಂದೆ ನವಿಲ ಹೊರ ತೆಗೆದು
ಯಜ್ಞಕುಂಡಕ್ಕೊಗೆದು
ಗರಿ ಗರಿ ಬರಲು
ಕಾಸಿಗೊಂದು ನವಿಲು
ಕವಡೆಗೊಂದು ನವಿಲು

೩

ಮೆಟ್ಟುಗಲ್ಲಿಗೆ ಮೆಟ್ಟು
ಮುಟ್ಟು ಮೈಲಿಗೆ ಮಡಿಗಟ್ಟು
ಸಂಹಾರ ಗುಟ್ಟು ಗೊತ್ತಿರದೆ
ಕನಸುಗಳ ಬಿಚ್ಚಿ ಬಿತ್ತರಿಸಿದೆ
ಕೇಳುವ ಕಿವಿ ಕೋಟಿ
ನೋಡಿ ನೋಡಿ ಆಡುವಾಟವ ಬೆರಗು
ನೋಡುವ ಕಣ್ಣು ಕೋಟಿ
ಕಾಡಿ ಕಡುನೊಂದ ಮನ ಸೊರಗಿ
ಏಕಾಂಗಿ ಬೇಡಿ ಬೇಡಿ
ಬೇಡಿದೆ
ನವಿಲು ತಂಗೀ ನವಿಲು

೪

ಮೌನ ಮಸಣದ ಹಾದಿ
ಕರಕು ಬೂದಿ
ಎಳೆ ಬಿಸಿಲ ನುಂಗಿದ ಹಗಲು
ಹಗಲು ಕನಸಿನ ಇರುಳು
ತುಂಬಿ ತೂಗುವ ಮುಗಿಲು
ಕಣ್ಣು ಕಣ್ಣುಗಳಲ್ಲಿ ಭಯದ ಕರುಳು
ಹೊಯ್ದಾಡುತಿದೆ
ಒಂಟಿ ಜೀವದ ದೀಪ ಶೋಕ
ಭಣಗುಡುವ ಎದೆ ಸುಮ್ಮನೆ
ಕಾಯುತ್ತಿದೆ
ಒಂದೇ ಒಂದು ಹನಿಗಾಗಿ
ತೆರೆದ ಬಾಯೆತ್ತಿದೆ
ತೀರ ತೀರದ ವ್ಯೋಮ ಸುತ್ತ ತಿರುಗುತ್ತಿದೆ.

೫

ಅಗ್ನಿಬಸಿದು ಬೆಂದು ಬೆಂಡಾದ ನೆಲದೊಡಲು
ಸೀಳಿ ಚಿಮ್ಮಿದ ಒಂಟಿ ಹಸುರು ಗರಿಕೆ
ಮೇಲೆ ಇಬ್ಬನಿ ಹೊದಿಕೆ
ಎಷ್ಟೊಂದು ಬಣ್ಣಗಳ ಕಿರಣ ಹೊಳಪು
ಬೇರು ಮೂಲದ ನೀರು ನಿಧಿ
ಅವಿನಾಶಿ ಅಘನಾಶಿ ಕರುಣಾಸನ್ನಿಧಿ
ಒಡಲು ಭಂಡಾರ
ಮೇಲಷ್ಟೆ ಬೂದಿ.

2. ಗಿಣಿಗೆ

ಕೆಂಪು ಕೊಕ್ಕಿನ ಗಿಣಿಯೆ
ಹಸಿರು ಮೈಯಿನ ಗಿಣಿಯೆ
ಗಿಣಿಯೆ ಖಣಿಯೆ ನೆಲದ ಒಡವೆ
ಎಲ್ಲಿದ್ದೇ ಎಲ್ಲಿದ್ದೇ
ಎಲ್ಲಿಂದ ಬಂದೇ.

ಕುಂತಿರುವ ಕೊಂಬೆ ಮೀಟುತ್ತಿರುವೆ
ಹಾರಲೆಳಸುತ್ತಿರುವೆ
ಮೀರದುಳಿಯುತ್ತಿರುವೆ
ಬೆದರಿ ಅತ್ತಿತ್ತ ನೋಡುತ್ತಿರುವೆ
ತೀರ ಬಯಕೆಯ ಹಾಡು ಹಾಡುತ್ತಿರುವೆ.

ಸುತ್ತ ಕಣ್ಣೋಟಕ್ಕೆ ಸಿಕ್ಕಿದ್ದೇನು ?
ಊದಿ ತೂರಿದ ಬೂದಿ
ಸೆಡವು ತುಳಿದೀ ಹಾದಿ
ಹತ್ತು ನಿಟ್ಟಿಗೂ ಚೂಪು ತುದಿ.

ಗಾಳಿ ಚುಳು ಚುಳು ಸವರಿ
ರಣ ಬಿಸಿಲು ಬೆವರಿ
ಬೆಂಗಾಡಿನ ತರಗೆಲೆ ಹಾಸು
ರೆಂಬೆ ರೆಂಬೆಗೂ ಮುಳ್ಳು ಹೊದಿಕೆ.

ಮಲಗಿ ನೆಲ ಸುಸ್ತಾಗಿ
ದಣಿದ ಹೊಲ ಮುಲುಗಿ
ತುಕ್ಕು ನೇಗಿಲು ಮೂಲೆ
ನೊಗವಿರದ ಎತ್ತಿನ ತಲೆ.

ಸೊಲ್ಲಡಗಿ ನಾಯಿ ಬೊಗಳು
ಮೈ ರಘಲಿಸಿ ಕೈಕಾಲಾಡದ ಹಗಲು
ರೆಕ್ಕೆ ಪಟ ಪಟ ಸದ್ದು
ಮೇಲೊಂದು ಹಾರುವ ಹದ್ದು.

ಬಿಳಲು ರೆಕ್ಕೆಯ ಗಿಣಿಯೆ
ಗೂಡು ಹುಡುಕುತ್ತಿರುವೆ
ಗೂಡಿಗೆ ಹಾಡು ಕಟ್ಟುತ್ತಿರುವೆ
ಕಟ್ಟಿ ಹಾರುವಿಯೇನು ?

ಹದ್ದು ಮೀರಿದಾಕಾಶ ತೂಗುವ ನಿಲುವು
ಕೆಳಗೆ ಹಾಗದ ಗೆಲುವು
ನಡುವೆ ನೀನೇ ನೀನು
'ನೀನು' 'ನಾನು' ಏನೇನು ?
ಮುಂದೇನು ? ಮುಂದೇನು ?

—ಚಂದ್ರಶೇಖರ ತಾಳ್ಯ

3. ಆಕಾಶ ಮತ್ತು ನಾನು

ಈ ನೆಲದ ವೇದನೆ
ಸಂವೇದನೆಯ ಪ್ರತೀಕ ನಾನು
ಇಲ್ಲಿದ್ದು ಅಲ್ಲಿರುವ
ಭ್ರಮೆಯ ರೋಗಿಷ್ಟ ನಾನು !

ಬದುಕ ಸಮುದ್ರದಲಿ
ನಾವೆಯೊಂದರಲಿ
ಹುಟ್ಟು ಹಾಕುತ್ತ
ಗೊತ್ತಿರದ ಬಂದರ್ ಸೇರಬೇಕೆನ್ನುವ ಆಶೆ !

ಜನವರಿ–ಫೆಬ್ರುವರಿ ೧೯೯೧/೫೧

ತೂಫಾನು ಚಂಡಮಾರುತ
ಗಳ ಹೊಡೆದ
ತಿಮಿಂಗಲು ಮೀನುಗಳು
ನಾವೆಯುಡಿ ತುಡಿತ.

ನೆಲದ ಬದುಕಿನ ಕತೆ
ಕಲ್ಲು ಮುಳ್ಳಿನ ಹಾಡು
ಗುಡ್ಡ ಬೆಟ್ಟಗಳ ಕಾದಂಬರಿ
ಯಾವುದೂ ನನ್ನ ದಡ ಮುಟ್ಟಿ
                    ಮೈದಡವಲಿಲ್ಲ !

ನಾನು ಭೂಮಿಯಲ್ಲೇ
ಭೂಪಾಲನಾಗಬೇಕೆಂದು
ಬಹುಪಾಲು ಯುವ್ವನದ ವಯಸ್ಸು
                    ಕಳೆದೆ.
ಭೂಪಾಲನಾಗಲಿಲ್ಲ !

ಕಡೆಗೆ ಗೋಪಾಲನಾಗಲೂ
ಯಾವ ಗೋಪಿಕಾವನಕ್ಕೂ
ನಾನು ನುಗ್ಗಲಿಲ್ಲ
ಅದು ನನಗೆ ಬರಲಿಲ್ಲ.

ನೆಲದ ವೇದನೆ
ಸಂವೇದನೆಯ ಪ್ರತೀಕ ನಾನು
ಇಲ್ಲಿದ್ದೂ ಅಲ್ಲಿರುವ
ಭ್ರಮೆಯ ರೋಗಿಷ್ಟ ನಾನು !

ಈಗ ನನಗೊಂದು ಉಳಿದಿರುವ ಆಶೆ:
ಆಕಾಶ.

ಕಟ್ಟಬೇಕೊಂದು ಅಲ್ಲಿ ಅರಮನೆ.
ಮುಟ್ಟಬೇಕಿದೆ ನನ್ನ ಮನಸಿಗೆ
ಸಾವಕಾಶ
ಆ ಆಕಾಶ !

ಕಾಣದ ಲೋಕದ ರಂಜಕ ಬದುಕೇ
ಕಾಣುವ ಲೋಕದ ಭಯದ ಬದುಕಿಗಿಂತ
ಹೆಚ್ಚು ವಾಸಿ
ಇದರೆಲ್ಲ ಯಾರ ಚೌಕಾಶಿ !

—ಗವಿಸಿದ್ಧ ಎನ್. ಬಳ್ಳಾರಿ

4. ಕಲ್ಲಕೆರೆಯ ಹಾಡು

ಗಂಗಮ್ಮ ತಾಯೇರು ಶಿಂಪಾ ಆಗಿ ಹರಿದೋರು ಈಗೆಲ್ಲಿ
ಮಾಯವಾದಾರು ಕೆರೆಯೆಲ್ಲ ಕಿರಿದಾಗಿ ತೊರೆಯೆಲ್ಲ ಬರಿದಾಗಿ
ದಡವೆಲ್ಲ ಬೇಲಿಯು ಎಲ್ಲಿ ನೇರಳೆಹಣ್ಣು ಬೆಲವತ್ತ ಅತ್ತೀಯು
ಧುಮ್ಮ ಧುಮ್ಮ ಬಿದ್ದು ಈಜು ಹೊಡೆದೋರು.

೨

ಕಂಟು ಬೆಲ್ಲದ ಅಂಟು ಕೆಟ್ಟ ಕೊಬ್ಬರಿ ನಂಟು
ಊರ ಕೇರಿಯ ತುಂಬ ಬಸ್ಸಾಟವು.
ಮಳೆಹೊಯ್ದು ಕೆರೆಯಾಗಿ ಹರಿದು ಹೋದುವು ಎಲ್ಲಿ
ತೇಲಿ ಬಿಟ್ಬಾ ದೋಣಿ ಚಕ್ಕಮುಕ್ಕಳ ಕುಂತು ಕಂಡಂಥ ವಯ್ಯಾಳವ ಚಕ್ಕಳಗೊಂಬೆಗಳಾಗಿ
ಕುಣೀತ ಹೋದುವೆಲ್ಲಿ.

೩

ದೊಡ್ಡಮ್ಮ ದೇವರು–ಹುಡುಗಾಟವಲ್ಲ ಆಡಿಕೊಂಡರೆ ಕಣ್ಣು ಕೀಳುತಾಳೆ
ಕ್ವಾಣವೆಂದರೆ ಖುಷಿಯು ಕತ್ತು ಕೀಳುತಾಳೆ
ಅಡ್ಡಬಿದ್ದಂಥವರು ಹಂಗೆ ಮಲಗಿದರಲ್ಲ ಎದ್ದು ನಿಂತಂಥವರು
ಹಿಡುದು ಮೂಡಣ ದಿಕ್ಕು ಹೊರಟೆ ಹೋದರಲ್ಲ ಹಿಂಬಾಲಿಸುತ ಬೆಕ್ಕು.

೪

ಜಾತಿಯೆಂದರೆ ಜನಕೆ ತುಂಬ ತುಂಬಾ ಪ್ರೀತಿ ಮುಂದಹಾಸದ ಮಾತು
ಶುದ್ಧಾಂಗ ಸುಳ್ಳು. ಮಡಕೆಗಳ ಸುಟ್ಟೋರು ಸುಟ್ಟುತಲೆ ಹೋದರು
ತಾಳಿಯ ಕೊಟ್ಟೋರು ಮಾಡಕೂಡದು ಮದುವೆ ಮಾಡಿದರೆ ಬದುಕುವುದೆ
ಊರ ಹಿರಿಮೆ
ಕತ್ತೆ ಹೊರಲೇಬೇಕು ಕತ್ತಿ ಕಿರೆಯಲೇಬೆಕು ಇದು ಇದುವೇ ನಮ್ಮ ಸೀಮೆ.

೫

ಗಾಳಿ ಗರಾವು ಹಿಡುದು ಮೈ ತುಂಬಾ ತಿಂದೋರು ಪ್ರಾಣವನೆ ತೆತ್ತೋರು
ಸೂರ್ಯದೇವನ ಎದುರು ಬದುರಾದರು
ಏನ ಪ್ರಾರ್ಥಿಸಿ ಏನ ಪಡೆದರು ಏನನ್ನ ಕುಂತಿಯಂಥವರು
ಪಡೆದಂಥ ಕುಸುಮವನು ಹುಗಿದದ್ದು ಎಲ್ಲಿ–ಹಗೇವಿನೊಳಗು.

೬

ಭೂಮಿಯ ಅಳೆದವರು ಮರಗಳನು ಕಡಿದವರು ಅಕ್ಷರದ ಜುಟ್ಟು
ಬಿಡದವರು–ಸೋತರೆ ಸೋಲಲ್ಲ ಗೆದ್ದರೆ ಹಬ್ಬವು
ಹೆಬ್ಬಾಗಿಲ ತೋರಣವ ಕಿತ್ತದ್ದು ಯಾರ ದನವು
ಹಾಕಿ ಕಿತ್ತರೆ ಖಂಡ ಸೇದಿದರೆ ಗುಂಡಿಗೆ ರಕ್ತ ವಿಲಿವಿಲಿ ಒದ್ದಾಡುತಿರುವುದು
ಯಾರ ಮೈಯು

೭

ಎಲ್ಲಿ ಹೋದರು ಮುಂದಿ ದಾಪುಗಾಲನು ಇಟ್ಟು
ಅವರ ಅಂಗೈಯಿ ಇಸ್ಪೀಟು ಅಂಗಾಲು ಸಾರೋಟು
ಬಾಯಲ್ಲಿ ಜೈಮಿನಿ ದೇಹವೆಂಬೋದು
ಕಾಮನಂಬಿನ ಪಂಜರದ ಅರಮನೆಯು.

೮

ದೊಡ್ಡಯ್ಯನಂಥೋರು ಇಲ್ಲಿ ಸಂದವರಲ್ಲ ಅಲ್ಲಿ ಹೆಂಗೊ ಏನೊ, ಬೇಗೆಯಲಿ ಬೆಂದವರು
ಹೊತ್ತೊತ್ತಿನಿಟ್ಟಿಗೂ ಪಡಿಪಾಟಲು ಪಟ್ಟವರು
ಬರೆದ ಅಕ್ಷರ ನೋಡಿ ಮಾತು ಶುದ್ಧೋಚ್ಚಾರವು
'ಭಾರತ'ದ 'ಭಾಗವತ'ಗೆ ಮೈ ಕೈಯಿ ಇಸುಬು

೯

ಜಾತಿ ಒತ್ತಡವಲಿ ಪ್ರೀತಿ ಬಾಡುವ ವೇಳೆ
ಪ್ರೀತಿಯ ತಹತಹಕೆ ಎಲ್ಲಿ ಕೊನೆಯು

ನೊಂದ ಹೃದಯುಗಳೆಲ್ಲ ನಂದಿ ಹೋಗುವ ಮೊದಲು
ಎಲ್ಲಿಂದ ತರುವುದು ಪ್ರೀತಿಯೆಣ್ಣೆ

೧೦

ರಥಾವ ಕಟ್ಟಿದ ಬುಡುಬುಡಿಕೆ ಸಿದ್ಧನ ಮೈಯೆಲ್ಲ ಕಣ್ಣು
ಕಣ್ಣುಗಳೇ ಕಿವಿಗಳು ಆಲಿಸಿ ಹಾಲಕ್ಕಿ ಪಡೆದಂಥ ಶಕುನವನು
ಸಾರುತ್ತಾ ಕೇರಿಯಲಿ ಸಾಕಾಗಿ ಹ್ವಾ ಅಂತ ಕೂತಂಥ ಸ್ಥಳವೇ–ಹಣ್ಣುಳ್ಳ
ಆಲವೇ ನಿದಿರೆಯಾಟ
ಪಿನ್ನೆಲ್ಲಿ, ಮೈನವಿರೇಳಿತೇ ಗಿಳಿ ಬಂದು ಕುಂತವೆ ಮಾತು ಮಾತಾಡುತಾ ಇನ್ನು
ಶುರು ತಾಂಬೂಲ ರಂಗಿನೂಟ

೧೧

ಓ ಅ ಪೂರ್ವ ಕನಸಿನಂಥ ಮುಂಜಾವು; ಮಂಜಿನ ದುಪ್ಪಟಿ ಹೊದ್ದ ಬೆಟ್ಟದವ್ವನ ಬೆನ್ನು.
ಮೇಲಿಂದ ಕಚಗುಳಿ ಕೂಸುಮರಿ ಆಡಿ ಇಳಿದು ಬಂದಂಥವನು ಯಾರಿವನು
'ಯಾರೊ ನೀನು ?' ಎನಲು–ಮರ ಹೊಳೆದು ಗಿಡ ಬೆಳಗಿ ಹೂ ಬಿರಿದೊ ಎಲ್ಲಾ
ಕುಂತ ಹಕ್ಕಿಗೆ ರೆಕ್ಕೆ ಮೌನ ಕಣಿವೆಗೆ ಹಾಡು ಮರೆತ ಮಾತಿಗೆ ಸೃಷ್ಟಿಯ
ಹೊನಲು ಹರಿಯಿತಲ್ಲಾ.

೧೨

ಓ ಗಂಗಮ್ಮ ತಾಯೀರೆ ದೋಣಿಗಳ ತೇಲೀರಿ
ಚಿತ್ರ ಚಿತ್ತಾರಗಳ ಹೊತ್ತು ತನ್ನೀರೆ
ಪುಪ್ಪುಸಕೆ ಹೊಸಗಾಳಿ ಬೆಕ್ಕಸ ಬೆರಗೇಳಿ
ಥಕಥೈಯ ಕುಣಿವಂತೆ ಮಾಡೀರೆ.

೧೩

ಕಣ್ಣುಳ್ಳ ಒಲವೆ ಸುಳ್ಳುಗಳ ಮರೆಯಿಸು ಹಚ್ಚ ಹಸಿರೀನ
ಗಿಡದೇಳು ಹುಚ್ಚೆಳ್ಳು ಹೊಳೆಯಿಸು ನಕ್ಕ ನಲಿವೀನ
ನಕ್ಷತ್ರಗಳ ದಳವಾಗಿ ಅರಳೀಸಿ ಸೂರ್ಯಕಾಂತಿಯು ಬೆರಗು ಎದೆಯೊಳಗೆ
ಬೆಳೆಯಿತು ಓ ತಾಯಿ ಪುಣ್ಯ ನೆಲವೇ.

೧೪

ಚಂದ್ರಕಾಂತಾ ಚಕ್ಕಡಿಯೊಳಗೆ ನಾನು ನನ ಗೆಳತೀಯು
ಹಾಡುಕೋತ ಸಾಗುತೀವಿ ಜೊತೆ ಜೊತೆ
ಸಿಗಲಾರ ಸಿಗಲಾರ ಕಣ್ಣ ಮುಂದಣ ಸೂರ್ಯನು
ನಕ್ಕೂ ನಕ್ಕೂ ಸುಸ್ತಾಗಿ ಕಣ್ಮುಚ್ಚಿ ಮುಖವಿಟ್ಟಳು ಗೆಳತಿ ನನ್ನೆದೆಯ ಮೇಲೆ.

—ಕೆ. ಪಿ. ಮೃತ್ಯುಂಜಯ

5. ಕಲ್ಲು ಕರಗಿ

ಉದಮದದ ಹುಡುಗಿ
ಹದಿವಯಸ್ಸಿನ ಹಸಿಬಿಸಿ
ಭಾವನೆಗಳ ತಿದಿಯಲ್ಲಿ
ಬೇಯುತ್ತ ನಿಂತಾಗ
ಈಡುಜೋಡಿಲ್ಲದ ಗೌತಮನಿಗೆ
ಶಾಂತವಾಗಿ ಸಾಲಂಕೃತ
ಧಾರೆಯೆರೆದು ಕೊಟ್ಟ ಅವಳಪ್ಪ
ಅಹಲ್ಯೆ–ಕಾದ ಅಲ್ಲೆ–
ಕಾಯುತ್ತಲೇ ಹೋದಳು.

ಕಾಯುವಿಕೆಯಲ್ಲಿ ನಿರೀಕ್ಷೆಯಿತ್ತು
ಯಾತರದೊ ! ಪ್ರಶ್ನೆಯೂ ಇತ್ತು
ಕುದಿಯುವ ಕಾಮನೆಗಳ
ತಂಪುಗೈಯ್ಯುವ ಭೂಪನಾರು ?
ಗೌತಮನಲ್ಲಿ ಉತ್ತರವಿರಲಿಲ್ಲ
ಯಜ್ಞ ಕುಂಡಕ್ಕೆ ಆಜ್ಯ
ಹಾಕುತ್ತಲೇ ಕುಳಿತು ಮಂತ್ರವನ್ನೂ
ಮಣಮಣಿಸದ ಆವನ ಮೌನ
ಇವಳನ್ನು ಕೊಲ್ಲುತ್ತಿತ್ತು ಇಂಚು ಇಂಚು.

ಹೊರಗೆ,
ತಬ್ಬಲಿಗಳಿಗೆ ಮಮತೆಯ ತಾಯಿಯಾಗಿ
ಗೌತಮನ ಬ್ರಹ್ಮಚರ್ಯೆಗೆ ಸಾಣೆಗಲ್ಲಾಗಿ
ಅಪ್ರಮದ ಶೃಂಗಾರಕ್ಕೆ ತೋರಣವಾಗಿ
ಕಾಣಿಸಿಕೊಳ್ಳುತ್ತಿದ್ದಳು ನಗುಮುಖದ ಲಲನೆ.

ಒಳಗೆ:
ಕಾಯದ ಕಳವಳದ ಕಡೆ

ಕಣ್ಣು ಹಾಕದೆ ಆತ್ಮದ ನೆಲೆ
ಅರಿಯ ಹೊರಟವನ ವಿರುದ್ಧ
ರೂಪುಗೊಂಡ ಸುಪ್ತ ತಿರಸ್ಕಾರ
ಮತ್ತೊಬ್ಬನಲ್ಲಿ ಕಾಣಹೊರಟಿತ್ತು ಪರಿಹಾರ.
ಅನಿವಾರ್ಯ ಆತಂಕ, ಅಪವಾದವಾಗಿ
ಅಂಟಿಕೊಂಡ–ಅಲೌಕಿಕ ಬ್ರಹ್ಮಚರ್ಯೆಯು–
ಲೋಕೋತ್ತರ ಸುಂದರಿಯ ನಿರಂತರ ಕನ್ಯತನಕ್ಕೆ
ಅಡ್ಡಗಾಲು ಹಾಕಲು ಅವರಿವರು ಅಳವಲ್ಲ !
ಮಹೇಂದ್ರನ ಮೇಲೆ ಮನಸ್ಸಿಟ್ಟು ಕೂತವಳ
ಮೈಮನಗಳಲ್ಲಿ ಕೊತ ಕೊತ ಕುದಿಯುವ
ಲಾವಾರಸದ ಚಲನೆ.

ಮತ್ತೆಯೂ ಕಾಯುತ್ತಲೇ ಕೂತಳು
ಅಹಲ್ಯೆ. ಕಲ್ಲಾಗಿ !
ರಾಮ ಬರುವ ನೇಮಕ್ಕೆ
ಮಿಥಿಲೆಗೆ ಹೋಗುವ ಹಾದಿಯಲ್ಲಿ
ಕಲ್ಲಾದವಳ ಕಥೆ ಕೇಳಬೇಕೆಂದು
ಹುಡುಗರು ಸಡಗರದಿಂದ ನುಡಿದಾಗ
ಕಥೆ ಹೇಳಿದವನೂ ಒಬ್ಬ ತಾಪಸಿಯೆ !

ಅಹಲ್ಯೆಯದು ತಪ್ಪೆಂದು
ಬಾಲಕರಾಮನೂ ಒಪ್ಪಿಬಿಟ್ಟಿದ್ದರೆ
ಅವನು ಅವಳಿಗೆ ಮಣಿಯುತ್ತಿರಲಿಲ್ಲ
ಮತ್ತು ಕಲ್ಲು ಕರಗಿ, ಕರಗಿ ನೀರಾಗಿ,
        ನೀರು ನೀರೆಯಾಗಿ
            ಅರಳುತ್ತಲೂ ಇರಲಿಲ್ಲ.

— ಎಂ. ಎಸ್. ವೇದಾ

ನನ್ನ ನೆನಪುಗಳು

⊕ ಆನಂದ ಕಂದ

ಹಣಮಣ್ಣನ ಸಾವು

ಅರಿವೆಯ ಅಂಗಡಿಯು ನಡೆದೇ ಇದ್ದಿತು. ಎಂತಲೇ ರಾಘಣ್ಣ ಅಂಗಡಿಯ ವ್ಯವಸ್ಥೆಗಾಗಿ ಮೂಡಲಗಿಯಲ್ಲಿಯೇ ಉಳಿದ. ಆಗ ಅವನು ಅನಂತಾಚಾರ್ಯರ ಮನೆಯಲ್ಲಿಯೇ ಊಟ ಮಾಡುತ್ತಿದ್ದ. ಉಳಿದ ನಾವೆಲ್ಲರೂ ಬೆಟಗೇರಿಗೆ ಹೊರಟು ಬಂದೆವು. ಆ ವರ್ಷ ಸೆಪ್ಟಂಬರ್‌ನಲ್ಲಿ ನಡೆಯುವ ಮುಲ್ಕಿ ಪರೀಕ್ಷೆಗಾಗಿ ನಮ್ಮ ಬಲರಾಮಣ್ಣನು ಕಟ್ಟಲಿಲ್ಲ. ಕಾರಣವೆಂದರೆ ನನಗೆ ಬಂದ ಪ್ಲೇಗು. ಹಣಮಣ್ಣನ ಅನಾರೋಗ್ಯ. ಊರು ಬಿಟ್ಟು ಬೇರೂರಲ್ಲಿ ವಾಸ ಮಾಡುವ ಸಂದರ್ಭ. ಅಲ್ಲದೆ ತನಗೆ ತಗಲಿದ ಪ್ಲೇಗು ರೋಗ. ಇವುಗಳ ಮೂಲಕ ಅವನಿಗೆ ಪರೀಕ್ಷೆಗಾಗಿ ಬೆಳಗಾವಿಗೆ ಹೋಗುವುದಕ್ಕೆ ಸಾಧ್ಯವಾಗಲಿಲ್ಲ. ನಾನು ನನ್ನ ರೋಗಕ್ಕೆ ಮೊದಲು ದಿನಗಳನ್ನು ವ್ಯರ್ಥವಾಗಿಯೇನೂ ಕಳೆದಿರಲಿಲ್ಲ ಗಳಗನಾಥರ ಒಳ್ಳೊಳ್ಳೆ ಕಾದಂಬರಿ ಗಳನ್ನು ಓದಿ ಮುಗಿಸಿದೆ. ಹೊಸಹೊಸತಾಗಿ ಬಂದ 'ಕ್ಷಾತ್ರತೇಜ', 'ಧರ್ಮ ಸಾಮ್ರಾಜ್ಯ'. 'ಸತ್ತ್ವಸಾರ', 'ತಿಲೋತ್ತಮೆ', 'ಮಹಾರಾಷ್ಟ್ರ ರಾಜ್ಯದ ಕೊನೆ', 'ಕನ್ನಡಿಗರ ಕರ್ಮದ ಕಥೆ'–ಇವೆಲ್ಲ ಕಾದಂಬರಿಗಳನ್ನೂ ಅವು ಬಂದಂತೆಲ್ಲ ಓದು ತ್ತಿದ್ದೆನು. ಅಲ್ಲದೆ 'ವಾಗ್ಭೂಷಣ'ದಲ್ಲಿ ಬಹಳ ಹಿಂದೆಯೇ ಪ್ರಕಟವಾದ 'ನಿದ್ರೆಯಲ್ಲಿ ಎಬ್ಬಿಸಲ್ಪಟ್ಟ ಚಂದನದಾಸ'. 'ಸರೋಜಿನಿ ನಾಟಕ' ಅಲ್ಲದೆ ಲಿಂಗೋ ರಾಮಚಂದ್ರ ಅಕ್ಕೂರ ಎಂಬುವರು ಅನುವಾದಿಸಿದ 'ಸರಸ್ವತಿ' ಸಾಮಾಜಿಕ ಕಾದಂಬರಿ, ಗೋಕಾವಿ ಯ ಒಬ್ಬ ಲೇಖಕರಾದ ಧೋಂಡೋ ಗೋವಿಂದ ಮಹಾಜನ ಎಂಬುವರು ಬರೆದ 'ಪ್ರೇಮ ಪಿಯೂಷ', 'ಕುಮುದ್ವತಿ' ಎಂಬ ರಂಜಕ ಕಾದಂಬರಿಗಳು ಮತ್ತು ಅಥಣಿ ಯವರಾದ ವೇ. ರಾ. ಕುಲಕರ್ಣಿ ಎಂಬುವರು ಭಾಷಾಂತರಿಸಿದ ಮರಾಠಿ ಕಾದಂಬರಿ ಯಾದ 'ಒಬ್ಬ ರಜಪೂತ ಸರದಾರ' ಎಂಬುದನ್ನು, ಬೇರೆ ಸಣ್ಣ ಪುಟ್ಟ ಪುಸ್ತಕಗಳನ್ನು: 'ಸದ್ಬೋಧ ಚಂದ್ರಿಕೆ', 'ವಾಗ್ಭೂಷಣ', 'ಸಚಿತ್ರ–ಭಾರತ' ಮೊದಲಾದ ಮಾಸಪತ್ರಿಕೆ

ಗಳನ್ನು ನಾನು ಒಂದು ಅಧ್ಯಯನ ದೃಷ್ಟಿಯಿಂದಲೇ ಓದುತ್ತಿದ್ದೆ. ನಾನು ಓದಿದ ಪುಸ್ತಕಗಳಲ್ಲಿ ಯಾವ ಸಂದರ್ಭವನ್ನು ಕುರಿತು ಕೇಳಿದರೂ ಅದನ್ನು ವಿವರಣೆಯೊಂದಿಗೆ ಹೇಳಬಲ್ಲವನಾಗಿದ್ದೆ. ಮೂಡಲಗಿ ದೊಡ್ಡ ಊರು. ಕೆಲವೊಂದು ಗ್ರಂಥಗಳಾದರೂ ಓದಲು ಸಿಗುತ್ತಿದ್ದವು. ಆದರೆ ಈಗ ಬೆಟಗೇರಿಗೆ ಬಂದುದರಿಂದ ವಾಚನಾಲಯ ವಿಲ್ಲದ ಆ ಊರಲ್ಲಿ ಹೊಸ ಹೊಸ ಗ್ರಂಥಗಳು ನನಗೆ ದೊರೆಯದಾದವು. ಅಪ್ಪಯ್ಯನ ಆ ಬಳ್ಳಾರಿಯ ಶೆಟ್ಟರ ಪುಸ್ತಕಗಳನ್ನೇ ಮತ್ತೆ ಮತ್ತೆ ಓದುತ್ತಿದ್ದೆ.

ಮೂಡಲಗಿಯಿಂದ ಬಂದಾಗಲೇ ನಮ್ಮ ಹಣಮಣ್ಣನ ಅನಾರೋಗ್ಯವು ಹೆಚ್ಚಾಗಿದ್ದಿತು. ಕೆಮ್ಮಲು, ಕಫ, ಇವುಗಳ ಮೂಲಕ ಅವನು ದಿನದಿನಕ್ಕೂ ನಿತ್ರಾಣನಾಗ ತೊಡಗಿದ. ಹೊಟ್ಟೆಗೆ ಆಹಾರವು ಕಡಿಮೆಯಾಗುತ್ತಾ ನಡೆಯಿತು. ಆದುದರಿಂದ ಅವನು ಸೊರಗಿ ಹಾಸಿಗೆಯ ಕೂಡ ಹಾಸಿಗೆಯಾಗಿ ಬಿದ್ದುಕೊಂಡು ಬಿಟ್ಟಿದ್ದ. ಯಾರ ಮನಸ್ಸೂ ಸರಿಯಾಗಿರದ ಆ ದಿನಗಳಲ್ಲಿ ದೇವರಿಗೆ ನವರಾತ್ರಿಯ ಭಕ್ತಿಯಾದರೂ ಹೇಗೆ ದೊರೆತೀತು ? ನವರಾತ್ರಿಯ ದಿನಗಳು ಒಂದೊಂದಾಗಿ ಒಂದರ ಹಿಂದೆ ಒಂದರಂತೆ ಹೊರಟು ನಡೆದವು. ನವರಾತ್ರಿಯು ವಿಜೃಂಭಣೆಯಿಂದ ನಡೆಯಲಿಲ್ಲ. ಮಹಾನವಮಿಯೂ ಬಂದು ಹೋಯಿತು. ದಸರೆಯೂ ಬಂದು ಬನ್ನಿ ಹಂಚುವ ಸಂಪ್ರದಾಯದೊಂದಿಗೆ ಮುಕ್ತಾಯವಾಯಿತು. ದಿನದಿನಕ್ಕೂ ನಮ್ಮ ಹಣಮಣ್ಣ ಚೈತನ್ಯ ಉಡುಗಿ ಸೊರಗುತ್ತಲೇ ನಡೆದಿದ್ದ. ನಮಗೆ ಕಾಣುವಂತೆ ನಮ್ಮ ತಾಯಿ ದುಃಖವನ್ನು ಪ್ರದರ್ಶಿಸುತ್ತಿರಲಿಲ್ಲ. ಆದರೆ ಅವಳ ಮುಖದಲ್ಲಿ ಒಂದು ಮುಗುಳ್ನಗೆ ಆಗ ಕಾಣಲಿಲ್ಲ. ಹಣಮಣ್ಣನ ಹೆಂಡತಿ, ನಮ್ಮ ಅಕ್ಕ, ಮೊದಲಾದವರು ನಿಟ್ಟುಸಿರಿ ಡುತ್ತಲೇ ದಿನಗಳನ್ನು ಕಳೆಯುತ್ತಿದ್ದರು. ಬದುಕುವದಕ್ಕಾಗಿ ಊಟ. ಅದರ ರುಚಿ ಯನ್ನು ಅನುಭವಿಸುವುದಕ್ಕೆ ಸಾಧ್ಯವೇ ಇರಲಿಲ್ಲ. ದಿನಗಳು ಒಂದರ ಹಿಂದೆ ಒಂದು ಬಂದು ಹೋಗುತ್ತಿದ್ದವು. ಒಂದೊಂದೂ ಹೆಚ್ಚು ಹೆಚ್ಚು ಚಿಂತೆಯನ್ನು ತರುವ ದಿನಗಳೇ ಆಗಿದ್ದವು. ನಾವು ಎಷ್ಟೇ ಸಣ್ಣವರೆಂದರೂ ನಮ್ಮ ಹಿಗ್ಗಿನ ಕ್ಷಣಗಳನ್ನೂ ನಮ್ಮ ಹಣಮಣ್ಣನ ಅಸ್ವಾಸ್ಥ್ಯವು ಸೆಳೆದುಕೊಂಡಿದ್ದಿತು.

ದಿನಗಳು ಬರುವುದು ಹೋಗುವುದು ತಡೆಯುವುದೇ ? ದೀಪಾವಳಿಯ ಮೊದಲ ದಿನವೂ ಬಂದಿತು. ಅಂದು ಸಂಪ್ರದಾಯದಂತೆ ನಾವೆಲ್ಲ ಆರತಿ ಮಾಡಿ ಅಭ್ಯಂಗ ಸ್ನಾನ ಮಾಡಿದೆವು. ಹಣಮಣ್ಣನಿಗೆ ಅವನು ಬಿದ್ದುಕೊಂಡಲ್ಲಿಯೇ ನಿಟ್ಟುಸಿ ರಿಡುತ್ತ ಆರತಿಯನ್ನು ಮಾಡಿಯಾಯಿತು. ಪ್ರತಿ ವರ್ಷವೂ ದೀಪಾವಳಿಯ ಹಬ್ಬ ವೆಂದರೆ ಎಲ್ಲ ಹಬ್ಬಗಳಿಗೆ ಶಿಖರಸ್ವರೂಪವಾಗಿ ಕೊನೆಯಲ್ಲಿ ಸಂತೋಷವನ್ನು ಹೆಚ್ಚಿಸು ವಂತಹದು. ಆದರೆ ಈ ವರ್ಷ ಹಬ್ಬದ ಸಿಹಿಯಾದ ಊಟವಾದರೂ ಅದರಲ್ಲಿ

ಯಾರಿಗೂ ಸವಿಯು ಕಂಡು ಬರಲಿಲ್ಲ. ಕಹಿತನವನ್ನೇ ಒದಗಿಸಿಕೊಟ್ಟಿತು. ದೀಪಾವಳಿಯು ಅಮಾವಾಸ್ಯೆ, ಪಾಡ್ಯಮಿ, ಭಾವಬಿದಿಗೆ, ಅಕ್ಕನ ತದಿಗೆ, ಅಮ್ಮನ ಚೌತಿ, ಪಾಂಡವ ಪಂಚಮಿ, ಎಲ್ಲವೂ ಬಂದುಹೋದವು. ದಿನಗಳು ಹೋದಂತೆಲ್ಲಾ ಹಣಮಣ್ಣನ ಅಸ್ವಾಸ್ಥ್ಯವೂ ಬೆಳೆಯುತ್ತಲೇ ನಡೆಯಿತು. ಅಂದು ಕಾರ್ತೀಕ ಶುದ್ಧ ಅಷ್ಟಮಿ. ಸಾಯಂಕಾಲ ನಾಲ್ಕೂವರೆಯ ಸಮಯವಾಗಿದೆ. ಹಣಮಣ್ಣನ ಬಳಿಯಲ್ಲಿಯೇ ಎಲ್ಲರೂ ಕುಳಿತು ನಿಟ್ಟುಸಿರಿಡುತ್ತಿದ್ದರು. ಆಗ ಹಣಮಣ್ಣನು ತನ್ನ ಹೆಂಡತಿಯನ್ನು ಹತ್ತಿರಕ್ಕೆ ಕರೆದು ಕುಳ್ಳಿರಿಸಿಕೊಂಡನು. ಅವಳ ಬಲದ ಕೈಯನ್ನೆತ್ತಿ ನಮ್ಮ ತಾಯಿಯ ಕೈಯಲ್ಲಿಟ್ಟು ಆಕೆಗೆ ತನ್ನ ತೊದಲು ಮಾತಿನಿಂದ ಏನನ್ನೋ ಹೇಳಿದನು. ಕೇಳಿದ ನಮ್ಮ ತಾಯಿಗೆ ದುಃಖವು ಒತ್ತರಿಸಿ ಬಂತು. ಆದರೂ ಅದನ್ನು ತಡೆದುಕೊಂಡು ಸಮಾಧಾನದ ಸ್ವರದಲ್ಲಿಯೇ "ನಿನಗೇನಾಗುವುದಿಲ್ಲವಪ್ಪಾ, ದೇವರು ಈ ದುರ್ಘಟನೆಯಿಂದ ನಿನ್ನನ್ನು ಪಾರುಮಾಡುತ್ತಾನೆ" ಎಂದು ಹೇಳಿ ಒಳಗೆ ಹೋಗಿ ದೇವರಿಗೆ ನಮಸ್ಕರಿಸಿ ಏನನ್ನೋ ಒಂದು ಒಡವೆಯನ್ನು ದೇವರಿಗೆ ಮುಡಿಪಾಗಿ ಕಟ್ಟಿಟ್ಟು, ಆಮೇಲೆ ಕಿರುಮನೆಗೆ ಬಂದು ನಮ್ಮ ಅಣ್ಣನ ಹತ್ತಿರವೇ ಕುಳಿತಳು.

ಆಗ ನಮ್ಮ ಕಿರಿಯ ತಮ್ಮ ವಿಜಯೇಂದ್ರ ಮೂರು ವರ್ಷದ ಸಣ್ಣ ಮಗು. ಮನೆಯಲ್ಲಿ ಏನಾದರೂ ಗದ್ದಲು-ಗಲಾಟೆ ಮಾಡಬಹುದೆಂದು ನಮ್ಮ ತಾಯಿ ಅವನನ್ನು ಹೊರಗೆ ಕರೆದುಕೊಂಡು ಹೋಗೆಂದು ಹೇಳಿದುದರಿಂದ ನಾನು ಅವನನ್ನು ಕರೆದುಕೊಂಡು ನಮ್ಮೂರ ಹನುಮಂತದೇವರ ಗುಡಿಗೆ ಹೋಗಿ ಕಟ್ಟೆಯ ಮೇಲೆ ಅವನನ್ನು ಆಡಿಸುತ್ತ ಕುಳಿತಿದ್ದೆ. ಅರೂವರೆ ಗಂಟೆಯಾದರೂ ನಾನು ಅವನನ್ನು ಆಡಿಸುವುದರಲ್ಲಿಯೇ ತೊಡಗಿದ್ದೆ. ಆಗ ನಮ್ಮ ಊರಿನ ವೆಂಕಣ್ಣ ಮಾಸ್ತರರು ಅವಸರದಿಂದಲೇ ಗುಡಿಯ ಮುಂದೆ ಹಾಯ್ದು ಹೋಗುತ್ತ "ನೀನು ಮನೆಯ ಕಡೆ ಹೋಗು" ಎಂದು ಒಂದು ವಿಧವಾದ ಧ್ವನಿಯಲ್ಲಿ ನನಗೆ ಹೇಳಿದರು. ಕೂಡಲೇ ನಾನು ನನ್ನ ತಮ್ಮನನ್ನು ಬಗಲಲ್ಲಿ ಎತ್ತಿಕೊಂಡು ಮನೆಯ ಕಡೆ ಹೊರಟೆ. ಮನೆಯ ಬಳಿ ಹೋಗುವುದರಲ್ಲಿಯೇ ದೂರದಿಂದ ನನಗೆ ಮನೆಯ ಜನರೆಲ್ಲರೂ ಅಳುತ್ತಿರುವ ಕೂಗಾಟ ಕೇಳಿಸಿತು. ನಾನು ಗಾಬರಿಗೊಂಡವನಾಗಿಯೇ ಮನೆಗೆ ಹೋಗಿ ನೋಡಿದೆ.

ಭಯಂಕರ ಪರಿಸ್ಥಿತಿ. ಪಡಸಾಲೆಯಲ್ಲಿ ಕಂಬಳಿಯೊಂದನ್ನು ಹಾಸಿ ಅದರ ಮೇಲೆ ಹಣಮಣ್ಣನ ದೇಹವನ್ನು ಮಲಗಿಸಿದ್ದರು. ಅವನ ಉಸಿರಾಟವು ನಿಂತು ಹೋಗಿದ್ದಿತು. ನಾಡಿಗಳೂ ಚಲನವಲನ ಇಲ್ಲದಾಗಿದ್ದವು. ಮೈಮೇಲೆ ಎಚ್ಚರವೇನೂ ಇರಲಿಲ್ಲ. ಜನರು ಬಂದು ಬಂದು ಹೋಗತೊಡಗಿದರು. ಮನೆಯ ಜನರು ಒಂದೇ ಸಮನೆ ದುಃಖಿಸುತ್ತಿದ್ದರು. ಆಗ ಹಣಮಣ್ಣನಿಗೆ ಮರಳಿ ಉಸಿರು ಬಂದಂತಾಗಿ

ಮೂಗಿನಿಂದ ಮೆಲ್ಲನೆ ಉಸಿರಾಟದ ಧ್ವನಿ ಕೇಳತೊಡಗಿತು. ಆಗ ಅಳುವ ಜನರೆಲ್ಲರೂ ಸುಮ್ಮಗಾಗಿ ಅವನಿಗೆ ಕೊನೆಗಾಲದಲ್ಲಿ ಮಾಡಬೇಕಾದ ಸಂಸ್ಕಾರಗಳನ್ನು ಮಾಡುವ ಸಿದ್ಧತೆಗೆ ತೊಡಗಿದರು. ನಮ್ಮ ತಾಯಿಯು ಹೇಳಿಕೆಯಂತೆ ನಾನು ಗೋಪಿಚಂದನದ ನಾಮವನ್ನು ಹಣೆಗೆ ಹಚ್ಚಿ, ತುಳಸಿ ದಳಗಳನ್ನು ಕಿವಿಗಳಲ್ಲಿ ಇರಿಸಿದೆನು. ನಮ್ಮ ಬಲರಾಮಣ್ಣ ಭಾಗೀರಥಿ ನದಿಯ ನೀರಿನ ಗಿಂಡಿಯನ್ನು ಒಡೆದು ಅದರಿಂದ ನೀರನ್ನು ತೆಗೆದು ತೀರ್ಥ–ಸೌಟಿನಿಂದ ಬಾಯೊಳಗೆ ಹಾಕಿದನು. ಆದರೆ ಗುಟುಕುರಿಸಿದ ಸಪ್ಪಳವೇ ಕೇಳುತ್ತಿರಲಿಲ್ಲ. ಗಂಟಲೇ ಕಟ್ಟಿಹೋದವರಂತೆ ನೀರು ಕೂಡ ಗಂಟಲಲ್ಲಿ ಇಳಿಯದಂತಾಗಿತ್ತು. ನಾನೂ ಅವನ ತೆರೆದ ಬಾಯಲ್ಲಿ ತೀರ್ಥ–ಸೌಟಿನಿಂದ ನೀರನ್ನು ಹಾಕಿದೆ. ನಮ್ಮ ತಾಯಿಯೂ ಅಳುತ್ತಳುತ್ತಲೇ ಸ್ವಲ್ಪ ನೀರನ್ನು ಬಾಯಲ್ಲಿ ಬಿಟ್ಟಳು. ಒಂದು ಹತ್ತು ನಿಮಿಷದವರೆಗೆ ಉಸಿರಾಟವು ನಡೆದೇ ಇತ್ತು. ಎಲ್ಲರೂ ಅಳುವುದನ್ನು ಶಾಂತರಾಗಿ ಕುಳಿತುಕೊಂಡಿದ್ದೆವು. ಇದ್ದುದಿದ್ದ ಹಾಗೆಯೇ ಮೂಗಿನಿಂದ ಹೊರಡುವ ಉಸಿರಾಟದ ಧ್ವನಿಗೆ ಭಂಗ ಬಂದಿತು, ಸೊರಗಿದ ಮೋರೆಯಲ್ಲಿ ಜೀವವಿಲ್ಲದ ಕಳೆಯು ನೆಲೆಸಿ ನಿಂತಿತು. ಮತ್ತೆ ಎಲ್ಲರೂ ನಾಡಿಯನ್ನು ನೋಡಿದರು. ಉಸಿರಾಟವಂತೂ ಇರಲೇ ಇಲ್ಲ. ಮೈಯೆಲ್ಲವೂ ತಂಪಾಗಿ ಹೋಯಿತು, ಆಯಿತು. ಹಣಮಣ್ಣ ಹೊರಟುಹೋದನೆಂದು ನಿರ್ಣಯಿಸಿ ಎಲ್ಲರೂ ತಮ್ಮ ಅಳುವನ್ನು ಪ್ರಾರಂಭಿಸಿದರು. ಊರಲ್ಲಿಯ ದಾಯಾದಿ ಜನರು ನಮ್ಮ ಮನೆಗೆ ಬಂದು ಬೇಗನೆ ಆ ಶವವನ್ನು ಮಸಣಕ್ಕೆ ಒಯ್ಯುವ ಕಾರ್ಯಭಾರವನ್ನು ನಡೆಸಿದರು.

ಹುಟ್ಟಿದವರು ಒಂದು ದಿನ ಹೋಗಲೇಬೇಕು ಎಂದು ಸಾಂಪ್ರದಾಯಿಕ ಹೇಳಿಕೆ ಇದ್ದರೂ ನೂರು ವರ್ಷ ಬದುಕಿ ಬಾಳಬೇಕೆಂದು ಸಂಪ್ರದಾಯವು ಹೇಳುವುದು, ಇಲ್ಲಿ ಒಂದಕ್ಕೊಂದು ವಿರೋಧ. ೨೬ ವರ್ಷದ ಹಣಮಣ್ಣನಿಗೆ ಮರಣವು ಬಂದಿತು. ಅವನ ಹೆಂಡತಿ ಅಂದು ತನ್ನ ಮಾಂಗಲ್ಯವನ್ನು ಕಳೆದುಕೊಂಡು ವಿಧವೆಯಾದಳು. ಅವನ ಶವವು ಮಸಣಕ್ಕೆ ಹೊರಟು ಹೋಯಿತು. ಆದರೆ ಮನೆಯಲ್ಲಿಯ ಜನರ ಅಳುವು ಕಡಿಮೆಯಾಗಲಿಲ್ಲ. ಹಣಮಣ್ಣನ ಜೀವನದ ಆಗು–ಹೋಗುಗಳನ್ನು ನೆನೆಸಿ ನೆನೆಸಿಕೊಂಡು ಮತ್ತೆ ಮತ್ತೆ ಅಳುವರು. ಸತ್ತವರಿಗಾಗಿ ಅಳುವು ಹೇಗೆ ಬರುವುದು ನೈಸರ್ಗಿಕವೋ, ಜೀವಿಸಿದ್ದ ಮನುಷ್ಯನ ಕಣ್ಣಿಗೆ ನಿದ್ರೆ ಬರುವುದು ನಿಸರ್ಗ ನಿಯಮ. ಅಂದು ಮಧ್ಯರಾತ್ರಿಗೆ ಎಲ್ಲರ ಕಣ್ಣನ್ನೂ ನಿದ್ರೆಯ ಮಾಯೆಯು ಆವರಿಸಿರಬಹುದು. ಎಲ್ಲರೂ ಮಲಗಿ ಏನೇನೋ ಕನಸುಗಳನ್ನು ಕಾಣುತ್ತ ನಿದ್ದೆಯಲ್ಲಿ ಆ ದುಃಖದ ರಾತ್ರಿಯನ್ನು ಕಳೆದರು. ಮನೆಯಲ್ಲಿ ಮೂರು ಜನ ಹೆಂಗಸರೂ ವಿಧವೆಯರಾದರು. ಮುತ್ತೈದೆ ಮನೆಗೆ ಬಂದರೆ ಕುಂಕುಮ ಹಚ್ಚುವುದಕ್ಕೆ ಒಬ್ಬ ಮುತ್ತೈದೆಯೂ ಮನೆಯಲ್ಲಿ ಇಲ್ಲದಂತಾಯಿತು. ಇದನ್ನು ಸ್ಮರಿಸಿಕೊಂಡು ಮತ್ತೆ ಮತ್ತೆ ನಮ್ಮ ತಾಯಿ ಕಣ್ಣೀರು ಸುರಿಸುವಳು.

ಜನವರಿ–ಫೆಬ್ರವರಿ ೧೯೬೧/೬೧

ಅಣ್ಣ ಸತ್ತರೆ ಅಮಾವಾಸ್ಯೆ ನಿಲ್ಲುವುದೇ ? ದಿನಗಳು ಒಂದರ ಹಿಂದೆ ಒಂದರಂತೆ ಹೋಗಿ ಕರುಳಿನ ದುಃಖದುರಿಯನ್ನು ಕಡಿಮೆ ಮಾಡಿದವು. ಮತ್ತೆ ಎಲ್ಲರ ದೃಷ್ಟಿಯೂ ತಮ್ಮ ತಮ್ಮ ಜೀವನದ ಕಡೆಗೆ ಹೊರಳಿ ನಿಂತಿತು. ನನಗೆ ಏನನ್ನೋ ವಸ್ತುವನ್ನು ಕಳೆದುಕೊಂಡಂತೆ ತಿಂಗಳಾನುತಿಂಗಳು ಮನದ ಹಳಹಳಿಯು ಕಡಿಮೆಯಾಗಲಿಲ್ಲ. ಆದರೂ ದಿನಗಳನ್ನು ಹೇಗೋ ಕಳೆದೆ. ವಾಚನವು ನನಗೊಂದು ಹವ್ಯಾಸವಾದುದರಿಂದ ಅದರತ್ತ ತಿರುಗಿ ದುಃಖವನ್ನು ಮರೆಯತೊಡಗಿದೆ.

ತಿಂಗಳು ಕಳೆದವು. ನಮ್ಮ ಊರಿಗೆ ಬಳ್ಳಾರಿ ಶೆಟ್ಟರು ಪ್ರಕಟಿಸಿದ ಪುಸ್ತಕಗಳ ಮಾರಾಟ ಮಾಡುತ್ತ ಒಬ್ಬ ವ್ಯಾಪಾರಿಯು ಬಂದ. ಅಂಗಡಿಯನ್ನೂ ಹಚ್ಚಿದ. ನಾನು ಆ ಪುಸ್ತಕಗಳನ್ನು ನೋಡಿ ಸಂತೋಷದಿಂದ, ಅಪೂರ್ವವಾದ ಗ್ರಂಥಗಳೇನಾದರೂ ಇವೆಯೋ ಎಂದು ನೋಡತೊಡಗಿದೆ. ಎಲ್ಲವೂ ನನಗೆ ಬೇಡವಾದ ಪುಸ್ತಕಗಳೇ ಆಗಿದ್ದವು. ಕಾರಣವೆಂದರೆ ಎಷ್ಟೋ ಗ್ರಂಥಗಳನ್ನು ನಾನು ಅಂಗಡಿಯ ಅಪ್ಪಯ್ಯನಲ್ಲಿ ತಂದು ಓದಿಕೊಂಡಿದ್ದೆ. ಇನ್ನು ಕೆಲವು ಮೈಸೂರು ಕಡೆಯ ನಾಟಕಗಳು, ಇನ್ನು ಕೆಲವು ವ್ಯಾಪಾರಿ ವೃತ್ತಿಯ ಜ್ಯೋತಿಷ, ವೈದ್ಯಕಗಳನ್ನು ತಿಳಿಸುವ ಗ್ರಂಥಗಳು. ಮತ್ತೆ ಕೆಲವು ಕಾದಂಬರಿ ಪುಸ್ತಕಗಳು. ನನಗೆ ಇವಾವುವೂ ಬೇಡವೆನಿಸಿದವು. ನಾನು ಎರಡು ಪುಸ್ತಕಗಳನ್ನು ಆರಿಸದೆ ಇರಲಿಲ್ಲ. ಒಂದು ಷಡಕ್ಷರಿ ಕವಿಯ 'ಶಬರಶಂಕರ ವಿಳಾಸ', ಇನ್ನೊಂದು ನಿಜಗುಣ ಶಿವಯೋಗಿಯ 'ಕೈವಲ್ಯ ಪದ್ಧತಿ'. ಎರಡರ ಅಚ್ಚೂ ಅಚ್ಚುಕಟ್ಟಾಗಿರಲಿಲ್ಲ. ಕಂದು ಬಣ್ಣದ ಕಾಗದಗಳು. ಆದರೆ ಆ ಮೊದಲು ನಾನು ನಮ್ಮ ಅಣ್ಣ(ಚಿಕ್ಕಮ್ಮನ ಮಗ)ನೊಬ್ಬನ ಬಾಯಿಂದ ಷಡಕ್ಷರಿ ಕವಿಯ ಮುಖ್ಯಕೃತಿಯಾದ 'ರಾಜಶೇಖರ ವಿಳಾಸ'ದ ಹೆಸರನ್ನು ಕೇಳಿದ್ದೆ. ಅದರಲ್ಲಿಯ ತಿರುಕೊಳವಿನಾಚಿಯ ಕಥೆಯನ್ನೊಳಗೊಂಡ ಪದ್ಯಗಳನ್ನು ಕೇಳಿ ಅರ್ಥ ತಿಳಿದುಕೊಂಡಿದ್ದೆ. ಈಗ ಅದೇ ಕವಿಯ 'ಶಬರಶಂಕರ ವಿಳಾಸ'ವು ಈ ವ್ಯಾಪಾರಿಯ ಬಳಿ ದೊರೆತುದರಿಂದ ಅದನ್ನು, ಅದರ ಜೊತೆಗೆ ಒಂದು ಇರಲೆಂದು ನಿಜಗುಣ ಶಿವಯೋಗಿಯ 'ಕೈವಲ್ಯ ಪದ್ಧತಿ'ಯನ್ನು ನಾನು ತೆಗೆದುಕೊಂಡೆ. ಆ ವ್ಯಾಪಾರಿಗೆ ದೊರೆತ ನಮ್ಮೂರಲ್ಲಿಯ ಗಿರಾಕಿಗಳೆಂದರೆ ನಾನೊಬ್ಬನೇ. ತೆಗೆದುಕೊಂಡ ಪುಸ್ತಕದ ಬೆಲೆಯೂ ಹೆಚ್ಚಾಗಿರಲಿಲ್ಲ. ಮೇಲೆ ಬರೆದ ಬೆಲೆಯ ಪ್ರಕಾರ ಅವುಗಳ ಬೆಲೆ ಐದು ರೂ.ಗಳಾಗಬಹುದಾಗಿತ್ತು. ಆದರೆ ನನಗೆ ಎರಡೂ ಪುಸ್ತಕಗಳೂ ಸೇರಿ ಒಂದು ರೂ.ಗೆ ದೊರೆತವು. ನನಗೆನಿಸಿತು ಏನೆಂದರೆ ಈ ವ್ಯಾಪಾರಿಗೆ ಈ ಪುಸ್ತಕಗಳು ಪುಕ್ಕಟೆಯಾದರೂ ಸಿಕ್ಕಿರಬೇಕು ಅಥವಾ ಕಳ್ಳತನದಿಂದಾದರೂ ದೊರತಿರಬೇಕು, ಎಂದು. ಹೆಚ್ಚಿನ ವಿಚಾರವನ್ನು ನಾನೇಕೆ ಮಾಡಬೇಕು. ನನಗೆ ಅಲ್ಪ ಬೆಲೆಯಲ್ಲಿ ಇವು ದೊರೆ

ತುದೇ ಸಮಾಧಾನದ ಸಂಗತಿಯಾಗಿತ್ತು. ನಮ್ಮ ತಾಯಿಯು ಕಡೆಯಿಂದ ಒಂದು ರೂ.ವನ್ನು ಪಡೆದು ಆ ಪುಸ್ತಕಗಳೆರಡನ್ನೂ ಮನೆಗೆ ತಂದೆ.

'ಶಬರಶಂಕರ ವಿಳಾಸ'ವನ್ನು ಓದಲು ನಾನು ಪ್ರಾರಂಭಿಸಿದೆ. ಆದರೆ ಅದರಲ್ಲಿಯ ಸಂಸ್ಕೃತ ಪದಗಳ, ಹಳಗನ್ನಡ ಶಬ್ದಗಳ ಭೂಯಿಷ್ಠತೆಯಿಂದ ನನಗೆ ಆ ಕಾವ್ಯವು ಉಕ್ಕಿನ ಕಡಲೆಯಾಗಿ ಕಂಡಿತು. ಅದು ಸಟೀಕ ಗ್ರಂಥವಾದುದರಿಂದ ಕೆಳಗೆ ಬರೆದ ಟೀಕೆಯ ಸಹಾಯದಿಂದ ಆ ಕಾವ್ಯದ ಪದ್ಯಗಳ ಅಲ್ಪಸ್ವಲ್ಪ ಅರ್ಥವನ್ನು ಮಾಡಿಕೊಂಡೆ. ನಿಜಗುಣ ಶಿವಯೋಗಿಯ 'ಕೈವಲ್ಯ ಪದ್ಧತಿ'ಯೊಳಗಂತೂ ಸುಂದರವಾದ ಕೀರ್ತನೆಗಳೇ ತುಂಬಿದ್ದವು. ಅವು ಓದಿಕೊಂಡರೆ ಅರ್ಥವಾಗುವಂತಹ ಪದ್ಯಗಳು. ಐಕ್ಯ ಪದ್ಧತಿಯೊಳಗಿನ ವೇದಾಂತದ ಅರ್ಥವು ಸುಲಭವೆನಿಸುವಂತಹದಲ್ಲ. ಅದಕ್ಕಾಗಿ ತಲೆಯನ್ನು ನೋಯಿಸಿಕೊಳ್ಳಲೇಬೇಕು. ಹಿರಿಯರಿಂದ ಆ ವೇದಾಂತ ಭಾಗವನ್ನು ಅರ್ಥ ಮಾಡಿಸಿಕೊಳ್ಳಲೇಬೇಕು. ಪುಸ್ತಕಕ್ಕಾಗಿ ನನಗೆ ಒಂದು ರೂ. ಯನ್ನು ಕೊಟ್ಟು, ನನ್ನ ತಾಯಿ ಅದನ್ನು ಓದಿಸಿ ಕೇಳಿ ನಿರಾಶಳಾದಳು. ಎರಡೂ ಪದ್ಯ ಪುಸ್ತಕಗಳು. ಇವೇನೂ ರಾಮಾಯಣ, ಮಹಾಭಾರತವಲ್ಲ. ಭಾಗವತ–ಪುರಾಣಗಳಲ್ಲ; ಕತೆ–ಕಾದಂಬರಿಗಳಲ್ಲ; ಆದರೂ ನನಗೆ ಓದಿಕೊಂಡು ಹೆಚ್ಚು ಕನ್ನಡದ ಜ್ಞಾನ ಆಗಬಹುದೆಂದು ಆಗ ರೂ. ಕೊಟ್ಟುದಕ್ಕೆ ಸಮಾಧಾನವನ್ನೇ ತಂದುಕೊಂಡಳು.

ನಮ್ಮ ತಂಗಿಗೆ ಫಾಲ್ಗುಣ ಮಾಸಕ್ಕೆ ಹತ್ತು ವರ್ಷಗಳು ತುಂಬಿದ್ದವು. ಆಂದಿನ ಹಿರಿಯರಿಗೆ ಕನ್ಯೆ ಹತ್ತು ವರ್ಷದವಳಾದಳೆಂದರೆ ತಮ್ಮನ್ನು ತಾವೇ ಅಪರಾಧಿಗಳೆಂದು ಭಾವಿಸುತ್ತಿದ್ದರು. ಈಗ ಹಣಮಣ್ಣನ ದುಃಖವು ಸ್ವಲ್ಪ ಮರೆಯಾಗಿ ಆ ಸ್ಥಳವನ್ನು ತಂಗಿಯ ಮದುವೆಯ ಚಿಂತೆಯು ವ್ಯಾಪಿಸಿಕೊಂಡಿತು. ನಮಗೆ ಯಾವ ರೀತಿಯಿಂದಲೂ ಮದುವೆ ಮಾಡಿಕೊಡುವ ಸಾಮರ್ಥ್ಯವಿರಲಿಲ್ಲ. ಕಳೆದೆರಡು ವರ್ಷಗಳೆಂದರೆ ನಮ್ಮ ಆದಾಯಕ್ಕೆ ಇಳಿಗಾಲದ ದಿನಗಳಾಗಿದ್ದವು. ಜಲಪ್ರಳಯ ಕಾಲದಲ್ಲಿಯ ಜೋಳದ ನಾಶ, ಕಣಿಕೆ– ಬಣಿವೆಯ ನಷ್ಟ ಅಲ್ಲದೆ ಅಣ್ಣನ ಗರ್ಭಾದಾನ ಕಾಲದ ಖರ್ಚು, ಪ್ಲೇಗು ರೋಗದಲ್ಲಿ ಮಾಡಬೇಕಾದ ಖರ್ಚು, ನಮ್ಮ ಹಣಮಣ್ಣನ ಸಾವು, ಇವುಗಳಿಂದ ನಮ್ಮ ಆರ್ಥಿಕ ಪರಿಸ್ಥಿತಿಯು ಜರ್ಝರಿತವಾಗಿ ಹೋಗಿತ್ತು.

ತಂಗಿ, ನೋಡಲು ಚಿನ್ನದ ಬೊಂಬೆಯಂಥ ಹುಡುಗಿ, ಸಿರಿವಂತರ ಮನೆಗೆ ಬೀಳಬೇಕಾದಷ್ಟು ದೇಹ ಸೌಂದರ್ಯದವಳು. ಆದರೆ ಸಿರಿವಂತರಾದರೂ ಪುಕ್ಕಟೆಯಾಗಿ ಲಗ್ನವನ್ನು ಮಾಡಿಕೊಳ್ಳಲು ಉದಾರಿಗಳಾರಿರುವರು ? ಈ ಗೌರಿಯಂತಹ ಹುಡುಗಿಯನ್ನು ಯಾರಾದರೂ ಕುರೂಪಿಯಾದವನಿಗೆ ಕೊಟ್ಟರೆ ತಾನು ಕೊನೆಯವರೆಗೂ ದುಃಖಿಸಬೇಕಾಗುವದೆಂದು ನಮ್ಮ ತಾಯಿ ಭಾವಿಸಿದಳು. ನಮ್ಮ ಆ

ತಂಗಿಯ ಚೆಲುವಿನ ಬಗ್ಗೆ ಬರಿಯ ಮಾತಿನಿಂದ ಬಣ್ಣಿಸಿ ಹೇಳದೆ ಅವಳ ಜೀವನದಲ್ಲಿ ಘಟಿಸಿದ ಒಂದು ಸಂಗತಿಯನ್ನು ನಾನಿಲ್ಲಿ ಹೇಳಬೇಕೆಂದಿದ್ದೇನೆ.

ನಮ್ಮ ತಂಗಿಗಾಗ ಐದು ವರ್ಷದ ವಯಸ್ಸು. ಶ್ರಾವಣ ಮಾಸದ ಮೊದಲ ಶುಕ್ರವಾರದ ದಿವಸ. ನಮ್ಮ ತಾಯಿ ಅವಳಿಗೆ ಅಭ್ಯಂಗ ಸ್ನಾನವನ್ನು ಮಾಡಿಸಿ ನೀಳವಾದ ಕಪ್ಪುಗೂದಲನ್ನು ಹಸಿಯಾರಲೆಂದು ಬೆನ್ನಮೇಲೆ ಹಾಗೆಯೇ ಬಿಟ್ಟಿದ್ದರು. ಹಾಲಮೇಲಿನ ಕೆನೆಯಂತಹ ನುಣುಪಾದ ಬಿಳಿಯ ಮೈ. ಅವಳು ಆಡುತ್ತ ತನ್ನ ಗೆಳತಿಯೊಬ್ಬಳ ಮನೆಗೆ ಹೋದಳಂತೆ. ಅವಳೂ ನಮ್ಮ ತಂಗಿಯ ವಯಸ್ಸಿನ ಹುಡುಗಿ, ಆಕೆ ನಮ್ಮ ತಂಗಿಯನ್ನು ನೋಡಿ 'ನನ್ನನ್ನು ಈ ತಂಗೆವ್ವನಂತೆ ಮಾಡು,' ಎಂದು ಅಳಹತ್ತಿದಳಂತೆ. ಆಗ ಆ ಹುಡುಗಿಯ ಅಜ್ಜಿ "ಕರಿಯ ಮರದ ಗೊಂಬೆ ಯತಿರುವ ನಿನ್ನನ್ನು ಆಕೆಯ ಹಾಗೆ ಗೌರವರ್ಣದವಳನ್ನಾಗಿ ಹೇಗೆ ಮಾಡಬೇಕು ? ಚೋಟುದ್ದದ ಕೂದಲೂ ಬೆಳೆಯದಿರುವ ನಿನಗೆ ಅವಳಂತಹ ಉದ್ದ ಕೂದಲುಗಳನ್ನು ಹೇಗೆ ಮಾಡಲಿ ಎಂದು ಸಿಟ್ಟು ಮಾಡಿ, ಅದೇ ಸೆಪದಿಂದ ಆ ಹುಡುಗಿಗೂ ಎಣ್ಣೆನೀರು ಹಾಕಿದಳಂತೆ. ಸೀಗೆಕಾಯಿ ಮೈಗೆ ಹಚ್ಚಿ ಸ್ವಚ್ಛವಾಗಿ ತೊಳೆದಳಂತೆ. ಸ್ನಾನ ಮಾಡಿ ಮೈಯನ್ನು ಒರಸಿದ ಮೇಲೆ ಆ ಹುಡುಗಿ "ನಾನು ತಂಗೆವ್ವನಂತೆ ಆಗಲಿಲ್ಲವಲ್ಲ" ಎಂದು ಅಳಲು ತೊಡಗಿದಳಂತೆ. ಆಗ ಆ ಮುದುಕಿ ಆ ಹುಡುಗಿಯನ್ನು ನಮ್ಮ ತಾಯಿಯ ಕಡೆಗೆ ಕರೆದುಕೊಂಡು ಬಂದು "ಈ ಕತ್ತೆಯ ಮರಿಯನ್ನು ಕುದುರೆಯ ಮರಿಯನ್ನಾಗಿ ನಾನು ಮಾಡಬೇಕಂತೆ. ತಂಗೆವ್ವನಂತಹ ಮೈ ಬಣ್ಣವನ್ನೂ, ಕೂದಲುಗಳನ್ನೂ, ಸಮವಾದ ಹಲ್ಲುಗಳನ್ನೂ. ನಾನೆಲ್ಲಿಂದ ಇವಳಿಗೆ ತಂದು ಕೊಡಲಿ" ಎಂದು ಸಮಸ್ಯೆಯ ಸ್ವರದಲ್ಲಿ ಹೇಳಿದಳಂತೆ. ಆಗ ನಮ್ಮ ತಾಯಿ ಆ ಹುಡುಗಿಗೇನೋ ಸವಿತಿನಿಸನ್ನು ಕೊಟ್ಟು 'ಅದನ್ನು ತಿಂದರೆ ನೀನೂ ತಂಗೆವ್ವನ ಹಾಗೆ ಆಗುತ್ತಿ' ಎಂದು ಹೇಳಿ ಸಮಾಧಾನ ಪಡಿಸಿ ಕಳಿಸಿದರಂತೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ನಮ್ಮ ತಂಗೆವ್ವನಂತಹ ಸುಸ್ವರೂಪಿಗಳು ಸಿಕ್ಕುವುದು ಸಾವಿರಕ್ಕೆ ಒಬ್ಬರೋ, ಇಬ್ಬರೋ. ಆದರೆ ಅಂತಹ ಹುಡುಗಿಯ ಮದುವೆಯ ಸಮಸ್ಯೆಯು ಇಂದು ನಮ್ಮ ತಾಯಿಯ ಹೃದಯವನ್ನು ಚೇಳಿನಂತೆ ಕುಟುಕುತ್ತಿತ್ತು. ಅವಳ ಮದುವೆಯ ವಿಚಾರಕ್ಕೆ ನಮ್ಮ ಬಡತನವು ಒಂದು ಕೋಟೆಯ ಗೋಡೆಯಾಗಿ ಪರಿಣಮಿಸಿತು. ಯಾರು ಯಾರೋ ಬಂದು ಆ ಹುಡುಗಿ ಯನ್ನು ಮದುವೆಗೆಂದು ಕೇಳಿದರು. ಆದರೆ ಆ ವರನು ಮುದುಕನೋ, ಇಮ್ಮನಿ ವರನೋ, ಕುರೂಪಿಯೋ ಆಗಿರುತ್ತಿದ್ದನು. ಅಂತಹವನಿಗೆ ಕೊಡಲು ನಮ್ಮ ತಾಯಿಯ ಮನಸ್ಸು ಮೆಚ್ಚದು. ಎಂತಲೇ ಅವಳ ಮದುವೆಯ ವಿಚಾರವು ಅವಳ ತಲೆಯನ್ನು ಒಂದೇ ಸಮನೆ ತಿನ್ನುತ್ತಲಿತ್ತು.

ಹೊಸಓದು

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣದ ಪ್ರಕ್ರಿಯೆ (ವಿಮರ್ಶೆ)

ಲೇಖಕರು: **ಟಿ. ಪಿ. ಅಶೋಕ**
ಪ್ರಕಾಶಕರು: ಕರ್ನಾಟಕ ಸಂಘ, ಪುತ್ತೂರು (ದ.ಕ.)
ಪುಟ: 63, ಬೆಲೆ: ರೂ. 15/-

ಸಮಕಾಲೀನ ಕನ್ನಡ ವಿಮರ್ಶೆಯ ಮಹತ್ತ್ವದ ಹೆಸರು ಅಶೋಕ. ನವ್ಯ ವಿಮರ್ಶೆಯ ಆಕೃತಿ ಸೂಕ್ಷ್ಮಗಳ ಗ್ರಹಿಕೆ ಮತ್ತು ಬಂಡಾಯ ವಿಮರ್ಶೆಯ ಎಡ ಪಂಥೀಯ ಒಲವಿನ ಸ್ಥೂಲ ಸ್ವೀಕರಣೆಯಿಂದಾಗಿ ಅವರ ವಿಮರ್ಶೆಗೆ ಒಂದು ಬಗೆಯ ಹೊಸತನ, ಲವಲವಿಕೆ ಸಿದ್ಧಿಸಿದೆ. ಅಶೋಕರ ಈ ವಿಮರ್ಶಾ ಕೃತಿಯಲ್ಲಿ ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಕಾಣಿಸಿಕೊಂಡಿರುವ ಆಧುನಿಕೀಕರಣ ಪ್ರಕ್ರಿಯೆಯನ್ನು ಶಿಸ್ತುಬದ್ಧವಾಗಿ ಚರ್ಚಿಸುವ ಕೆಲಸ ನಡೆದಿದೆ. ಕೃತಿಯ ಹೆಸರೇ ಸೂಚಿಸುವಂತೆ ಇದು ಕಾರಂತರ ಕಾದಂಬರಿಗಳನ್ನು ಸಮಗ್ರವಾಗಿ ಅರ್ಥಮಾಡಿಕೊಳ್ಳುವ ವಿಧಾನವೇನೂ ಅಲ್ಲ. ಬದಲು ಕಾದಂಬರಿಯ ಅನೇಕ ಆಯಾಮಗಳಲ್ಲಿ ಒಂದನ್ನು ಪರಿಶೀಲಿಸುವ ಪ್ರಯತ್ನ. ಈ ಬಗೆಯ ಕೆಲಸ ಕನ್ನಡದಲ್ಲಿ ಹೆಚ್ಚು ನಡೆದಿಲ್ಲ ಎಂಬ ಕಾರಣಕ್ಕೆ ಈ ಕೃತಿ ಮುಖ್ಯವಾಗುತ್ತದೆ ಮಾತ್ರವಲ್ಲ ಕೃತಿಯುದ್ದಕ್ಕೂ ಅಶೋಕರು ತಲುಪುವ ಅಂತಿಮ ನೆಲೆಗಳು ಸತಾರ್ಕಿಕವೂ ಸಕಾರಣವೂ ಆಗಿರುವುದರಿಂದ ವಿಮರ್ಶಾ ವಿಧಾನದ ದೃಷ್ಟಿಯಿಂದಲೂ ತುಂಬ ಮಹತ್ತ್ವದ್ದಾಗುತ್ತದೆ.

ತನ್ನ ವಿಮರ್ಶೆಯ ಉದ್ದೇಶದ ಕುರಿತು ಅವರು ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದಾರೆ–"ಕಾರಂತರ ಎಲ್ಲ ಕಾದಂಬರಿಗಳ ಸಮೀಕ್ಷೆ ಈ ಪ್ರಬಂಧದ ಗುರಿಯಲ್ಲ. ಆಧುನೀಕರಣದ ಪ್ರಕ್ರಿಯೆಯ ಕೆಲವು ವಿನ್ಯಾಸಗಳನ್ನು ಅಭ್ಯಾಸ ಮಾಡುವುದಷ್ಟೇ ಇಲ್ಲಿನ ಉದ್ದೇಶ. ಹಾಗಾಗಿ ಕಾರಂತರ ಎಲ್ಲ ಕಾದಂಬರಿಗಳ ಸಮೀಕ್ಷೆ ಈ ಪ್ರಬಂಧದ ಗುರಿಯಲ್ಲ. ಆಧುನೀಕರಣದ ಪ್ರಕ್ರಿಯೆಯ ಕೆಲವು ವಿನ್ಯಾಸಗಳನ್ನು ಅಭ್ಯಾಸ ಮಾಡುವುದಷ್ಟೇ ಇಲ್ಲಿನ ಉದ್ದೇಶ. ಹಾಗಾಗಿ ಕಾರಂತರ ಎಲ್ಲ ಕಾದಂಬರಿಗಳ ಪ್ರಸ್ತಾಪ

ಇಲ್ಲಿ ಬರುವುದಿಲ್ಲ. ಅಷ್ಟೇ ಅಲ್ಲ, ಕಾರಂತರ ಯಾವುದೇ ಬಿಡಿ ಕಾದಂಬರಿಯ ಸಮಗ್ರ ಅಧ್ಯಯನಕ್ಕೂ ಇಲ್ಲಿ ಸ್ಥಳವಿಲ್ಲ. ಕಾರಂತರ ಕಾದಂಬರಿಗಳಲ್ಲಿನ ಒಂದು ಮುಖ್ಯ ವಸ್ತುವನ್ನು ಅಭ್ಯಾಸ ಮಾಡುವುದಷ್ಟಕ್ಕೇ ಈ ಪ್ರಬಂಧ ಸೀಮಿತವಾಗಿದೆ" (ಪುಟ 26) ಇಷ್ಟು ಮಾತನ್ನು ಅವರು ಬಹಳ ಸ್ಪಷ್ಟವಾಗಿ ಹೇಳಿರುವುದರಿಂದಾಗಿ ಕೆಲವು ಪ್ರಶ್ನೆಗಳನ್ನು ಎತ್ತಬೇಕೆಂಬ ಮನಸ್ಸಿದ್ದರೂ ಎತ್ತಲಾರದೇ ಹೋಗಬೇಕಾಗಿದೆ–ಏಕೆಂದರೆ ವಿಮರ್ಶಕನ ಉದ್ದೇಶವಲ್ಲದ್ದನ್ನು ಅವನ ಮೇಲೆ ಹೊರಿಸುವ ಕೆಲಸ ಮಾಡಬಾರದಷ್ಟೆ !

ಅಶೋಕರು ತನ್ನ ಉದ್ದೇಶ ಏನೆಂಬುದನ್ನು ಹೇಳಿದ್ದಾರೋ, ಅದಷ್ಟನ್ನು ಬಹಳ ಸಮರ್ಪಕವಾಗಿ ಈ ಕೃತಿಯಲ್ಲಿ ಮಾಡಿದ್ದಾರೆ. 'ಆಧುನೀಕರಣ' ಎಂಬ ಬಹು ಚರ್ಚಿತ ಶಬ್ದವನ್ನು ತಾನು ಹೇಗೆ ನೋಡುತ್ತಿದ್ದೇನೆ ಎಂಬುದನ್ನು ಅಲ್ಲಲ್ಲಿ ಸ್ಪಷ್ಟಪಡಿಸುತ್ತಾ ಹೋಗಿದ್ದಾರೆ. ವಸಾಹತುಶಾಹಿ ಆಳ್ವಿಕೆ ಭಾರತದ ಮೇಲೆ ಉಂಟು ಮಾಡಿದ ಪರಿಣಾಮವನ್ನೂ, ಅದಕ್ಕೆ ಭಾರತೀಯ ಮನಸ್ಸುಗಳು ಪ್ರತಿಕ್ರಿಯಿಸಿದ ಬಗೆಯನ್ನೂ ಸ್ಥೂಲವಾಗಿ ಆಧುನೀಕರಣ ಎಂದು ಅವರು ಗುರುತಿಸಿದ್ದಾರೆ. ಆದರೆ ಈ ಬಗೆಯ ಆಧುನೀಕರಣದ ಪರಿಕಲ್ಪನೆಯು ಮೌಲಿಕವಾಗಿ ಹೇಗೆಂಬುದರ ಬಗೆಗೆ ಅವರು ಚರ್ಚೆ ನಡೆಸುವುದಿಲ್ಲ. ಅಂದರೆ ಚರ್ಚೆ ನಡೆಸಲೇಬೇಕಾದ ಕಡೆ ಚರ್ಚಿಸದೆ ಅಶೋಕರು ಮುಂದೆ ಹೋಗಿದ್ದಾರೆ. ಕೆಲವು ವರ್ಷಗಳ ಹಿಂದೆ ಕುವೆಂಪುರವರು ಹೇಳಿದ ಮಾತು ಇಲ್ಲಿ ನೆನಪಿಗೆ ಬರಬೇಕು. "ಬ್ರಿಟಿಷರು ಬರದೇ ಇರುತ್ತಿದ್ದರೆ ನಾನು ಈಗ ಬ್ರಾಹ್ಮಣರ ಮನೆಯಲ್ಲಿ ಸೆಗಣಿ ಹೆಕ್ಕುತ್ತಿದ್ದೆ" ಎಂಬ ಅವರ ಮಾತು ವಸಾಹತೀಕರಣದ ಮೂಲಕ ಬಂದ ಆಧುನೀಕರಣವನ್ನು ಮುಕ್ತವಾಗಿ ಸ್ವೀಕರಿಸುವುದೇ ಆಗಿದೆ. ವರ್ತಮಾನ ಕಾಲದಲ್ಲಿ ಶೂದ್ರರೂ, ದಲಿತರೂ ಇದೇ ಬಗೆಯ ಧೋರಣೆ ಹೊಂದಿದ್ದಾರೆ. ಆದರೆ ರಾಜಕೀಯ ಚಿಂತಕರೂ, ಸಮಾಜ ಶಾಸ್ತ್ರಜ್ಞರೂ 'ವಸಾಹತೀಕರಣದಿಂದ ಶೂದ್ರರೂ, ದಲಿತರೂ ಇನ್ನಷ್ಟು ಬಂಧನಗಳಿಗೆ ಒಳಗಾಗಿದ್ದಾರೆ' ಎಂಬಂಥ ಮಾತುಗಳನ್ನು ಆಡಿದ್ದಾರೆ. ಇವೆರಡರಲ್ಲಿ ಯಾವುದು ನಿಜ ? ಅಥವಾ ಅಶೋಕರು ಇವೆರಡು ನಿಲುವುಗಳಲ್ಲಿ ಯಾವುದನ್ನು ಆಯ್ದುಕೊಳ್ಳುತ್ತಾರೆ ? ಇಂಥ ಕುತೂಹಲದ ಪ್ರಶ್ನೆಗೆ ಎಡೆಯೇ ಇಲ್ಲದಂತೆ ಅಶೋಕರು ಬರೆಯುತ್ತಾರೆ–"ಈ ಆಧುನಿಕತೆ ಒಂದು ವರವೋ ಶಾಪವೋ ಎಂಬ ದ್ವಂದ್ವದಿಂದ ನಾವಿನ್ನೂ ತಪ್ಪಿಸಿಕೊಂಡಿಲ್ಲ–ಇಂಥದ್ದೊಂದು ಸಾಂಸ್ಕೃತಿಕ ದ್ವಂದ್ವವೇ ತೃತೀಯ ಜಗತ್ತಿನ ಪ್ರಧಾನ ಧಾರೆಯ ಕಥಾ ಸಾಹಿತ್ಯದ ಮೂಲವಸ್ತುವಾಗಿದೆ" (ಪುಟ 6). ಅಂದರೆ ಅಶೋಕರ ಕೆಲಸ ಇಲ್ಲಿ ವೀಕ್ಷಕನದ್ದು, ಪಕ್ಷ ವಹಿಸುವುದು ಅಲ್ಲ. ಎಂದಂತಾಯಿತು.

ಇಂಥ ನಿಲುವುಗಳನ್ನು ಪ್ರಶ್ನಿಸಬಹುದಾದರೂ. ಇಂಥ ನಿಲುವುಗಳು ಕೃತಿಯೊಂದರ ಅರ್ಥಗ್ರಹಣಕ್ಕೆ ಸಹಕಾರಿಯಾಗುವ ಬಗೆಯನ್ನು ಅಲ್ಲಗಳೆಯಲಾಗುವುದಿಲ್ಲ.

ಸ್ವಲ್ಪ ಉದಾರವಾಗಿ ಹೇಳುವುದಾದರೆ ಇದು 'ಪಕ್ಷ'ವಾದ ನಿಲುವು. ಆಧುನಿಕೀಕರಣವನ್ನು ಶಾಪವೆಂದೋ, ವರವೆಂದೋ ಗ್ರಹಿಸುವ ಬರೆಹಗಳಿಂದ ಭಿನ್ನವಾದ ನಿಲುವು ಇದಾದುದರಿಂದ ಈ ಬಗೆಯ ನಿಲುವುಗಳಿಂದ ಹೊರಡುವ ವಿಮರ್ಶೆಗೆ ತನ್ನದೇ ಆದ ಒಂದು ಬಗೆಯ ಸಮತೋಲನದ ದೃಷ್ಟಿ ಪ್ರಾಪ್ತಿಸುತ್ತದೆ. ಅಶೋಕರದು ಅಂಥ ನಿರ್ಮಮ ನಿಲುವು.

ಈ ನಿಲುವಿನಿಂದ ಅಶೋಕರು **ಚೋಮನ ದುಡಿ, ಕುಡಿಯರ ಕೂಸು, ಶನೀಶ್ವರನ ನೆರಳು, ಮರಳಿ ಮಣ್ಣಿಗೆ, ಔದಾರ್ಯದ ಉರುಳಲ್ಲಿ, ಉಕ್ಕಿದ ನೊರೆ ಮತ್ತು ಸಮೀಕ್ಷೆ** ಕಾದಂಬರಿಗಳಲ್ಲಿ ಪ್ರಕಟವಾದ ಆಧುನೀಕರಣ ಪ್ರಕ್ರಿಯೆಯನ್ನು ಶಿಸ್ತುಬದ್ಧವಾಗಿ ಗುರುತಿಸುತ್ತಾ ಹೋಗಿದ್ದಾರೆ.

ಈ ನಿಟ್ಟಿನಲ್ಲಿ ಕಾರಂತರ ನಿಲುವನ್ನು ಪ್ರಾತಿನಿಧಿಕವಾಗಿ ಪ್ರಕಟಪಡಿಸುವ ಕೃತಿಯೆಂದರೆ 'ಚೋಮನ ದುಡಿ'. ಅಶೋಕರ ಪ್ರಕಾರ "ಚೋಮನ ಸಮಸ್ಯೆ ಇತ್ಯರ್ಥವಾಗಬೇಕು. ಆದರೆ ಅದು ವಸಾಹತುಶಾಹೀ ಆಡಳಿತವನ್ನು ಅಧಿಕೃತಗೊಳಿಸುವಲ್ಲಿ ಪರ್ಯಾವಸಾನಗೊಳಿಸಬಾರದು ಎಂಬುದು ಕಾದಂಬರಿಯ ಒಟ್ಟಾರೆ ದರ್ಶನವಾಗಿದೆ" ಇದನ್ನು ನೆಮ್ಮಿಕೊಂಡೇ 'ಚೋಮನ ದುಡಿ'ಯನ್ನು 'ವಸಾಹತುಶಾಹೀ ವಿರೋಧಿ ಕಾದಂಬರಿ' ಎಂದು ಅವರು ಸ್ವಲ್ಪ ಅವಸರವಸರವಾಗಿ ವಿವರಿಸುತ್ತಾರೆ. ಇಲ್ಲಿ ಚರಿತ್ರೆಯನ್ನು ಸ್ವಲ್ಪ ಎಚ್ಚರದಿಂದ ಪರಿಶೀಲಿಸಬೇಕಾಗುತ್ತದೆ. ಜೊತೆಗೆ ಚರಿತ್ರೆ ಕಲಾಕೃತಿಯಲ್ಲಿ ದಾಖಲಾಗುವ ಬಗೆ ಹೇಗೆ ? ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ಸ್ವಲ್ಪ ಸರಳಗೊಳಿಸಿ ಹೇಳುವುದಾದರೆ 30ರ ದಶಕದಲ್ಲಿ 'ಚೋಮನ ಸಮಸ್ಯೆ' ಕಾದಂಬರಿಯು ರೂಪ ತಳೆಯುವ ಸಂದರ್ಭಕ್ಕೆ ವಸಾಹತು ಆಡಳಿತದ ಸೃಜನಾತ್ಮಕ ಪ್ರೇರಣೆ ಏನು ? ಅಂದರೆ ಅರ್ಥ ಇಷ್ಟೆ–ಇಂಗ್ಲಿಷರಿಂದಲೇ ಕಲಿತು ಇಂಗ್ಲಿಷರ ವಿರುದ್ಧ ನಿಲ್ಲುವ ರೀತಿಯದು. 'ಬೆಟ್ಟದ ಜೀವ'ದ ಗೋಪಾಲಯ್ಯ ಮಲೆನಾಡಿನ ಗರ್ಭದಲ್ಲಿದ್ದರೂ, ಮಲೆನಾಡಿನ ಕಣ ಕಣದಲ್ಲೂ ಆತ ಕಾಣುವುದು ಮಗನ ಮುಖವನ್ನೇ ಅಲ್ಲವೇ ? ಅಲ್ಲಿ ಮಲೆನಾಡೆಲ್ಲಿ ? ಹಾಗಾಗಿ ಕಾದಂಬರಿ ಕೊನೆಯಾದಾಗ ಶಿವರಾಮನ ಜೊತೆ ಯಾವ ಸಂಕೋಚವೂ ಇಲ್ಲದೆ ಗೋಪಾಲಯ್ಯ ಹೊರಟೇ ಬಿಡುತ್ತಾನೆ. ಗೋಪಾಲಯ್ಯನ ಜೀವ ನಿಂತಿರುವುದು ಮಲೆನಾಡಿನಲ್ಲೋ, ಮಗನಲ್ಲೋ ಎಂದು ಕೇಳಿದರೆ ಮಗನಲ್ಲಿ ಎಂಬುದೇ ಉತ್ತರ. ಭಾರತದ ಬ್ರಾಹ್ಮಣ್ಯದ ಸಮಸ್ಯೆಯಿದು. ಶೂದ್ರರ ಮಲೆನಾಡಿನ ಕಲ್ಪನೆಯೊಂದಿಗೆ ಹೋಲಿಸಿ ನೋಡಿದರೆ ಅದು ಇನ್ನಷ್ಟು ಸ್ಪಷ್ಟವಾಗುತ್ತದೆ.

ಸ್ವಲ್ಪ ವಿಷಯಾಂತರ ಅಂತನ್ನಿಸಿದರೂ ಇದು ಕಾರಂತರು ಆಧುನಿಕತೆಗೆ ಪ್ರತಿಕ್ರಿಯಿಸಿದ ಬಗೆಯ ದ್ವಂದ್ವವನ್ನು ಚೆನ್ನಾಗಿ ವಿವರಿಸುತ್ತದೆ. ಈ ನಿಟ್ಟಿನಲ್ಲಿ 'ಕುಡಿಯರ

ಕೊಪು' ಕಾದಂಬರಿಯಲ್ಲಿ ಪಸುಪತು ಅಪಳಿತದ ಅನುಭವ ಭಿನ್ನವಾಗಿರುವುದನ್ನು ಅಶೋಕರು ಗುರುತಿಸಿದ ಕ್ರಮ ಹೆಚ್ಚು ಪ್ರೌಢವಾದುದು. ಸ್ಥಳೀಯ ಸಂಸ್ಕೃತಿಯೊಂದು ಪರಕೀಯ ಸಂಸ್ಕೃತಿಯೊಡನೆ ಮುಖಾಮುಖಿಯಾಗುವಾಗ ಪಡೆಯುವ ಭಯ, ಆತಂಕ, ಸ್ವಾಭಿಮಾನಗಳನ್ನು ಇಲ್ಲಿ ಗುರುತಿಸಲಾಗಿದೆ. ಇಂಥ ಕೃತಿಗಳಿಗಿರುವ 'ಅಘೋಷಿತ ಮುನ್ನೋಟ'ವನ್ನು ಕೂಡಾ ಅವರು ಸರಿಯಾಗಿ ಗುರುತಿಸುತ್ತಾರೆ. ಇಂಥ ಅನ್ವೇಷಣೆಯ ಸಂದರ್ಭದಲ್ಲಿ ಕಾರಂತರ ಕೃತಿಗಳು ಒಂದಕ್ಕಿಂತ ಇನ್ನೊಂದು ಹೇಗೆ ಭಿನ್ನವಾಗಿವೆ ಎಂಬುದರ ಕಡೆಯೂ ಅವರ ಲಕ್ಷ್ಯ ಹರಿದಿದೆ.

ಸಮಾಜ ನಿರ್ದಯವಾಗಿ ಚಲಿಸುತ್ತಿರುವಾಗ, ಉಂಟಾಗುವ ಹಳತು-ಹೊಸತರ ಸಂಘರ್ಷವನ್ನು ಕಾರಂತರ ಕಾದಂಬರಿಗಳು ಅದ್ಭುತವಾಗಿ ದಾಖಲಿಸಿವೆ. ಅಶೋಕರ ವಿಮರ್ಶೆ ಅದನ್ನು ಅಷ್ಟೇ ಸಂಯಮದಿಂದ ಗುರುತಿಸುತ್ತದೆ. ನಾವೆಲ್ಲರೂ ಓದಲೇ ಬೇಕಾದ, ಚರ್ಚಿಸಲೇಬೇಕಾದ ಚೊಕ್ಕ ಕೃತಿಯಿದು.

—ಡಾ॥ ಪುರುಷೋತ್ತಮ ಬಿಳಿಮಲೆ

ಈ ನೆಲದ ಹಾಡು (ಕವನ ಸಂಕಲನ)

ಲೇಖಕಿ: **ಸ. ಉಷಾ**

ಪ್ರಕಾಶಕರು: ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ

ಪುಟ: viii + 50, ಬೆಲೆ: ರೂ. 15/-

'ತೊಗಲುಗೊಂಬೆಯ ಆತ್ಮಕಥೆ'ಯ ನೆಲೆಯಿಂದ, ತಮ್ಮ ಹಾಡು 'ಈ ನೆಲದ ಹಾಡು' ಆಗುವಂತೆ ಹಂಬಲ ಹೊತ್ತಿರುವ ಸ. ಉಷಾ ಅವರ ಈ ಎರಡನೆಯ ಸಂಕಲನ ಅವರ/ಮಹಿಳಾ ಕಾವ್ಯದ ಬೆಳವಣಿಗೆಯ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ. ಈ ಸಂಕಲನದ ಕವನಗಳನ್ನು ಓದುತ್ತ ಹೋದಂತೆ ಬದುಕಿನ ಸೊಗಸಿನ ಹಂಬಲ, ಪ್ರೀತಿಗಾಗಿ ತುಡಿತ. ಚುಚ್ಚುವ ವಾಸ್ತವ ಬದುಕಿನ ನೋವು, ಇದನ್ನು ಸಹಿಸುತ್ತ ಸುಂದರ ಭವಿಷ್ಯತ್ತಿಗೆ ಕಾಯುವ ನಿರಂತರ ನಿರೀಕ್ಷೆಗಳು ಉಷಾ ಅವರಿಗೆ ಹೊಸತೇನೂ ಅಲ್ಲದ ವಸ್ತುಗಳೇ–ಎನ್ನಿಸಬಹುದು. ಆದರೆ ಇಲ್ಲಿ ಹೊಸತು ಇರುವುದು ಆ ವಸ್ತುಗಳನ್ನು ಅವರು ನಿರುಕಿಸುವ ಕ್ರಮದಲ್ಲಿ, ತಮ್ಮದೇ ಭಾಷೆಗಾಗಿ ಹುಡುಕುತ್ತ, ತಮ್ಮ ಅಸ್ಮಿತೆಯ ಶೋಧನೆಗೆ ಯತ್ನಿಸಿರುವ ರೀತಿಯಲ್ಲಿ ಉಷಾ ವಿಭಿನ್ನರಾಗುತ್ತಾರೆ:

'ಅಂದಿಗೂ ಇಂದಿಗೂ
ಕಾಲದನಂತದಲ್ಲಿ ತೇಲುತ್ತಿದ್ದ ಹುಡುಗಿ
ಸುಖದ ತುತ್ತು ತುತ್ತಿಗೂ ಕಲ್ಲಾಗಿ ಕಾಡಿದ್ದಾಳೆ' (ನಿರಂತರ) ಎನ್ನುವಲ್ಲಿ

ಉಷಾ ಕವನಗಳ ಮೂಲದ ಚಿಂತನೆಯ ಎಳೆಯೊಂದನ್ನು ಗುರುತಿಸಬಹುದು.

ಈ ಕವನಗಳ ನಾಯಕಿ–ಒಬ್ಬಳಲ್ಲ, ಹಲವರಿಗೆ ಪ್ರತಿನಿಧಿಯಾಗಬಯಸುವಾಕೆ. ಆ ಹಲವರು ಯುಗಾಂತರಗಳಿಂದ ಕಾಡುವ ಸೀತೆ, ಮಹಾಶ್ವೇತೆ, ವಿನತೆ, ಅಕ್ಕಮಹಾದೇವಿ ಹೀಗೆ ಹೆಸರಾದವರು ಅಥವಾ ಹೆಸರಿಲ್ಲದ ಸಹಸ್ರಾರು ಜನ. ಇವರೆಲ್ಲರ 'ಸುಖ'ದ ಹಂಬಲದ ಸ್ವರೂಪವಾದರೂ ಏನು ?

'ನೂರು ಜನುಮ ದಾಟಿದರೂ
ಕಾಯುತ್ತಿದ್ದೇನಲ್ಲ
ಪುಂಡರೀಕನಾಗಿಯೇ ಬರುತ್ತೀ ಎಂದು' (ಮಹಾಶ್ವೇತೆಯ ಸ್ವಗತ)

'ಈಗ ಬಿಗಿದ ಸಂಕಲೆಗಳಲಿ
ಕನಸಿನ ಮೊಟ್ಟೆಗಳೊಡೆವುದನೆ ಕಾವನೋಂಪಿ
ಬಲಿಯದ ಬಯಕೆಗಳು
ಹಲವುಳಿಯುತ್ತವೆ
ಮತ್ತೆ ಗರಿಗಟ್ಟಿಕೊಳ್ಳುತ್ತಾ
ಉದ್ಧಾರಕನಿಗಾಗಿ ಕಾಯುತ್ತವೆ' (ವಿನತೆ ಮತ್ತು ಗರುಡ)

ಹೀಗೆ ಪತಿ/ಪುತ್ರರ ಮೂಲಕವೇ 'ಸುಖ'ದ ಸೀಮೆಯ ಗುರುತಿಸುವ ಚಿತ್ರಕಟ್ಟುವ ಕನಸಾದರೂ ಏನು ?

'ರೆಕ್ಕೆಯಗಲಿಸಿ ಹಾರಬೇಕಿವೆ
ಆ ಹಸಿರಿನ ನೆರಳಿಗೆ
ಮನೆಮಾಡಿ ಮರದೊಳಗಿನ
ಪೊಟರೆಗೂಡಿಗೆ
ಮುಚ್ಚಿಟ್ಟು ಕಾವು ಕೊಟ್ಟು
ಹೊಸ ಬದುಕ
ಮೊಟ್ಟೆಗಳ ಬಿರಿಸಬೇಕಿದೆ' (ಒಂದು ಕನಸು)

ಎಲ್ಲ 'ಹೊಸ ಬದುಕಿ'ನ ಕಲ್ಪನೆಯಾಗಲೀ, ಅದರ ಸಾಕ್ಷಾತ್ಕಾರವಾಗಲೀ 'ಮನೆ ಮಾಡಿ' 'ಕಾವು ಕೊಟ್ಟು' 'ಮೊಟ್ಟೆಗಳ ಬಿರಿಸು'ದ ಆ ಮೂಲದವೇ ಆಗಿರುವುದು ಗಮನಾರ್ಹ. ಇಂಥಲ್ಲಿ ಇದಕ್ಕೆ ಅತೀತವಾದೊಂದು ಸ್ಥಿತಿಯನ್ನು ಮಹಿಳೆಯರು ಕನಸಿಸಲಾರರೆ ಎಂಬ ಪ್ರಶ್ನೆ ಏಳಬಹುದು. ಆದರೆ ತಾನಿರುವ ಪರಂಪರೆಯೊಳಗಿದ್ದುಕೊಂಡೇ, ಅದರಲ್ಲಿನ ತನ್ನ ವಿರುದ್ಧವಾದ್ದನ್ನು ತಿದ್ದಲೆತ್ನಿಸುವುದು ಮಹಿಳಾ ಕವಿಗಳಿಗೆ ಎದುರಾಗಿರುವ ಸಮಸ್ಯೆ. ಏಕೆಂದರೆ, ಪ್ರಧಾನ ಪರಂಪರೆಯ ಸಿದ್ಧಶಬ್ದರೂಪಗಳು,

ಪುರಾಣಗಳು, ಪ್ರತಿಮೆಗಳು, ಕಾವ್ಯವಸ್ತುಗಳ ಸಂಕೀರ್ಣ ಪ್ರಭಾವದಿಂದ ಪೂರ್ಣ ಬೇರೆಯಾಗಿ ಬರೆಯುವುದು ಯಾರೊಬ್ಬರಿಗೂ ಅಸಾಧ್ಯ. ಸಾಧ್ಯವಿರುವುದು ಆ ಪರಂಪರೆಯ ಜಾತಕಗಳ ಪರಿಷ್ಕರಣೆ, ಸುಧಾರಣೆ ಮಾತ್ರ. ಆ ಯತ್ನವನ್ನು ಉಷಾ ಮಾಡುತ್ತಿರುವುದರ ನಿದರ್ಶನ ಈ ಸಂಕಲನದ ಶೀರ್ಷಿಕೆಯ ಕವನ 'ಈ ನೆಲದ ಹಾಡು'ವಿನಲ್ಲಿ ದೊರೆಯುತ್ತದೆ:

'ಭೂಮಿ = ಪ್ರಕೃತಿ = ಸ್ತ್ರೀ' ಸಮೀಕರಣದಲ್ಲಿ ಪರಂಪರಾಗತ ಪುರುಷ ಸಂಸ್ಕೃತಿಯ ಬಹುದೊಡ್ಡ ಸಮಸ್ಯೆಯಿದೆ:

ಕಾಯುವ
ಕೊಲ್ಲುವ, ಸಂಗೋಪಿಸುವ
ವಿನಾಶಗೈಯ್ಯುವ

ಈ ಮಹಾಮಾತೃ ಪ್ರತೀಕದ ಜೊತೆಯಲ್ಲಿ ತಾಯಿಯಿಂದ ಬೇರೆಯಾಗಲೇಬೇಕಾದ ಪುರುಷನ ವಿಧಿಯಿದೆ. ಆ ಬೇರೆಯಾಗುವುದರ ನೋವಿದೆ, ಬೆರಗಿದೆ, ಭೀತಿಯಿದೆ, ಮುಗ್ಧತೆಯಿದೆ. ಈ ಪುರುಷ ಚಿಂತನೆಯ ಭಾವಸಂಕೀರ್ಣತೆಯ ಪ್ರತೀಕವೊಂದನ್ನು ಸ್ತ್ರೀ ಶೋಷಣೆಯ ನೆಲೆಯಿಂದ ಅಳೆಯಲು, ವಿಶ್ಲೇಷಿಸಲು, ಯತ್ನಿಸುವಲ್ಲಿ ಕವನದ ನಾಯಕಿ ತನ್ನನ್ನು ಆ ಮಾತೃಪ್ರತೀಕದ ಜೊತೆ ಸಮೀಕರಿಸಿಕೊಳ್ಳುತ್ತಾಳೆ.

'ನನ್ನ ತೊಡೆ ತುಂಬ ನೂರಾರು
ನೇಗಿಲ ಗಾಯ
ನಾನು ನನ್ನಮ್ಮ ಅವಳಮ್ಮ ಅಮ್ಮಂದಿರು
ಎಲ್ಲರನು ಮೀರಿಸಿದ ದೊಡ್ಡಮ್ಮ ಕೂಡಾ
ಸಹಿಸಿ ಒಣಗಿದ ಗಾಯ
ಗಂಡನೋ ಮಗನೋ ತಿಳಿಯದ
ಹೊಂದಾ ನೇಗಿಲ ಸಾಲು'

ನಿಷ್ಕ್ರಿಯವಾದ ಜಡವಾದ ಭೋಗವಸ್ತುವಾದ ಈ ಶೋಷಿತ ಸ್ಥಿತಿಯಲ್ಲಿ ತನ್ನ ಶಕ್ತಿಯನ್ನೂ ಗುರುತಿಸುತ್ತಾಳೆ

'ಎಲ್ಲಿ ಹೋಗುತ್ತೀ ನನಗೆ ಗೊತ್ತಿಲ್ಲವೇ ?
ನನ್ನೆದೆಗೆ ಬೇರಿಳಿದ ಕಾಲು ನಿನ್ನದು'

ಆದರೆ ಕವನದ ಮುಖ್ಯಗುರಿ, ಇಂಥ ಆಳುವ/ಆಳಿಸಿಕೊಳ್ಳುವ ದ್ವಂದ್ವವನ್ನು ವಿಡಂಬಿಸುವುದಷ್ಟೇ ಅಲ್ಲ. ಕೆಳಗಿನ ನೆಲೆಯಿಂದ ಬೇರೆಯಾದ, ತನ್ನತನವನ್ನು ಗುರುತಿಸಿ, ತೋರಿಸುವ ಆಶಯದ್ದು ಅದು.

'ನನ್ನನ್ನೂ ಕರೆಯುತ್ತೆ ಕಾಣೆರೋ
ಆ ನೀಲ ಆಗಸದ ನೂರಾರು ಬಣ್ಣಗಳು
ಹಾರೋ ಹಕ್ಕಿಗಳು'

ಎನ್ನುವ ಮಾನವೀಯ ನೆಲೆಯಲ್ಲಿ 'ವಸ್ತು'ವಿಗಿಂತ ಭಿನ್ನವಾದ ವ್ಯಕ್ತಿಯಾಗಿ ಪುರುಷನ ಸಂಗಾತಿಯಾಗಿ ತನ್ನನ್ನು ಗ್ರಹಿಸಬೇಕೆಂಬ ಒತ್ತಾಯವಿದೆ:

'ನೆನೆಯೋ ನನ್ನೊಡನೆ
ನದಿಯ ಜಳಜಳ
ಬಿಸಿಲ ಕಾವು
ಅನ್ನವಿಲ್ಲದ ನೋವು
ಗರ್ಭಪಾತದ ರಕ್ತ
ಒಂದು ಕ್ಷಣ ಈ
ನೆಲದ ಕಣ್ಣೀರನಳಿಸಲು
ಕೈಯನ್ನಾದರೂ ಎತ್ತೋಣ'.

ಇಂಥ ಕವನದಲ್ಲಿ ಅಡಿಗರ 'ಭೂಮಿಗೀತ'ಕ್ಕೆ ಒಂದು ಕೀಟಲೆಯ 'ತದ್ಭವ'ವನ್ನು ಕಂಡುಬಿಡುವುದು ಬಹು ಸುಲಭ, ಆದರೆ 'ಭೂಮಿಗೀತ' ನಮ್ಮ ಕಾವ್ಯ ಪರಂಪರೆಯ ಯಾವ ಮುಖ್ಯ ಜೀವನದರ್ಶನವನ್ನು ಪ್ರತಿಪಾದಿಸುತ್ತದೆಯೋ ಅದರ ಮೂಲದ ಕೊರತೆಯೊಂದನ್ನು ಶೋಧಿಸುವ ಮಹತ್ವಾಕಾಂಕ್ಷೆಯನ್ನಾದರೂ ಉಷಾರ ಕವನಗಳು ಹೊತ್ತಿರುವುದು ನಿಜಕ್ಕೂ ಮಹತ್ವದ್ದೆಂದು ತೋರುತ್ತದೆ.

—ಬಿ. ಎನ್. ಸುಮಿತ್ರಾಬಾಯಿ

ದಗಡೂ ಪರಬನ ಅಶ್ವಮೇಧ (ಕಥಾ ಸಂಕಲನ)

ಲೇಖಕರು: **ಜಯಂತ ಕಾಯ್ಕಿಣಿ**
ಪ್ರಕಾಶಕರು: ಕೃತಿ ಪ್ರಕಾಶನ, ತ್ಯಾಗರಾಜನಗರ, ಬೆಂಗಳೂರು-೭೪
ಬೆಲೆ: ರೂ. 20/-

ಜಯಂತ ಕಾಯ್ಕಿಣಿಯವರ ಮೂರನೆಯ ಕಥಾಸಂಕಲನ 'ದಗಡೂ ಪರಬನ ಅಶ್ವಮೇಧ', ಒಟ್ಟು ಮೂರು ಭಾಗಗಳಲ್ಲಿ ಹತ್ತು ಕತೆಗಳನ್ನೊಳಗೊಂಡಿದೆ. 1984 ರಿಂದೀಚೆಗೆ, ಪತ್ರಿಕೆಗಳಲ್ಲಿ ಆಗಾಗ ಅಲ್ಲಲ್ಲಿ ಪ್ರಕಟವಾದ ಕತೆಗಳನ್ನೆಲ್ಲಾ ಸೇರಿಸಲಾಗಿದೆ. ಇವನ್ನೆಲ್ಲಾ ಒಟ್ಟಿಗೆ ಒಮ್ಮೆಲೆ ಓದಿದಾಗ ವೈವಿಧ್ಯಗಳಲ್ಲಿ ಹಂಚಿಹೋಗಿರುವ ಬದುಕಿನ

ಅನೇಕ ಸ್ಥಿತಿಗಳನ್ನೂ, ಇನ್ನೂ ಅನೇಕ ಪಾತ್ರಸೃಷ್ಟಿಗಳ ಮೂಲಕ ದಾಖಲಿಸುತ್ತಾ ಹೋಗುವ ಜಯಂತ ಕಾಯ್ಕಿಣಿಯವರಲ್ಲಿ ಬದುಕಿನ ಒಟ್ಟಂದವನ್ನು ಸಮಗ್ರವಾಗಿ ಶೋಧಿಸಿ, ಅದರ ಮೂಲಭಾವವನ್ನೂ, ತರ್ಕವನ್ನೂ ಒಟ್ಟಿಲ್ಲಿ ಗ್ರಹಿಸಬಯಸುವ ಸ್ಥಾಯಿ ಎಳೆಯೊಂದು ಗೋಚರಿಸುತ್ತದೆ.

ಈ ಅರ್ಥದಲ್ಲಿ ಜಯಂತ ಕಾಯ್ಕಿಣಿಯವರು, ಸೂಕ್ಷ್ಮ ರಚನಾ ಕೌಶಲ್ಯವುಳ್ಳ, ವಿವರಗಳಲ್ಲಿ ಸೂಕ್ಷ್ಮವಾಗಿ ಪೋಣಿಸಬಯಸುವ, ನವ್ಯ ಶೈಲಿಯ ನಾಜೂಕಿನ ಕತೆಗಾರ. ಇಲ್ಲಿ ಪ್ರತಿಯೊಂದು ಕತೆಯೂ, ಬಿಡಿಯಾಗಿ ನೋಡಿದಾಗ, ನಗರ ಜೀವನದ ಹಿನ್ನೆಲೆಯಲ್ಲಿ ನೋಡುವ ಕಣ್ಣು ಬದುಕಿನ ಒಂದಂಶವನ್ನು ಪ್ರತ್ಯೇಕ ಏಕಾಗ್ರತೆಯಲ್ಲಿ ಗಮನಿಸುತ್ತಿರುವಂತೆ ಭಾಸವಾಗುತ್ತದೆ. ಭಾಗ ಒಂದರ ಹೊರತಾಗಿ ಇತರ ಕತೆಗಳ ಪರಿಸರವೂ ನಗರದ್ದೇ ಆಗಿದೆ. ಆದರೆ ಈ ಎಲ್ಲಾ ಕತೆಗಳನ್ನು ಒಟ್ಟಿಲ್ಲಿ ಗಮನಿಸಿದಾಗ, ಈ ಎಲ್ಲಾ ಕತೆಗಳನ್ನೂ ಹೊಕ್ಕು ಹೊರಡುವ ಚಿಂತನೆಯು ಒಂದು ಸಾಮಾನ್ಯ ಎಳೆ ಗೋಚರಿಸುತ್ತದೆ. ಬದುಕನ್ನು ಬಹಳ ಪ್ರಿಯವಾಗಿ ಸೇವಿಸುವ, ಇತ್ಯಾತ್ಮಕ (Positive) ಒಲವಿಂದ ಅದನ್ನು ಅಪ್ಪಿಕೊಳ್ಳಬಯಸುವ ಆರೋಗ್ಯಕರ ಮನಸ್ಸು ಗೋಚರಿಸುತ್ತದೆ. ಮಧ್ಯಮ ವರ್ಗದ ಬದುಕಿನ ಗೋಳುಗಳು, ಬದಲಾವಣೆಗೆ ಭಯಪಡುವ ಮಾನಸಿಕ ಸ್ಥಿತಿ, ಇದ್ದಲ್ಲೇ ಗೊಣಗುತ್ತಾ, ಕೊಳೆಯುವ ಸ್ಥಿತಿಯಲ್ಲಿ ಬದುಕಬೇಕಾದ ಅನಿವಾರ್ಯತೆ, ನಗರ ಜೀವನದ ಏಕಾಂಗೀತನ ಹಾಗೂ ಅನಾಮಧೇಯ ಅಸ್ವಸ್ಥತೆ–ಇವೆಲ್ಲವುಗಳ ಒಳಗಿಂದ, ನಳನಳಿಸುವ ಬದುಕಿನ ಕ್ರಿಯಾಶೀಲ, ಅಪ್ತ, ಜೀವಂತ ಪ್ರಕೃತಿಯನ್ನು ಗುರುತಿಸಿ, ಅದನ್ನೇ ಜೀವನದ ಆದರ್ಶವನ್ನಾಗಿ ಗುರುತಿಸಿಕೊಂಡಿರುವುದು ಈ ಕತೆಗಳ ದೊಡ್ಡ ಗುಣ.

ಇದರಿಂದಾಗಿ, ಇಲ್ಲಿನ ಎಲ್ಲಾ ಕತೆಗಳಲ್ಲಿ ಒಬ್ಬ ವ್ಯಕ್ತಿಯ ದೃಷ್ಟಿಕೋನದಿಂದ ಬದುಕನ್ನು ಗ್ರಹಿಸಿ, ಅದರ ಹಿನ್ನೆಲೆಯಲ್ಲಿ ಸಮುದಾಯ-ವನ್ನು ಮತ್ತು ಪರಿಸರವನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆ ಇದೆ. ಇದು ಒಂದು ಸಮುದಾಯದ ಸ್ವೀಕೃತ ಮೌಲ್ಯಗಳ ಅಥವಾ ಆ ಹಿನ್ನೆಲೆಯಲ್ಲಿ ಆರಿಸಲ್ಪಟ್ಟ ಮೌಲ್ಯಗಳ ಬೆಳಕಲ್ಲಿ ಜೀವನವನ್ನು ಪರೀಕ್ಷಿಸುವ ಅಥವಾ ಮೌಲ್ಯ ನಿರ್ಧಾರ ಮಾಡಿಕೊಳ್ಳುವ ಪ್ರಕ್ರಿಯೆಗೆ ತೀರಾ ವಿರುದ್ಧವಾದ್ದು. ಆದ್ದರಿಂದ ಜಯಂತ ಕಾಯ್ಕಿಣಿಯವರು ನಿರ್ಮಲವಾಗಿ ಓದಿಸಿಕೊಳ್ಳುವ ನವ್ಯ ಪಂಥದ ಶೈಲಿಯನ್ನು ಇನ್ನೂ ಉಳಿಸಿಕೊಂಡವರು.

ಜಯಂತ ಕಾಯ್ಕಿಣಿಯವರ ಕತೆಗಳ ಇನ್ನೊಂದು ಅಂಶ, ಕೇವಲ ಲೌಕಿಕವಲ್ಲದ, ಸ್ವಲ್ಪ ಮಟ್ಟಿಗೆ ಮೆಟಾಫಿಸಿಕಲ್ ಎನ್ನಬಹುದಾದ, ಬದುಕಿನ ಸಾಧ್ಯತೆಗಳನ್ನು ಅವರು ತಿರಸ್ಕರಿಸುವವರಲ್ಲ. ಎಲ್ಲವೂ ತಯಾರಾಗಿದ್ದರೂ, ಅದು ಹೊತ್ತಿಕೊಳ್ಳದೇ ಉಳಿದು,

ಬಂದು ದಿವ್ಯದಕ್ಷಣದಲ್ಲಿ ಇದ್ದಕ್ಕಿದ್ದಂತೆ ಗೋಚರಿಸಿಬಿಡುವ ಒಂದು ಅವ್ಯಕ್ತ ಸಾಧ್ಯತೆಯನ್ನು ಅವರು ತಿರಸ್ಕರಿಸುವವರಲ್ಲ. ಅದು ಅನೇಕ ಮಜಲುಗಳಲ್ಲಿ, ಅನೇಕ ರೀತಿಗಳಲ್ಲಿ, ಭಾವಗಳಲ್ಲಿ ಸಾಕಾರಗೊಳ್ಳಬಹುದು. ಈ ಸಂಕಲನದ 'ಬಿನ್ನಿ ಕೃಷ್ಣನ್ ಬಂದು ಹೋದ' ಕತೆಯಲ್ಲಿ ಬಹಳ ಗಂಭೀರ ಧಾಟಿಯಲ್ಲಿ ಅದು ಮೂಡಿ ಬಂದರೆ, 'ದಗಡೂ ಪರಬನ ಅಶ್ವಮೇಧ'ದಲ್ಲಿ ಅದು ಬಹಳ ಕಾಮಿಕ್ ಶೈಲಿಯಲ್ಲಿ ನಿರೂಪಿತವಾಗಿದೆ. ನಗರ ಜೀವನದ ಹಿನ್ನೆಲೆಯ ಬದುಕಲ್ಲಿ, ಎಲ್ಲ ಸಾಮಾನ್ಯ, ಸಪ್ಪೆ, ಅರ್ಥಹೀನ ಅಂದು ಕೊಳ್ಳುತ್ತಿದ್ದಂತೆ, ಬದುಕಿನ ಸೌಂದರ್ಯ ಸಾಧ್ಯತೆಗಳು ಇದ್ದಕ್ಕಿದ್ದಂತೆ ಈ ಸಾಮಾನ್ಯ ಜೀವನದೊಳಗಿಂದಲೇ ಗೋಚರಿಸಿಬಿಡುವ ಹಿನ್ನೆಲೆಯಲ್ಲಿ ಕಾಯ್ಕಿಣಿಯವರ ಮೂಲ ದೃಷ್ಟಿಯನ್ನು ನಾವು ಗುರುತಿಸಿಕೊಳ್ಳಬಹುದು.

'ಸಮೀರನ ದಿನ' ನಗರ ಜೀವನದ ಅನೇಕ ಒಳಸುಳಿಗಳನ್ನೂ, ಸಾಂಸ್ಕೃತಿಕವಾಗಿ ಬೇರು ಕಡಿದುಕೊಂಡು, ನಗರದ ಜೀವ ಪ್ರಪಂಚದಲ್ಲಿ ಆರ್ಥಿಕ ಅನಿವಾರ್ಯತೆಯಿಂದ ಸೇರಿಕೊಂಡಿರುವ ಒಂದು ದೊಡ್ಡ ಸಮುದಾಯದ ಅಂತರಂಗವನ್ನು ಬಿಡಿಸಿಟ್ಟು ಪ್ರಾತಿನಿಧಿಕವಾಗಿ ಎತ್ತಿತೋರಿಸುವ ಕತೆ. ಈ ಕತೆ ಪಡೆದಿರುವ ಸುಂದರ ಆಕಾರವೇ. ಇಂತಹ ಬದುಕನ್ನು ಗಮನಿಸುವಲ್ಲಿ ಕತೆಗಾರನಿಗಿರುವ ಸಂಯಮ, ಅದರ ಎಳೆ ಎಳೆಗಳನ್ನು ಅರ್ಥಮಾಡಿಕೊಳ್ಳುವ ಕಳಕಳಿ, ಇದರಲ್ಲಿ ಬದುಕು ಕಳೆದುಹೋಗದಂತೆ, ಇರಬೇಕಾದ ಎಚ್ಚರ, ವಾಸ್ತವ ಪ್ರಪಂಚದ ಕಟುನಿಷ್ಠುರತೆಯನ್ನು ಎದುರಿಸಿಯೂ. ಜೀವನವನ್ನು ಅದರ ಎಲ್ಲಾ ವಿವರಗಳೊಂದಿಗೆ ಆರಾಧಿಸ ಬಯಸುವ ತಹತಹ. ಎಲ್ಲವನ್ನೂ ತೋರಿಸಿಕೊಡುತ್ತದೆ.

ಆದರೆ, ಜಯಂತ ಕಾಯ್ಕಿಣಿಯವರ ಮುಂದಿನ ಸಾಧ್ಯತೆಗಳತ್ತ ಬೆರಳು ತೋರಿಸುತ್ತಿರುವ ಕತೆ 'ದಗಡೂ ಪರಬನ ಅಶ್ವಮೇಧ'. ಇಲ್ಲಿನ ಇತರ ಕತೆಗಳ ಗಂಭೀರ ಧಾಟಿಗಿಂತ ಭಿನ್ನವಾಗಿ, ತುಸು ಕಾಮಿಕ್ ಶೈಲಿಯನ್ನು ಬಳಸಿಕೊಂಡಿರುವ ಈ ಕತೆ, ಜಯಂತ ಕಾಯ್ಕಿಣಿಯವರ ಮಗುವಿಕೆಯನ್ನು ತೋರಿಸಿಕೊಡುತ್ತದೆ. ಅತಿಯಾದ ಗಂಭೀರತೆ ದಿನನಿತ್ಯದ ಅರಿವಿಗೆ ಕೆಲವೊಮ್ಮೆ ಹೆಚ್ಚಾಗುತ್ತದೆ. ನಿತ್ಯಜೀವನದ ಅನೇಕ ಸುಖಗಳು ಅದರಿಂದಾಗಿ ಕೆಲವೊಮ್ಮೆ ಮರೆಯಾಗುತ್ತದೆ. ಈ ಕತೆಯ ಭಾನುಮತಿ, ಗುಲಾಮ, ಮದುಮಗ ದಗಡೂ ಪರಬ್–ಇಂತಹ ಸಾಮಾನ್ಯ ಜೀವಗಳನ್ನು ಸಮರ್ಪಕವಾಗಿ ಹಿಡಿಯಬಲ್ಲ ಧಾಟಿ ಇದು. ಈ ಸಾಧ್ಯತೆಯತ್ತ, ಜಯಂತ ಕಾಯ್ಕಿಣಿಯವರು ಸ್ಪಷ್ಟ ಹೆಜ್ಜೆ ಇಡುತ್ತಿರುವುದು ಬಹಳ ಸ್ವಾಗತಾರ್ಹ ಬೆಳವಣಿಗೆ. ಆಧುನಿಕ ಜೀವನದ ಹಿನ್ನೆಲೆಯಲ್ಲಿ, ಕನ್ನಡದ ಸಾಹಿತ್ಯ ಸಂದರ್ಭವೂ ಈ ಜಾಡಿನಲ್ಲಿ ಒಂದು ದೊಡ್ಡಮಟ್ಟದ ಸಾಧನೆಗಾಗಿ ಕಾಯುತ್ತಿದೆ ಎಂದು ಸ್ಪಷ್ಟವಾಗಿ ಹೇಳಬಹುದು.

—**ಎಸ್. ಆರ್. ವಿಜಯಶಂಕರ್**

ಉತ್ಖನನ (ಕಥಾ ಸಂಕಲನ) ಪುಟ: 128. ಬೆಲೆ: ರೂ. 12/-

ಕಟ್ಟುಪಾಡುಗಳು (ಕಥಾ ಸಂಕಲನ) ಪುಟ: 98. ಬೆಲೆ: ರೂ. 15/-

ಎರಡೂ ಪುಸ್ತಕಗಳ ಲೇಖಕರು: **ಟಿ. ಆರ್. ರಾಧಾಕೃಷ್ಣ**

ಪ್ರಕಾಶಕರು: ಚಿನ್ಮೂಲಾದ್ರಿ ಪ್ರಕಾಶನ, ಚಿತ್ರದುರ್ಗ

ಸಣ್ಣ ಕಥೆಗಳನ್ನು ನಿಷ್ಠೆಯಿಂದ ರಚಿಸಿಕೊಂಡು ಬರುತ್ತಿರುವ ರಾಧಾಕೃಷ್ಣ ಅವರ ಈ ಎರಡು ಕಥಾಸಂಕಲನಗಳ ಒಳ್ಳೆಯ ಗುಣಲಕ್ಷಣಗಳನ್ನು ಮೊದಲಲ್ಲೇ ಗುರುತಿಸಿಬಿಡುವುದು ಉತ್ತಮ. ಎಷ್ಟೇ ಕಷ್ಟ, ಕೊರಗುಗಳಿದ್ದಾಗ್ಯೂ ಜೀವನವನ್ನು ಇತ್ಯಾತ್ಮಕವೆಂದೇ ಸ್ವೀಕರಿಸುವ ಮನೋಭಾವ ಇವರ ಎಲ್ಲಾ ಕಥೆಗಳಲ್ಲೂ ಕಂಡು ಬರುವ ಮುಖ್ಯ ಗುಣ. ಇದರ ಜೊತೆಗೆ, ಬದುಕಿನ ಏರುಪೇರುಗಳನ್ನು ವಾಸ್ತವ ನೆಲೆಯಲ್ಲಿ ಗ್ರಹಿಸಿ ವಿನಯ–ಸಂಯಮಗಳಿಂದ ಅರ್ಥ ಮಾಡಿಕೊಳ್ಳುವ ಕ್ರಮ ಇಲ್ಲಿದೆ. ಸಹಜತೆ ಹಾಗೂ ಪ್ರಾಮಾಣಿಕತೆಗಳಿಗೆ ವಿಮುಖವಾದ ಜೀವನಶೈಲಿಯನ್ನು ಇವರು ತಿರಸ್ಕರಿಸುತ್ತಾರೆ. ಇಂತಹ ಕಡೆಗಳಲ್ಲಿ ವಿಷಾದ ಸ್ಥಾಯಿಯಾಗಿ ಮೂಡುತ್ತದೆ. ಇಂತಿಂತಹ ಮೌಲ್ಯಗಳನ್ನೇ ಅರಸಿ ಅಪ್ಪಿಕೊಳ್ಳಬೇಕೆಂಬ ಸಂದೇಶ ನೀಡದೆ ಇವರು ವಿಮರ್ಶಾತ್ಮಕ ಅಂತರ ಮತ್ತು ಎಚ್ಚರವನ್ನು ಕಾಯ್ದುಕೊಳ್ಳುತ್ತಾರೆ, ಮೇಲ್ನೋಟಕ್ಕೆ ತೀರಾ ಸರಳವೆನ್ನಿಸುವ 'ತೀರ್ಪು' ಕಥೆಯನ್ನು ಇಲ್ಲಿ ಗಮನಿಸಬಹುದು. ಮೂರ್ತ ವಾಸ್ತವ ವಿವರಗಳ ಮಧ್ಯದಿಂದ ಮುಗ್ಧತೆಯ ಪರವಾದ ಧೋರಣೆ ತನ್ನಷ್ಟಕ್ಕೆ ತಾನೇ ಬಿಚ್ಚಿಕೊಳ್ಳುತ್ತದೆ.

ರಾಧಾಕೃಷ್ಣರ ಅನುಭವ ಜಗತ್ತು ಮನುಷ್ಯ ಸಂಬಂಧಗಳಿಂದ ತುಂಬಿಕೊಂಡಿದೆ. ಹಾಗೆ ನೋಡಿದರೆ, ಇವರ ಮುಖ್ಯ ಆಶಯವೇ ಈ ಸಂಬಂಧಗಳ ಎಲ್ಲ ಮಗ್ಗುಲುಗಳನ್ನು ಅರ್ಥಮಾಡಿಕೊಳ್ಳುವುದು. ಉದಾಹರಣೆಗೆ, 'ರಾಕ್ಷಸ ಮತ್ತು ಕುಳ್ಳ' ಹಾಗೂ 'ಸೋಮು ಮತ್ತು ಗವಿ' ಕಥೆಗಳಲ್ಲಿ ಇವರು ಮನುಷ್ಯ–ಮನುಷ್ಯ ಸಂಬಂಧಗಳನ್ನು ಕೆದಕುತ್ತಾರೆ. 'ಕಟ್ಟುಪಾಡುಗಳು' ಕಥೆಯಲ್ಲಿ ಈ ಪ್ರಕ್ರಿಯೆ ಇನ್ನಷ್ಟು ಸೂಕ್ಷ್ಮವಾಗಿದೆ.

ನಮ್ಮ ಒಳತೋಟಿಗಳಿಗೆ, ಆಶಯಗಳಿಗೆ ಕಥಾರೂಪ ಕೊಡುವಲ್ಲಿ ರಾಧಾಕೃಷ್ಣರ ಶಿಸ್ತನ್ನು ಗಮನಿಸಬೇಕು. ಕಥೆ ನಿಧಾನವಾಗಿ ತನ್ನ ಕೈಗಳನ್ನು ಚಾಚುತ್ತಾ ನಿಲುವುಗಳನ್ನು ಸಾವಕಾಶವಾಗಿ ಪ್ರಕಟಿಸುತ್ತದೆ. ಈ ಕಥನ ಕ್ರಿಯೆಯ ನಿರ್ವಹಣೆ ಓದುಗರ ಮನಸ್ಸನ್ನು ತುಂಬಿಕೊಳ್ಳುವಂತಿದೆ.

ಲೇಖಕರ ಶಕ್ತಿಯತ್ತ ನಮ್ಮ ಗಮನ ಸೆಳೆಯುವ ಈ ಕಥೆಗಳು ಕೊನೆಗೆ ಅತೃಪ್ತಿಯನ್ನು ಉಂಟುಮಾಡಿ ಹೋಗುತ್ತವೆಂಬುದನ್ನು ಹೇಳಬೇಕು. ಇದಕ್ಕೆ ಹಲವಾರು ಕಾರಣಗಳಿವೆ. ಮೊದಲನೆಯದಾಗಿ, ಕಥೆಯ ಅರ್ಥಶ್ರೀಮಂತಿಕೆಯನ್ನು ಹೆಚ್ಚಿಸಲೇಬೇಕೆಂಬ ಪ್ರಜ್ಞಾಪೂರ್ವಕ ತೀರ್ಮಾನ. ಇದನ್ನು ಸಾಧಿಸಲು ಕಥೆಯ ಅನುಭವದ ಹಂದರದ ಮೇಲೆ ಸಾಂಕೇತಿಕತೆಯ ಚಪ್ಪರವನ್ನು ಇವರು ಹೇರುತ್ತಾರೆ. 'ಹೊತ್ತು ತಂದ ಹೊರೆ' ಮತ್ತು 'ನಾಟಕಗಳ ಮಧ್ಯೆ' ಸಂಕೇತಗಳ ಅನಗತ್ಯ ಭಾರದಿಂದ ಕುಸಿಯುತ್ತವೆ. ಎರಡನೆಯದಾಗಿ, ಅನುಭವ ವಲಯದಲ್ಲಿ ದಕ್ಕುವ ವಿವರಗಳನ್ನು ಒಂದು ವಿನ್ಯಾಸದಲ್ಲಿ ನೇಯ್ದು ಮುಖ್ಯ ಕೇಂದ್ರಕ್ಕೆ ತರಲಾರದೇ ಹೋಗುವುದು. 'ಬಳುವಳಿ', 'ರೋಗಗ್ರಸ್ಥ' ಕಥೆಗಳ ಶಯ್ಯೆಯಲ್ಲಿರುವ ವಿವರಗಳು ವಸ್ತುವಿಗೆ ಪೂರಕವಾಗಿ ದುಡಿಯದೆ, ತಾತ್ತ್ವಿಕತೆಯನ್ನು ಕಟ್ಟಿಕೊಡದೆ ಅಲ್ಲಲ್ಲೇ ಚದುರಿಕೊಂಡು ಬಿಡುತ್ತವೆ. ಮೂರನೆಯದಾಗಿ (ಮತ್ತು ಮುಖ್ಯವಾಗಿ) ಒಂದು ವಸ್ತುಸ್ಥಿತಿ ಅಥವಾ ಸಂಬಂಧದ ಆಳಕ್ಕಿಳಿಯದೆ ಕಥೆ ಒಂದು ಹಂತದಲ್ಲಿ ತಟಸ್ಥವಾಗಿಬಿಡುವುದು. ಎಷ್ಟೇ ವಿನಯದಿಂದ ತಮ್ಮ ಅನುಭವವನ್ನು ಇವರು ಮುಖಾಮುಖಿಯಾದರೂ ಶೋಧನೆಯ ಕಣ್ಣನ್ನು ಪ್ರಖರವಾಗಿಸುವುದಿಲ್ಲ. ಹೀಗಾಗಿ ಅನುಭವ ನೀಡುವ ಅಚ್ಚರಿ, ಅದರ ನಿಗೂಢತೆಗಳಿಂದ ಕಥೆಗಳು ವಂಚಿತವಾಗಿಬಿಡುತ್ತವೆ. ಇದೇ ಕಾರಣದಿಂದಾಗಿ 'ನಿಕಷ'ದಂತಹ ಗಾಢ ರಚನೆ ಕೂಡಾ ಒಂದು ಗೆರೆಯೊಳಗೆ ನಿಂತುಬಿಡುತ್ತದೆ.

ಯಾವ ಕಥೆಯಲ್ಲೂ ಜೀವವಿರೋಧಿ ಮೌಲ್ಯವನ್ನು ಅನ್ವೇಷಿಸದ ರಾಧಾಕೃಷ್ಣ ಸಣ್ಣಕಥೆ ಪ್ರಕಾರದ ಸಾಧ್ಯತೆಗಳನ್ನು ತಮ್ಮದಾಗಿಸಿಕೊಳ್ಳಲು ತೊಡಗಿದ್ದಾರೆಂಬುದಕ್ಕೆ ಈ ಎರಡು ಕಥಾಸಂಕಲನಗಳೇ ಸಾಕ್ಷಿ. ನಿಜಕ್ಕೂ ಬೇರ್ಪಡಿಸಲಾಗದ ತಾತ್ತ್ವಿಕ ನಿಲುವುಗಳು ಮತ್ತು ಕಲಾವಂತಿಕೆ ಇವರ ಮುಂದಿನ ಕಥೆಗಳಲ್ಲಿ ಹೇಗೆ ರೂಪುಗೊಳ್ಳುತ್ತವೆ ಎಂದು ಕುತೂಹಲದಿಂದ ಕಾಯಬೇಕು.

—ಎ. ಆರ್. ನಾಗಭೂಷಣ

ಮೊದಲ ನೋಟ

ಟಿಪ್ಪುಸುಲ್ತಾನನ ಖಡ್ಗ (ಕಾದಂಬರಿ)

ಇಂಗ್ಲಿಷ್ ಮೂಲ: ಭಗವಾನ್ ಎಸ್. ಗಿಡ್ವಾನಿ, ಕನ್ನಡಕ್ಕೆ: ಎಸ್. ಬಿ. ರಂಗನಾಥ್

ಇತಿಹಾಸಕ್ಕೂ ಐತಿಹಾಸಿಕ ಕಾದಂಬರಿಗೂ ಇರುವ ವ್ಯತ್ಯಾಸವನ್ನು ಭಗವಾನ್ ಎಸ್. ಗಿಡ್ವಾನಿಯವರ ಮಾತುಗಳಲ್ಲೇ ಹೇಳುವುದಾದರೆ–"ಟಿಪ್ಪು ಯಾವುದಕ್ಕಾಗಿ

ಬದುಕಿದನೋ ಹಾಗೂ ಮಡಿದನೋ ಅದೆಲ್ಲವನ್ನೂ ಹಿಡಿದಿಡಲು ಕೇವಲ ಇತಿಹಾಸವು ಒಂದು ದುರ್ಬಲ ಮಾಧ್ಯಮವಾಗುತ್ತದೆಂಬುದು ನನ್ನ ಭಾವನೆಯಾಗಿತ್ತು.... ಇತಿಹಾಸವು ಗತಕಾಲದ ಬೂದಿಯನ್ನು ಮಾತ್ರ ಉಳಿಸಿಕೊಂಡಿರುತ್ತದೆಯೇ ಹೊರತು ಬೆಂಕಿಯನ್ನಲ್ಲ....ಟಿಪ್ಪು ಸುಲ್ತಾನನ ಜೀವನ, ಪ್ರೇಮ, ಬಲಿದಾನಗಳನ್ನು ವರ್ಣಿಸಲು ....ಅವನು ಯಾವುದರ ಅವಿಭಾಜ್ಯ ಅಂಗವಾಗಿದ್ದನೋ ಆ ಕಾಲದ ಬಗ್ಗೆಯೂ ಸಮರ್ಪಕವಾಗಿ ಸಾಧಿಸಿ ತೋರಿಸಲು ಒಂದು ಕಾದಂಬರಿಯೇ ಆಗಬೇಕಿತು". ಅಷ್ಟೇನೂ ಖ್ಯಾತ ಬರಹಗಾರರಲ್ಲದ ಗಿದ್ವಾನಿಯವರು ಮತ್ತೆ ಹೇಳುತ್ತಾರೆ– "....ಒಂದು ಇತಿಹಾಸ ಗ್ರಂಥವನ್ನು ಬರೆಯಲು ಬೇಕಾದ ಸಾಧನೆಗಳಾಗಲೀ, ತರಬೇತಿಯಾಗಲೀ ನನ್ನಲ್ಲಿಲ್ಲ....ಆದರೆ ವಾಸ್ತವವಾಗಿ ಕಾದಂಬರಿಯೊಂದನ್ನು ಸಹ ಬರೆಯುವ ಸಾಧನಗಳಾಗಲೀ, ತರಬೇತಿಯಾಗಲೀ, ಪ್ರತಿಭೆಯಾಗಲೀ ನನ್ನಲ್ಲಿವೆಯೆಂದೂ ನಾನು ಹೇಳಿಕೊಳ್ಳಲಾರೆ". ಈ ಹೇಳಿಕೆಗಳಲ್ಲಿರುವ ವಿರೋಧಾಭಾಸಗಳನ್ನು ಓದುಗರು ಗಮನಿಸಬೇಕು. "ಟಿಪ್ಪುವಿನ ಚಿತ್ರವನ್ನು ನ್ಯಾಯಯುತವಾಗಿಯೂ, ಕರಾರುವಾಕ್ಕಾಗಿಯೂ ರಚಿಸಬೇಕೆಂಬುದೇ" ಗಿದ್ವಾನಿಯವರ ಬಯಕೆ ಎಂದು ಅವರೇ ಹೇಳಿಕೊಂಡಿದ್ದಾರೆ.

"ಭಾರತದ ಇತಿಹಾಸವೆಂದರೆ ಸಾಗರದಲ್ಲಿ ಮುಳುಗಿಹೋದ ಹಡಗು"–ಎಂಬ ಹೇಳಿಕೆ ಇಲ್ಲಿ ಪ್ರಸ್ತುತವಾಗುತ್ತದೆ. ಯಾವುದು ಸತ್ಯ, ಯಾವುದು ಮಿಥ್ಯೆ–ಎಂಬ ನಿರ್ಣಯಕ್ಕೆ ಬರಲು ಯಾರಿಗೂ ಅಸಾಧ್ಯ. ಉಭಯ ಪಕ್ಷಗಳಲ್ಲೂ ಸಾಕಷ್ಟು ಉಲ್ಲೇಖಗಳು ದೊರೆಯುತ್ತವೆ. ಟಿಪ್ಪು ಸುಲ್ತಾನ್ ಹೇಗಿದ್ದ ಎನ್ನುವುದಕ್ಕಿಂತ, ಅವನು ಹೇಗಿದ್ದರೆ ಚೆನ್ನಾಗಿರುತ್ತಿತ್ತು–ಎಂದು ಕಲ್ಪಿಸಿಕೊಂಡು ಆನಂದಿಸುವ. ಆ ಆನಂದವನ್ನೂ ಓದುಗರೊಂದಿಗೆ ಹಂಚಿಕೊಳ್ಳುವ ಒಬ್ಬ ಲೇಖಕನ ಸ್ವಾತಂತ್ರ್ಯ ಪ್ರಶ್ನಾತೀತವಾದುದು. ಕಾದಂಬರಿಯ ನಲವತ್ತೈದನೇ ಅಧ್ಯಾಯ "ಇನ್ನೊಬ್ಬ ವ್ಯಕ್ತಿಯ ನಾಲ್ಕು ವರ್ಷಗಳು" –ಟಿಪ್ಪುವಿನ ವ್ಯಕ್ತಿತ್ವದ ಹಲವು ಮುಖಗಳನ್ನು ಚಿತ್ರಿಸುವ ಪ್ರಯತ್ನ. ಧರ್ಮಸಹಿಷ್ಣುತೆ, ಕೊರಾನ್, ವೇದಗಳು–ಈ ಎಲ್ಲವರ ಪ್ರಸ್ತಾಪ ಅಲ್ಲಿದೆ. ಹಿಂದೂ, ಮುಸ್ಲಿಂ ಜನಾಂಗಗಳು ಒಟ್ಟಾಗಿ ಜೀವಿಸಿ, ಈ ದೇಶದಲ್ಲಿ ಉಭಯ ಸಂಸ್ಕೃತಿಗಳೂ ಹಾಸುಹೊಕ್ಕಾಗಿ ಬೆಸೆದು. ಒಬ್ಬರ ವಿನಾ ಮತ್ತೊಬ್ಬರ ಜೀವನ ಅಪೂರ್ಣ ಎಂಬ ಹಂತವನ್ನು ನಾವಿಂದು ತಲುಪಿದ್ದೇವೆ. ಈ ಸಂದರ್ಭದಲ್ಲೂ ಈ ಜಾತಿ ಧರ್ಮಗಳ ಬಿರುಕನ್ನು ತಂದೊಡ್ಡಿ, ರಾಜಕೀಯ ಮಾಡುವ ಹಳದೀ ಕಣ್ಣುಗಳು ಈ ಕಾದಂಬರಿಯಿಂದ ಕಲಿಯುವುದು ಬೇಕಾದಷ್ಟಿದೆ. ಇದು ಕಾದಂಬರಿ ಎನ್ನಿಸಿಕೊಂಡಿರುವುದರಿಂದ, ಐತಿಹಾಸಿಕ ವಿವಾದಗಳು, ಭಿನ್ನಾಭಿಪ್ರಾಯಗಳು ಅಪ್ರಸ್ತುತ. ಫ್ಲಾಶ್‌ಬ್ಯಾಕ್ ತಂತ್ರ

ವನ್ನು ಪ್ರಧಾನವಾಗಿ ಬಳಸಿಕೊಳ್ಳಲಾದ ಈ ಕಾದಂಬರಿಯ ಲ್ಲಿ ಕೆಲವು ಕಡೆ ಐತಿಹಾಸಿಕ ದಾಖಲೆಗಳು ಬೇಸರ ಬರಿಸುವಷ್ಟು ವಿಫುಲವಾಗಿವೆ,

ಎಸ್. ಬಿ. ರಂಗನಾಥ್‌ರವರ ಅನುವಾದ ಸೊಗಸಾಗಿದೆ. ಕೃತಿಯ ಬೃಹದ್ಗಾತ್ರದಿಂದಾಗಿ ಅಲ್ಲಲ್ಲಿ ಕೆಲವು ಶಿಥಿಲ ಬಂಧಗಳಿದ್ದರೂ ಸಹ್ಯವಾಗಿವೆ. ಕಾದಂಬರಿಯು ಮುಕ್ತ ಅನುವಾದ ಎಂದು ಅವರು ಹೇಳಿದ್ದಾರೆ. ಕಾದಂಬರಿಯ ವಿನ್ಯಾಸದಲ್ಲಿ ಸಾಮ್ರಾಜ್ಯಶಾಹೀ ಶಕ್ತಿ ಹಾಗೂ ಪ್ರಜಾಪ್ರಭುತ್ವಗಳ ನಡುವಣ ಸಂಘರ್ಷ ಸ್ಫುಟವಾಗಿ ಮೂಡಿಲ್ಲ. ಟಿಪ್ಪುವಿನ ವ್ಯಕ್ತಿಚಿತ್ರಣಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಈ ಅಂಶವನ್ನು ಅನುವಾದಕರು ಏನೂ ಮಾಡುವಂತಿಲ್ಲದೆ ಅಸಹಾಯಕರಾಗಿದ್ದಾರೆ.

—**ಎನ್. ಎಸ್. ಚಿದಂಬರರಾವ್**

ಆಯ್ದ ಲೇಖನಗಳು

ಲೇಖಕರು: **ಡಾ॥ ತಾಳ್ತಜೆ ವಸಂತಕುಮಾರ**

ಡಾ॥ ತಾಳ್ತಜೆಯವರು ಬರೆದ ಹನ್ನೆರಡು ಲೇಖನಗಳು ಇಲ್ಲಿ ಸಂಕಲಿತವಾಗಿವೆ. 'ಖಡ್ಗವಾಗಲಿ ವಿಮರ್ಶೆ' ಎನ್ನುವ ಧೋರಣೆಯಿಂದ ಖಡ್ಗಹಿರಿದು ಹೊರಡುವ ವಿಮರ್ಶಕರ ಇಂದಿನ ಸಂದರ್ಭಗಳಲ್ಲಿ ತಾಳ್ತಜೆಯವರ ಸಹೃದಯತೆ ಒಡೆದು ತೋರುವಂತಹದು. ತಾಳ್ತಜೆಯವರ ಲೇಖನಗಳಲ್ಲಿ ಕೃತಿಯ ಬಗೆಗೆ ಅವರು ಹೊಂದಿರುವ ಗೌರವ ಅತ್ಯಂತ ಸ್ಪಷ್ಟವಾಗಿ ಮೂಡಿಬರುತ್ತದೆ. ಇದು ಅವರು ತಮ್ಮ ಲೇಖನಗಳಿಗೆ ಆಯ್ದುಕೊಂಡ ಲೇಖಕರ ಬಗ್ಗೆ ಇಟ್ಟುಕೊಂಡ ಗೌರವದ ಭಾವನೆಯ ಮೂಲಕ ನಿಯಂತ್ರಿತವಾದುದೂ ಆಗಿರಬಹುದು. ತಾಳ್ತಜೆಯವರು ಯಾವುದೇ ಕೃತಿಯನ್ನು ಒಂದೇ ನಿರ್ದಿಷ್ಟ ದೃಷ್ಟಿಕೋನದೊಂದಿಗೆ ಪ್ರವೇಶ ಮಾಡುವಂತೆ ತೋರುತ್ತದೆ. ಬಹುತೇಕ ಲೇಖನಗಳು ಈ ದೃಷ್ಟಿಕೋನವನ್ನು ಮಂಡಿಸುತ್ತಲೇ ಆರಂಭಗೊಳ್ಳುತ್ತವೆ ಬಹುಶಃ ಈ ಕ್ರಮವು ಸಹೃದಯರಿಗೆ ಮಿತಿ ಹೇರುವಂಥದಾಗುತ್ತದೆ. ಸಂಕಲನದ 'ಅರವಿಂದ ನಾಡಕರ್ಣಿಯವರೊಡನೆ ಒಂದು ಸಂಜೆ' ಲೇಖನ ಕುತೂಹಲ ಹುಟ್ಟಿಸುವಂಥದಾಗಿದೆ.

ಬೇರು ಒಣಗಿದ ಪ್ರೀತಿ (ಕವನ)

ಲೇಖಕರು: **ಬಿ. ಎನ್. ಮಲ್ಲೇಶ್**

ಇದು ಕವಿಯ ಮೊದಲ ಸಂಕಲನ. ಇಲ್ಲಿನ ಹಲವಾರು ಕವನಗಳಲ್ಲಿ ಬಂಡಾಯದ ಬಾವುಟ ಪಟಪಟನೆ ಹಾರುವ ಶಬ್ದ ಕೇಳಿಸುತ್ತದೆ. ಆದರೆ ಬರೀ ಶಬ್ದ.

ಅರ್ಥ ಹುಡುಕಲು ಹೋಗಬೇಕು. ಹಾಗೆ ಸಿಕ್ಕ ಅರ್ಥವೂ ಹೊಸದೇನೂ ಅನ್ನಿಸು ವುದಿಲ್ಲ, ಕಲ್ಲು ಕಟ್ಟಿದವಂತೆ ಇವರ ಪದ್ಯಗಳು. ಪದ್ಯ ಕಟ್ಟುವ ಕೌಶಲ್ಯವಿದೆ: ಅರ್ಥ ಹೊಳೆಯಿಸುವ ಅರಿವೆಂಬುದು ಇಲ್ಲ. ಸ್ವಾತಂತ್ರ್ಯ, ಸಮತೆ ಹಾಗೂ ನ್ಯಾಯಕ್ಕಾಗಿ ಇಲ್ಲಿನ ಪದ್ಯಗಳಲ್ಲಿ ವ್ಯಕ್ತವಾಡಲಾಗಿರುವ ಕಳಕಳಿ ತನ್ನ ಸ್ಥೂಲತೆಯಿಂದಾಗಿ ಅಂಗಾತ ವಾಗಿದೆ. ಬುದ್ಧಿಯಲ್ಲ. ಹೃದಯಕೊಟ್ಟು ಬರೆದರ ಮಲ್ಲೇಶ್ ಒಳ್ಳೆಯ ಪದ್ಯ ಬರೆಯಬಲ್ಲರೆಂಬುದಕ್ಕೆ 'ಜಾಂಬು ತುಟಿಗಳ ' ಕವನದ ಮೊದಲ ಕೆಲವು ಸಾಲುಗಳು ಸಾಕ್ಷಿಯಂತಿವೆ. 'ಅಚ್ಚರಿಗೊಬ್ಬಳು ಪಿ. ಟಿ. ಉಷಾ' ಹಾಗೂ ಕೆಲವು ಹಾಗವನಗಳು ಮೆಚ್ಚುಗೆಯಾಗುತ್ತವೆ.

ಕಪ್ಪು ಹುಡುಗನ ಬೆಳಗು (ಕವನ)

ಲೇಖಕರು: ಎಸ್. ನಟರಾಜ್ ಬೂದಾಳು

ಪ್ರಧಾನವಾಗಿ ಹಳ್ಳಿ ಬದುಕಿನ ಚಿತ್ರಗಳ ಮೂಲಕವೇ ಕವನ ಕಟ್ಟುವ ಈ ಕವಿ ತನ್ನ ಮೊದಲ ಸಂಕಲನದಲ್ಲೇ ನಾಲ್ಕಾರು ಒಳ್ಳೆಯ ಕವನಗಳನ್ನು ನೀಡಿದ್ದಾರೆ. 'ಬೆಳಗಾದ ಪರಿ', 'ಜಿಸ್ತರ ಹುಡುಗಿ', 'ಅಕ್ಕ', 'ತವಕ', 'ತಲೆ ಮೇಲಿನ ದೀವಿಗೆ', 'ಅವ್ವ', 'ಅಗ್ನಿ ಕೊಂಡ' ಹಾಗೂ 'ತೊರೆಯಜ್ಜ' ಇನ್ನೂ ಪೂರ್ಣವಾಗಿ ಅರಳಬೇಕಾದ ಕವನಗಳಾದರೂ ಅವು ಕಟ್ಟಿಕೊಡುವ ಆತ್ಮೀಯ ಚಿತ್ರ ಹಾಗೂ ಭಾವ-ಭಂಗಿಗಳ ಮೂಲಕ ನಮ್ಮನ್ನು ಸೆಳೆಯುತ್ತವೆ 'ಗಂಗೆ' ಈ ಕವಿಯ ಅಭಿವ್ಯಕ್ತಿ ಸಾಮರ್ಥ್ಯ ಎಷ್ಟು ಸೂಕ್ಷ್ಮವಾದದ್ದೆಂಬುದಕ್ಕೆ ಉದಾಹರಣೆಯಂತಿದೆ. ಆದರೆ ಇಲ್ಲಿನ ಪ್ರತಿಯೊಂದು ಕವನವೂ ಅಪೂರ್ಣ ಕವನದಂತೇ ಅನ್ನಿಸುವುದೇತಕ್ಕೆ ಎಂಬುದನ್ನೂ ಕವಿ ಆಲೋಚಿಸಬೇಕಿದೆ.

ಹುಟ್ಟು ಸಾವುಗಳ ಮಧ್ಯೆ (ಲೇಖನಗಳು)

ಲೇಖಕರು: ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು

ಸ್ವಾಮಿಗಳು ವಿವಿಧ ಸಂದರ್ಭಗಳಲ್ಲಿ ಮಂಡಿಸಿದ ಪ್ರಬಂಧಗಳು ಹಾಗೂ ಮಾಡಿದ ಭಾಷಣಗಳನ್ನೊಳಗೊಂಡ ಈ ಸಂಗ್ರಹದ ವಸ್ತುವೈವಿಧ್ಯ ಮಕ್ಕಳ ಪೋಷಣೆ ಹೇಗೆಂಬ ಕೆಲವು ಬುದ್ಧಿಮಾತುಗಳಿಂದ ಹಿಡಿದು ನಮ್ಮ ಸಮಾಜವನ್ನು ಆವರಿಸಿರುವ ಮೂಢನಂಬಿಕೆಗಳ ವಿರುದ್ಧದ ಎಚ್ಚರಿಕೆಯ ಮಾತುಗಳವರೆಗೆ ಹರಡಿಕೊಂಡಿದೆ. ಹಲವೆಡೆ ತೀರಾ ಪ್ರಾಥಮಿಕ ವಿಷಯಗಳನ್ನು ತಿಳಿಸುತ್ತಿದ್ದಾರೆ. ಅನಗತ್ಯವಾಗಿ. ಈಗಾಗಲೇ ಸವಕಲಾಗಿರುವ ಉಲ್ಲೇಖಗಳನ್ನು (quotations) ಮಾಡುತ್ತಿದ್ದಾರೆ ಹಾಗೂ ಹೇಳಿದ್ದನ್ನೇ ನೀರು ನೀರು ಮಾಡಿ ಹೇಳುತ್ತಿದ್ದಾರೆ ಎನ್ನಿಸುವುದಾದರೂ, ಇವರ ಮಾತುಗಳಿಗೆ ಕಿವಿಗೊಡುವಂತಹವರಿಗೆ ಈ ರೀತಿಯ ಮಾತುಗಾರಿಕೆಯೇ ಬೇಕಿರ

ಬಹುದು. ಏನೇ ಆಗಲಿ ಮಠಾಧೀಶರೊಬ್ಬರು ಜನರ ಲೌಕಿಕ ವಿವರಗಳ ಕಡೆಗೂ ಈ ರೀತಿ ಗಮನ ಹರಿಸುತ್ತಿರುವುದು ಶುಭದಾಯಕ.

ತುಂಗೆಯಲ್ಲಿ ಹೆಣ (ಕವನ)

ಲೇಖಕರು: **ಜಿ. ಪಿ. ಬಸವರಾಜು**

ಈಗ್ಗೆ ಬಹಳ ವರ್ಷಗಳಿಂದ ಪದ್ಯ ಬರೆಯುತ್ತಿರುವ ಬಸವರಾಜು ಅವರ ಮೊದಲ ಕವನ ಸಂಕಲನ ಇದು. ಮುನ್ನುಡಿಕಾರ ಜಿ. ರಾಜಶೇಖರ್ ಹೇಳಿರುವಂತೆ 'ಈ ಸಂಕಲನದ ಅಷ್ಟೂ ಪದ್ಯಗಳಲ್ಲಿ ಲಯಕ್ಕೆ ಎರವಾಗುವ ಒಂದೇ ಒಂದು ಸಾಲು, ಲಯವನ್ನು ಮುರಿಯುವ ಒಂದೇ ಒಂದು ಶಬ್ದ ಕಾಣಿಸುವುದಿಲ್ಲ. ಲಯ ಕಾವ್ಯದ ಅತ್ಯಂತ ಪ್ರಾಥಮಿಕ ನಿಯಮ'. ಈ ನಿಯಮವನ್ನು ವ್ರತವೆಂಬಂತೆ ಪಾಲಿಸಿರುವ ಕವಿ ಏನಲ್ಲದಿದ್ದರೂ–ಈಗ ಅಪರೂಪವಾಗುತ್ತಿರುವ–ಅಚ್ಚುಕಟ್ಟಾದ ಕವಿ ಎನ್ನಿಸಿ ಕೊಳ್ಳುತ್ತಾರೆ. ಹೀಗಾಗಿ ಇಲ್ಲಿರುವ ಎಲ್ಲ 31 ಕವನಗಳನ್ನೂ ಸಂತೋಷದಿಂದ ಓದ ಬಹುದಾಗಿದೆ. ಬೆರಗು–ವಿಷಾದಗಳನ್ನೇ ತಮ್ಮ ಕಾವ್ಯದ ಸ್ಥಾಯಿಭಾವ ಮಾಡಿ ಕೊಂಡಿರುವ ಈ ಕವಿ ಈ ಭಾವಗಳು ಹಲವೆಡೆ deliberate ಮತ್ತು manipulated ಆಗಿ ಓದುಗರಿಗೆ ಕಾಣುವುದಕ್ಕೆ ಕಾರಣವೇನು ಎಂಬುದರ ಬಗೆಗೆ ಯೋಚಿಸುವ ಅಗತ್ಯ ಇದೆ. 'ಕತ್ತಲು–ಬೆಳಕು', 'ಪರಿಮಿತಿಯ ಪಾಠ', 'ಚಿಟ್ಟೆ–ಗಿಡ', 'ಕನಸು' ಹಾಗೂ ಕೆಲವು ಹನಿಗವನಗಳು ಮನ ಮುಟ್ಟುತ್ತವೆ.

ನ್ಯಾಯ (ಕಥೆಗಳು)

ಲೇಖಕರು: **ಕೋರಗಲ್ ವಿರೂಪಾಕ್ಷಪ್ಪ**

ಇಲ್ಲಿನ ಹತ್ತೂ ಕಥೆಗಳು ಕುತೂಹಲ ಉಳಿಸಿಕೊಂಡು ಓದಿಸಿಕೊಳ್ಳುತ್ತವೆ. ಅನ್ಯಾಯ, ಅಸಮತೆ ಹಾಗೂ ಮೌಢ್ಯದ ವಿರುದ್ಧ ಸ್ವಲ್ಪ ವಾಚ್ಯವಾಗಿಯೇ ಪ್ರತಿ ಭಟನ ಸೂಚಿಸುವ ಈ ಕಥೆಗಳು ಉತ್ತರ ಕರ್ನಾಟಕದ ಸರಳಭಾಷೆ, ನೇರ ನಿರೂಪಣೆ ಹಾಗೂ ತನ್ನ ಗ್ರಹಿಕೆಗೆ ದಕ್ಕಿದಷ್ಟನ್ನೇ ಹೇಳುವ ಸಂಯಮಗಳಿಂದಾಗಿ ಎಲ್ಲೂ ಒರಟಾಟ ಹಾಗೂ ಉತ್ಪ್ರೇಕ್ಷೆಗಳಲ್ಲಿ ನುಗ್ಗಾಗದೆ ಉಳಿದಿವೆ. 'ಗಿಣಿಗಿಣಿ ರಾಮ' ಹಾಗೂ 'ನಾನೂ ಕುಬ್ಜ, ನಾನು ಕಿರಿಯ' ಕಥೆಗಳು ವಿರೂಪಾಕ್ಷಪ್ಪ ಅವರು ಸಮಾಜ ವನ್ನು ಹೊರಗಿದ್ದುಕೊಂಡೇ, ಕೇವಲ ಅಸಮಾಧಾನ ಹಾಗೂ ಅನುಮಾನಗಳಿಂದ ನೋಡದೆ ಅದು ತಾನಿರುವ, ತನ್ನೊಳಗಿರುವ ಸಮಾಜವೇ ಎಂದು ನೋಡತೊಡಗಿದಾಗ ಬರೆಯಬಲ್ಲ ಶಕ್ತಕಥೆಗಳಿಗೆ ಮುನ್ಸೂಚನೆಯಂತಿವೆ. ಈ ನೋಟ ದಕ್ಕಿಸಿಕೊಳ್ಳಲು ಅವರು ತಮ್ಮ ಇತರ ಕಥೆಗಳಲ್ಲಿ ಯಶಸ್ವಿಯಾಗಿ ಅಳವಡಿಸಿಕೊಂಡಿರುವ ಕಥೆಗಾರಿಕೆಯ ಸಾಮಾನ್ಯ ಸೂತ್ರಗಳನ್ನು ಕ್ರಮೇಣ ತ್ಯಜಿಸಬೇಕಾಗುತ್ತದೆ.

ಚಕ್ರತೀರ್ಥ (ಕವನಗಳು)

ಸಂಪಾದಕರು: ಕೇಶವಮಳಗಿ ಹಾಗೂ ಸುಶೀಲಾ ಶಿರೂರು

ಬಳ್ಳಾರಿ ಜಿಲ್ಲೆಯ ಐವತ್ತೈದು ಜನ ಕವಿಗಳು ಸೇರಿ ಹೊರತಂದಿರುವ ಈ ಕವನ ಸಂಕಲನದಲ್ಲಿ ವೈವಿಧ್ಯಮಯ ಆಸಕ್ತಿಗಳು ಪ್ರೇರಣೆಗಳು ಇವೆ–ಮೊಲಾಯಿಸ್‌ನಿಂದ ಹಿಡಿದು ಕಲ್ಲಿನ ಕಥೆಯವರೆಗೆ. ಅಪಸ್ಮೃಯಿಂದ ಹಿಡಿದು ಋತು ಶೃಂಗಾರದವರೆಗೆ. ಹೆಚ್ಚಾಗಿ ನವ್ಯ ಮತ್ತು ಬಂಡಾಯದ ಪ್ರೇರಣೆಗಳು ಇಲ್ಲಿನ ಹೆಚ್ಚಿನ ಕವಿತೆಗಳ ಹಿಂದಿವೆ. ಬಳ್ಳಾರಿಯ ಬಿಸಿಲಲ್ಲಿ ಕವಿತೆಯ ಸಸಿನೆಟ್ಟು 'ನಜರ ಕಾವಲಿಟ್ಟು ತುರಾಯಿ ತುರಾಯಿ ಹೂಗೊಂಚಲು ಅರಳಿಸಲು ಮಾಡಿದ ಸ್ವಾಗತಾರ್ಹ ಪ್ರಯತ್ನವಿದು.

ಜೋಡಿ ದೀಪದ ನೆನಪು (ಕವನಗಳು)

ಲೇಖಕಿ: **ಹೆಚ್. ಪ್ರೇಮಲೀಲ**

ಹೆಚ್. ಪ್ರೇಮಲೀಲ ಅವರ ಈ ಮೊದಲ ಕವನ ಸಂಕಲನದಲ್ಲಿ ಸುಮಾರು ಮೂವತ್ತೈದು ಕವಿತೆಗಳಿವೆ. 'ಕನಸು'. 'ಕಿಂಡವನು ಸುರಿಯದಿರಿ', 'ಮೌನ ಗೀತೆ' ಎಂಬ ಕವಿತೆಗಳಲ್ಲಿ ಒಂದು ಮನಸ್ಥಿತಿಯನ್ನು ನಿರೂಪಿಸುವ ಸನ್ನಿವೇಶ ಕಟ್ಟಿಕೊಡುವ ಪ್ರಯತ್ನವಿದೆ. ಇಲ್ಲಿನ ಹೆಚ್ಚಿನ ಕವಿತೆಗಳಿಗೆ ಪ್ರೇರಣೆ ವೈಯಕ್ತಿಕ ಸಂಬಂಧಗಳು. ಇದು ಒಂದು ನೆಲೆಯಲ್ಲಿ ಕವಿತೆಗೆ ಅಚ್ಚುಕಟ್ಟಿನ ನಿರೂಪಣೆಯನ್ನು ಒದಗಿಸಿದರೆ– ಇನ್ನೊಂದು ನೆಲೆಯಲ್ಲಿ ಗ್ರಹಿಕೆಯನ್ನು ಸೀಮಿತಗೊಳಿಸಿ ಬಿಡುವುದೂ ಉಂಟು.

ಬರಲು (ಕವನಗಳು)

ಲೇಖಕರು: **ಟಿ. ಜಿ. ಭಟ್ಟ**

ಟಿ. ಜಿ. ಭಟ್ಟರ ಎರಡನೆಯ ಕವನ ಸಂಕಲನವಿದು. ಒಮ್ಮೆ ನವ್ಯದ ವ್ಯಂಗ್ಯ ಕಟಕಿಗಳ ಉತ್ಕಟತೆಯಲ್ಲಿ ಬರೆಯುವ ಈ ಕವಿ (ಉದಾ: 'ಕಾಳಸರ್ಪ', 'ಹೊಸನಾಡಿಗೆ') ಇನ್ನೊಮ್ಮೆ ತಿಳಿಹಾಸ್ಯದ ದಕ್ಷಿಣ ಕನ್ನಡದ ಆಡುಭಾಷೆಯ ಸರಳತೆಯಲ್ಲಿ ತೆರೆದು ಕೊಳ್ಳುತ್ತಾರೆ ('ಮಾಣಿ ಕೂಸು ಸಲ್ಲಾಪ, ಕವಳದ ನಾಗಜ್ಜಿ ಪರಿಸರವಾದ). 'ಕೈಗಾ ಒಂದು ಸಂವಾದ'. 'ಅಜ್ಜಿ ಕೋಳಿ ಹಾಡು' ಬರೆದ ಕವಿಯೇ 'ಕವಳದ ನಾಗಜ್ಜಿ ಪರಿಸರ ವಾದ' ಬರೆದಿರುವುದು ಈ ಕವಿಗೆ ಯಾವುದೇ ಚಳುವಳಿ ಒಂದು ಮಿತಿಯಾಗಿಲ್ಲ ಎಂಬು ದನ್ನು ಸೂಚಿಸುತ್ತದೆ.

ಅವಡುಗಚ್ಚಿದ ಬೇನೆ (ಕವನಗಳು)

ಲೇಖಕಿ: **ಹೆಚ್. ಆರ್. ಲೀಲಾವತಿ**

ಶ್ರೀಮತಿ ಹೆಚ್. ಆರ್. ಲೀಲಾವತಿಯವರ ಈ ಕವನ ಸಂಕಲನದ ಎಲ್ಲ ಕವಿತೆ ಗಳಲ್ಲಿ ಭಾಷೆಯ ಬಳಕೆ ಸಮಾನವಾಗಿ ಏರುಪೇರಿಲ್ಲದ ಅಚ್ಚುಕಟ್ಟಿನ ಲಯದಲ್ಲಿ ಸಾಗಿದೆ.

ಹೆಚ್ಚು ಮಹತ್ವಾಕಾಂಕ್ಷೆಯಿಲ್ಲದ ಅಚ್ಚುಕಟ್ಟಿನ ಕವಿತೆಗಳಿವೆ. (ಉದಾ: 'ಮುತ್ತಜ್ಜಿಯ ಬೇರು', 'ಕಿರು ಉಲ್ಕೆ') 'ಜಾತ್ರೆ', 'ಸಾವಿತ್ರಿ–ರೂಪ ಕನ್ವರ್' ಕವಿತೆಗಳಲ್ಲಿ ಇವರ ಸೂಕ್ಷ್ಮ ಸಂವೇದನೆ ವ್ಯಕ್ತಗೊಂಡಿದೆ. ಕನ್ನಡ ಕಾವ್ಯ ಸಂದರ್ಭವನ್ನು ರಾಷ್ಟ್ರದ ಸಾಮಾಜಿಕ ಜೀವನವನ್ನು ಕವಯಿತ್ರಿ ಸೂಕ್ಷ್ಮವಾಗಿ ಗಮನಿಸುತ್ತಾ, ಸಂವೇದಿಸುತ್ತಾ ಹೋಗಿರುವುದನ್ನು 'ಸಾಕ್ಷಿ ಗೂಡು', 'ಏಕತೆ' ಕವಿತೆಗಳು ಹೇಳುತ್ತವೆ.

ನಾನು ಒಲಿದಂತೆ ಹಾಡುವೆ (ಪ್ರಬಂಧಗಳು)
ಲೇಖಕರು: **ಚಂದ್ರಶೇಖರ ಆಲೂರು**

ಈ ಸಂಕಲನದಲ್ಲಿರುವ ಹದಿಮೂರು ಪ್ರಬಂಧಗಳಲ್ಲಿ ಲಲಿತವಾದ ಕಾವ್ಯಮಯವಾದ ಭಾಷೆಯಲ್ಲಿ ದೈನಂದಿನ ಜೀವನದ ಅನೇಕ ಅನುಭವಗಳು ಚಿಂತನದ ಮೂಲಕ ಹಾದು ಬಂದು ತತ್ವದ ಘನತೆಯನ್ನು ಭಾವಗೀತೆಯ ಮಾಧುರ್ಯವನ್ನು ಪಡೆದುಕೊಂಡಿದೆ. ದೇವಯಾನಿಯನ್ನು ಕುರಿತ ಕೊನೆಯ ಪ್ರಬಂಧ ಕಥಾನಕ ಮತ್ತು ಉದ್ಧರಣಗಳಿಂದಾಗಿ ತನ್ನ ಒಡಲೇ ತನಗೆ ಹೊರೆಯಾದಂತೆನಿಸುತ್ತದೆ. ಲಲಿತ ಪ್ರಬಂಧಗಳ ಕಾಲವೇ ಮುಗಿಯಿತೆನ್ನುವಾಗ ಮತ್ತೆ ಪ್ರಾರಂಭವಾದ ಮೊದಲ ಸುಗ್ಗಿಗೆ ಇದೊಂದು ಬೆಲೆಯುಳ್ಳ ಸೇರ್ಪಡೆ.

ಬಂದೀಖಾನೆ (ಕಾದಂಬರಿ)
ಲೇಖಕರು: **ಪ್ರಹ್ಲಾದ ಅಗಸನಕಟ್ಟೆ**

ಇದು ಪ್ರಹ್ಲಾದ ಅಗಸನಕಟ್ಟೆಯವರ ಮೊದಲ ಕಾದಂಬರಿ. ಆದರೆ ಈ ಬರೆಹ ಮೊದಲ ಕಾದಂಬರಿಯ ಮಿತಿಗಳನ್ನು ಮೀರಿದ್ದಾಗಿದೆ. 'ತರಣಿಯ ಹುಳು ತನ್ನ ಬಲೆಯ ತಾನೇ ನೇದುಕೊಂಡಂತೆ' ಅನ್ನೆಹಾಳಿನ ಜನ ಜಾತಿ ಪಾತಿ ಎಂದು, ಪಾರ್ಟಿ ಎಂದು, ಬಲೆ ನೇಯುತ್ತ ನೇಯುತ್ತ ಬಂದೀಖಾನೆಯಂತಹ ಶಾಲೆ ಹುಟ್ಟುಹಾಕುತ್ತಾರೆ. ಶಾಲೆ ಎಂಬುವುದೊಂದು ಸಮಾಜದ ಮುಖ್ಯ ಅಂಗ–ಮೆದುಳು ಇದ್ದಹಂಗೆ. ಆದರೆ ಕೊಳೆಯುವ ಸಮಾಜ ಕೊಳೆಯುವ ಶಾಲೆಯನ್ನ ಮಾತ್ರ ಹೊಂದಬಹುದು. ಇಂಥ ಬಂದೀಖಾನೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಹಾಲೇಶಿಯಂಥ ಆರೋಗ್ಯಪೂರ್ಣ ಹುಡುಗನ ದುರಂತ ಅನಿವಾರ್ಯವಾಗುತ್ತದೆ. ಹತ್ತಾರು ಶಬ್ದಗಳಲ್ಲಿ ಮಾತ್ರ ಪ್ರತ್ಯಕ್ಷಗೊಳ್ಳುವ ಆರೋಗ್ಯಪೂರ್ಣ ತುಂಟ, ಜಾಣ, ಹಾಲೇಶಿಯ ದುರಂತ ವಾಸ್ತವ ಮತ್ತು ಸಾಂಕೇತಿಕ ನೆಲೆಗಳೆರಡರಲ್ಲೂ ನಮ್ಮನ್ನು ತಟ್ಟುವಲ್ಲಿ ಕಾದಂಬರಿಯ ಶಕ್ತಿ ಸ್ಪಷ್ಟಗೊಳ್ಳುತ್ತದೆ. ಪ್ರಹ್ಲಾದ ಅಗಸನಕಟ್ಟೆಯವರಿಂದ ಗಂಭೀರ ಕಾಳಜಿಯ ಇನ್ನಷ್ಟು ಶಕ್ತಿಪೂರ್ಣ ಕಥಾನಕಗಳನ್ನು ನಿರೀಕ್ಷಿಸಬಹುದೆನ್ನುವ ನಂಬಿಕೆಯನ್ನು ಈ ಕಾದಂಬರಿ ಮೂಡಿಸುತ್ತದೆ.

ಕಸಿ (ಕಥಾ ಸಂಕಲನ)
ಲೇಖಕರು: ಚಂದ್ರಶೇಖರ ಅಕ್ಕಿ

ಇದು ಚಂದ್ರಶೇಖರ ಅಕ್ಕಿಯವರ ಮೊದಲ ಕಥಾ ಸಂಕಲನ. ಆದರೆ ಕಥೆಗಾರಿಕೆಯಲ್ಲಿ ಮೂಡಿಬಂದಿರುವ ಸಂಯಮದ ನಡೆಯು ಅಕ್ಕಿಯವರನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡುತ್ತದೆ. ಸಂಕಲನದ ಆರು ಕಥೆಗಳು ವೈವಿಧ್ಯತೆಯ ಬಿಂಬಗಳಾಗಿವೆ. 'ಕಸಿ', 'ಮಣ್ಣು ಕೊಟ್ಟದ್ದು' ಕಥೆಗಳು ಸಾಂಕೇತಿಕ ಆಯಾಮ ಪಡೆದುಕೊಳ್ಳುತ್ತವೆ. ಅಕ್ಕಿಯವರು ನವ್ಯದ ಆರಂಭದ ನೆಲೆಯಲ್ಲಿ ನಿಂತು ಬರೆದಂತೆ ತೋರುತ್ತದೆ. ಕೆಲವು ಕಥೆ ಓದುವಾಗ ಹಳೆಯ ಕಥೆಗಳ ಆವೃತ್ತಿಯಂತೆ ತೋರಿ ಅತೃಪ್ತಿ ಮೂಡುತ್ತದೆ. ಆದರೆ ಇವರ ಭಾಷೆ ಮತ್ತು ಶೈಲಿಗಳ ನೆಲೆಯಲ್ಲಿ ಅಕ್ಕಿಯವರ ಮುಂದಿನ ಕಥೆಗಳ ಬಗ್ಗೆ ನಮಗೆ ಆಸೆ ಹುಟ್ಟುತ್ತದೆ. ಗ್ರಹಿಕೆಯ ವ್ಯಾಪ್ತಿ ಮತ್ತು ಹೊಸತನವನ್ನು ಹೆಚ್ಚಿಸಿಕೊಳ್ಳುವತ್ತ ತೊಡಗಿದರೆ ಇವರಿಂದ ಖಂಡಿತವಾಗಿ ನಮಗೆ ಒಳ್ಳೆಯ ಕಥೆಗಳು ದೊರೆಯುತ್ತವೆ.

ಅಗ್ನಿದಿವ್ಯ (ಕವನ ಸಂಕಲನ)
ಲೇಖಕಿ: **'ವಸುಮತಿ'**

ಲೇಖಕಿಯ ಮೊದಲ ಕವನ ಸಂಕಲನವಿದು. ಇಲ್ಲಿನ ಕವಿತೆಗಳು ಬಹುತೇಕ ಮುಕ್ತಕಗಳಾಗಿವೆ. ಲಘು ಭಾವಗೀತೆಗಳಾಗಿವೆ. ಮೊದಲ ಮುಕ್ತಕ ಸಂಚಯನ– 'ಬಯಕೆ', ಹೆಣ್ಣು ಬಯಕೆಯ ವಿವಿಧ ಮುಖಗಳನ್ನು ತೋರುತ್ತದೆ. ಐಂದ್ರಿಯಕ ಆಕಾಂಕ್ಷೆಗಳನ್ನು ಹೇಳುವ ಈ ಸಂಚಯನದಲ್ಲಿ–

ತಪನಿಂತ ಚೆಲುವು
ವರ್ಷ ನೀಡಿದ ಒಲುಮೆಗೆ
ಮುರಿದು ಮೌನ
ಚಿಮ್ಮಿಸಿತು
ಚಿಗುರು–ಹೂವು (ಪುಟ 5)

ಈ ಮುಕ್ತಕ ಚಂದವಾಗಿ ಮೂಡಿ ಬಂದಿದೆ. 'ವಿರಸನ' ಸಂಚಯನದಲ್ಲಿ ವಿರಹ ಭಾವ ವ್ಯಕ್ತವಾಗಿದೆ. ಉಳಿದ ಪದ್ಯಗಳೂ ಹೆಣ್ಣು ಮನಸಿನ ಪದರಗಳನ್ನು ಚಿತ್ರಿಸುವಂಥವುಗಳಾಗಿವೆ. ಈ ಸಂಕಲನದ ವಿಗ್ಗಿಲ್ಲದ ಅಭಿವ್ಯಕ್ತಿಯ ಪದ್ಯಗಳು ಸರಳವಾಗಿ ನಮ್ಮೊಳಗೆ ಇಳಿದು ನಮ್ಮ ಹೃದಯವನ್ನು ಹಕ್ಕಗಾಗಿಸುವಂಥವುಗಳಾಗಿವೆ.

ಕನಸು ನನಸುಗಳ ನಡುವೆ (ಕವನ ಸಂಕಲನ)
ಲೇಖಕಿ: ರತ್ನಾ ಮೂರ್ತಿ

ಇದು ರತ್ನಾ ಮೂರ್ತಿಯವರ ಮೊದಲ ಕವನ ಸಂಕಲನ. ಇವರ ಕಾವ್ಯ

ಪ್ರಜ್ಞೆ ನವೋದಯಕಾಲದ ರಮ್ಯ ಪರಂಪರೆಗೆ ಸೇರಿದ್ದು. ಇದು ನವ್ಯ, ನವ್ಯೋತ್ತರ ಪ್ರಜ್ಞೆಗಳ ಮೂಲಕವಾಗಿ ದಾಟಿ ಬಂದದ್ದಲ್ಲ.

'ಕಲ್ಪನೆಯು ಗರಿಕಟ್ಟಿ ಸಂಚರಿಸುತಿರೆ ಮನಸು
ವಾಸ್ತವತೆ ಮರೆತೊಮ್ಮೆ ತಳಸೇರಲಿ'

ಎಂದು ಪ್ರಾರ್ಥಿಸುವ ಇವರ ಕವಿತೆಗಳು ರೋಮಾಂಟಿಸ್ಮ್‌ನ ಮಿತಿಗಳನ್ನು ಧಾರಾಳವಾಗಿ ಪಡೆದುಕೊಂಡಿವೆ. 'ಮುನಿಸಿನ ಗಂಡ', 'ಮಗಳ ಹಂಬಲ' ಕವಿತೆಗಳ ಹಿಂದಿನ ಸುಕುಮಾರ, ಜಾನಪದ ಪ್ರಜ್ಞೆ ಮಾತ್ರ ಮುದ ನೀಡುವಂತಿದೆ. ಅಧ್ಯಯನ ಮತ್ತು ಧ್ಯಾನದ ಗಂಭೀರವಾದ ನೆಲೆಯಲ್ಲಿ ರತ್ನಾ ಮೂರ್ತಿಯವರು ಕಾವ್ಯಕರ್ಮದಲ್ಲಿ ತೊಡಗುವ ಅವಶ್ಯಕತೆ ಇದೆ.

ರಾಜಧಾನಿಯಲ್ಲಿ ಶ್ರೀಮತಿಯರು

ಲೇಖಕರು, ಕೆ. ಸತ್ಯನಾರಾಯಣ

ಕವನ–ಕಾದಂಬರಿಯೆನ್ನಬಹುದಾದ ಈ ವಿಶಿಷ್ಟ ಪ್ರಯೋಗ ಈ ವಿಶಿಷ್ಟತೆಯಿಂದಲೇ ಗಮನ ಸೆಳೆಯುತ್ತದೆ. ಮೆರವಣಿಗೆಗಾಗಿ ರಾಜಧಾನಿಗೆ ಬಂದ ಅಂಗನವಾಡಿ ಕಾರ್ಯಕರ್ತೆಯರು ಜೈಲು ಸೇರಬೇಕಾಗಿ ಬಂದ ಒಂದು ಅವಘಡದಿಂದ ಉಂಟಾದ ತಲ್ಲಣ, ಇಂದಿನ ಇಂಡಿಯಾದ ಹೆಣ್ಣಿನ ದಿಕ್ಕಾಪಾಲಾದ ಚೇತನವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿ ಮೈದಾಳಿದೆ ಈ ಕೃತಿಯಲ್ಲಿ. ಆದರೆ ಅತ್ತ ಕವನವೂ ಆಗದೆ ಇತ್ತ ಕಾದಂಬರಿಯೂ ಆಗದೆ ಎರಡರ ನೆರಳುಗಳನ್ನಷ್ಟೆ ಸಂಯೋಜಿಸಿಕೊಂಡು, ಪರಿಣಾಮವಾಗಿ ಒಟ್ಟಾರೆ ಸ್ಥೂಲತೆಗೆ ಎರವಾಗಿರುವ ಈ ಕೃತಿ 'ಎಲ್ಲದರ ಪ್ರಾರಂಭಕ್ಕಾಗಿ ಮುಕ್ತಾಯದ ಪ್ರಾರ್ಥನೆ' ಎಂಬ ಕೊನೇ ಅಧ್ಯಾಯದಲ್ಲಿ ತನ್ನ ನಿರ್ಮಲ ಪ್ರೀತಿಗಾಗಿ ತುಡಿತ ಹಾಗೂ ಸರಳಕಾವ್ಯದಿಂದಾಗಿ ಮಿಂಚುತ್ತದೆ.

ಪುಸ್ತಕ ಸ್ವೀಕಾರ

೧. ನವ್ಯಸಾಹಿತ್ಯ ದರ್ಶನ (ವಿಮರ್ಶೆ) ಲೇ: ಶಾಂತಿನಾಥ ದೇಸಾಯಿ
ಪ್ರ: ಪರಿಸರ ಸಾಹಿತ್ಯ, ಶಿವಮೊಗ್ಗ (1990)
ಪುಟ xviii + 246, ಬೆಲೆ ರೂ. 65/–

೨. ಭಗವತಿ ಕಾಡು (ಕಥೆಗಳು) ಲೇ: ಕುಂ. ವೀರಭದ್ರಪ್ಪ
ಪ್ರ: ಕಲ್ಯಾಣಿ ಪ್ರಕಾಶನ, ಶ್ರೀನಗರ, ಬೆಂಗಳೂರು-50 (1990)
ಪುಟ viii + 52, ಬೆಲೆ ರೂ. 30/-

೩. ಕಳಕೊಂಡವರು (ನಾಟಕ) ಲೇ: ಚಂದ್ರು ಕಾಳೇನಹಳ್ಳಿ
ಪ್ರ: ಹೊಯ್ಸಳ ಪ್ರಕಾಶನ, ಚನ್ನರಾಯಪಟ್ಟಣ–573 116 ಹಾಸನ ಜಿಲ್ಲೆ (1991)
ಪುಟ viii + 70, ಬೆಲೆ ರೂ. 15/– ಮತ್ತು 25/–

೪. ಕಲೆ ಮತ್ತು ಸಂಸ್ಕೃತಿ (ವಿಚಾರ–ವಿಮರ್ಶೆ) ಲೇ: ಬಿ. ಎ. ಸನದಿ
ಪ್ರ: ಕಾಲಗತಿ ಪ್ರಕಾಶನ, ರಾಯಬಾಗ-591 317 ರಾಯಚೂರು ಜಿಲ್ಲೆ (1990)
ಪುಟ 116, ಬೆಲೆ ರೂ. 16

೫. ಸಂಭವ (ಕವನಗಳು) ಲೇ: ಬಿ. ಎ. ಸನದಿ
ಪ್ರ: ಭಾವನಾ ಪ್ರಕಾಶನ, ಮುಂಬಯಿ (1991) ಪುಟ 104. ಬೆಲೆ ರೂ, 20/–

೬. ಗಮನ (ವಿಮರ್ಶೆ–ವಿಚಾರ) ಲೇ: ಡಿ. ಎಸ್. ನಾಗಭೂಷಣ
ಪ್ರ: ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ (1990)
ಪುಟ viii + 152, ಬೆಲೆ ರೂ. 33/–

೭. ವರ್ತಮಾನ (ಕವನಗಳು) ಲೇ: ಮಾರುತಿ ಭೋಸಲೆ
ಪ್ರ: ಸಾಹಿತ್ಯ ವೇದಿಕೆ, ನರಗುಂದ (1991) ಪುಟ ix + 52, ಬೆಲೆ ರೂ. 8–50

೮. ಕುದುರೆಗಳೂ ಕೇಳಿದವು ಗೀತೋಪದೇಶ (ಕವನಗಳು) ಲೇ: ಮಲ್ಲಿಕಾರ್ಜುನ ಬಿ. ಪಿ.,
ಪ್ರ: ಜಯಾ ಮಲ್ಲಿಕಾರ್ಜುನ ಪ್ರಕಾಶನ, ಗುಲಬರ್ಗಾ–585 102 (1990)
ಪುಟ vii + 42, ಬೆಲೆ ರೂ. 10/-

೯. ಬೇರುಗಳು (ಕವನಗಳು) ಲೇ: ಶಂಕರಗೌಡ ಸಾತ್ಮಾರ
ಪ್ರ: ಸಾಹಿತ್ಯ ವೇದಿಕೆ, ನರಗುಂದ (1991) ಪುಟ x + 46. ಬೆಲೆ ರೂ. 8/–

೧೦. ಶ್ರಾವಣ (ಬೇಂದ್ರೆ ಕಾವ್ಯ ವಿಮರ್ಶೆ) ಪ್ರ. ಸಂ: ನ. ರವಿಕುಮಾರ
ಪ್ರ: ಪ್ರತಿಭಾ ಯುವವೇದಿಕೆ, ಬೆಂಗಳೂರು-21 (1991)
ಪುಟ iv + 52, ಬೆಲೆ ರೂ. 10/–

೧೧. ಅಮೀನಪುರದ ಸಂತೆ (ಕಥೆಗಳು) ಲೇ: ಮಲ್ಲಿಕಾರ್ಜುನ ಹಿರೇಮಠ
ಪ್ರ: ಚೈತನ್ಯ ಪ್ರಕಾಶನ. ಹುನಗುಂದ–587 118 (1990)
ಪುಟ viii + 94, ಬೆಲೆ ರೂ, 20

೧೨. ಪ್ರೇಯಸಿಗೆ ಪತ್ರಗಳು (ಪತ್ರ ಸಾಹಿತ್ಯ) ಲೇ: ಕೃಷ್ಣಾನಂದ ಕಾಮತ
ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ-580 001 (1990)
ಪುಟ xiv 142, ಬೆಲೆ ರೂ. 25/–

೧೩. ಸಿದ್ಧರ ಬೆಟ್ಟ–ಒಂದು ದರ್ಶನ (ಸ್ಥಳ ಚರಿತ್ರೆ) ಲೇ: ವೀ. ಚಿಕ್ಕವೀರಯ್ಯ
ಪ್ರ: ಶ್ರೀ ಸಿದ್ಧೇಶ್ವರಸ್ವಾಮಿ ಸೇವಾ ಸಮಿತಿ (ರಿ.) ಸಿದ್ಧರಬೆಟ್ಟ, ತುಮಕೂರು ಜಿಲ್ಲೆ (1991)
ಪುಟ 66, ಬೆಲೆ ರೂ. 5/–

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗ,

ನಾಲ್ಕನೇ ಸಂಪುಟದ ಮೊದಲ ಸಂಚಿಕೆ ನಿಮಗೆ ತಡವಾಗಿ ತಲುಪುತ್ತಿದೆ. ಇದಕ್ಕೆ ಕಾರಣಗಳನ್ನು ಹೇಳುವ ಮುನ್ನ. ಈ ತಡಕ್ಕಾಗಿ ನಾವು ಓದುಗರ ಕ್ಷಮೆ ಕೋರುತ್ತೇವೆ. ಹಾಗೂ ನಮ್ಮ ಮುಂದಿನ ಸಂಚಿಕೆ ಇನ್ನೊಂದು ತಿಂಗಳಲ್ಲಿ ನಿಮ್ಮನ್ನು ತಲುಪಲಿದೆ ಎಂಬ ಭರವಸೆ ನೀಡುತ್ತೇವೆ, ಮೂರನೇ ಸಂಪುಟದ ಕೊನೆಯ ಸಂಚಿಕೆಯನ್ನು ವಿಶೇಷ ಸಂಚಿಕೆ ಮಾಡುವ ಹಾಗೂ ಅದನ್ನು ವಿಸ್ತರಿಸಿ ವಿಶೇಷ ಸಂಪುಟ ಮಾಡಿ ವಿಧ್ಯುಕ್ತವಾಗಿ ಬಿಡುಗಡೆ ಮಾಡುವ ಕೆಲಸದೊಂದಿಗೆ ಸಂವಾದ ಪುಸ್ತಕ ಪ್ರಕಾಶನದ 1990ರ ಕೊನೆಯ ಪುಸ್ತಕದ ಪ್ರಕಟಣೆಯ ಧಾವಂತವೂ ಸೇರಿಕೊಂಡು ಪತ್ರಿಕೆಯ ಕಾಲಕ್ಷಮತೆ ಅಸ್ತವ್ಯಸ್ತವಾಯಿತು. ಓದುಗರು ನಮ್ಮ ತೊಂದರೆಗಳನ್ನು ಸಹೃದಯತೆಯಿಂದ ಅರ್ಥಮಾಡಿಕೊಂಡು ಸಹಕರಿಸುವರೆಂದು ನಂಬಿದ್ದೇವೆ. ನಮ್ಮ ಅನೇಕ ಚಂದಾದಾರರು ತಮ್ಮ ವಾರ್ಷಿಕ ಚಂದಾವನ್ನು ನವೀಕರಿಸಿಲ್ಲ ಹಾಗೂ ಆಜೀವ ಚಂದಾದ ಬಾಕಿ ಕಂತುಗಳನ್ನು ಪಾವತಿ ಮಾಡಿಲ್ಲ. ಇದಾಗದೆ ಪತ್ರಿಕೆ ಸ್ಥಿರವಾಗದು ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲವೆಂದ.ಕೊಂಡಿದ್ದೇವೆ.

ನಮ್ಮ ಹಿಂದಿನ ಸಂಚಿಕೆ ಹಾಗೂ ಈ ಸಂಚಿಕೆಯ ನಡುವಣ ಅವಧಿಯಲ್ಲಿ ಕನ್ನಡದ ಹಿರಿಯ ಸಾಹಿತಿಗಳಲ್ಲೊಬ್ಬರಾಗಿದ್ದ ಡಾ॥ ಅನುಪಮಾ ನಿರಂಜನ ನಮ್ಮನ್ನು ಅಗಲಿ ಹೋಗಿದ್ದಾರೆ. 'ಸಂವಾದ' ಈ ಪ್ರತಿಭಾವಂತ ಲೇಖಕಿಗೆ ತನ್ನ ಹೃದಯಪೂರ್ವಕ ಶ್ರದ್ಧಾಂಜಲಿಯನ್ನರ್ಪಿಸುತ್ತದೆ. ನಮ್ಮ ಮುಂದಿನ ಸಂಚಿಕೆಯಲ್ಲಿ ಈ ಲೇಖಕಿಯ ವ್ಯಕ್ತಿತ್ವ ಹಾಗೂ ಸಾಹಿತ್ಯ ಕುರಿತ ವಿಶೇಷ ಲೇಖನವೊಂದನ್ನು ಆಯೋಜಿಸಿದೆ. ಈ ಸಂಚಿಕೆ, ಈ ಹಿಂದೆ ತಿಳಿಸಿದ್ದಂತೆ ಇತ್ತೀಚೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ದೇವನೂರ ಮಹಾದೇವ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯದ ಮೇಲೆ ವಿಶೇಷ ಬೆಳಕು ಚೆಲ್ಲುವ ಪ್ರಯತ್ನ ಮಾಡಿದೆ. ಅಲ್ಲದೆ ಇತ್ತೀಚಿನ ದಿನಗಳಲ್ಲಿ ನಮ್ಮೆಲ್ಲರ ಅಂತರಂಗವನ್ನು ಕಲಕಿದ ಸಾಮಾಜಿಕ-ರಾಜಕೀಯ ಅಲ್ಲೋಲ-ಕಲ್ಲೋಲಗಳು ನಮ್ಮ ಸಾಹಿತ್ಯ ಸಂದರ್ಭದ ಮೇಲೆ ಉಂಟು ಮಾಡಿರುವ ಪರಿಣಾಮಗಳನ್ನು ಕುರಿತ ಒಂದು ಲೇಖನವೂ ಈ ಸಂಚಿಕೆಯಲ್ಲಿದೆ. ಇದೇ ಸಂಬಂಧ, 65 ವರ್ಷಗಳ ಹಿಂದೆ ಬರೆಯಲ್ಪಟ್ಟಿದ್ದರೂ ಇಂದಿಗೂ ಪ್ರಸ್ತುತವೆನಿಸುವ ಪ್ರೇಮ್‌ಚಂದರ

ಕಥೆಯೊಂದರ ಕನ್ನಡ ರೂಪವನ್ನೂ ಇಲ್ಲಿ ನೀಡಿದ್ದೇವೆ. ಜೊತೆಗೆ ಈ ಸಂಚಿಕೆಯ ವಿಶೇಷವೆಂದರೆ ಕನ್ನಡದ ಇತ್ತೀಚಿನ ಸುಮಾರು 20 ಪುಸ್ತಕಗಳ ವಿವರವಾದ ಇಲ್ಲವೇ ಸಂಕ್ಷಿಪ್ತ ವಿಮರ್ಶೆ. ಓದುಗರು ನಮ್ಮ ಈ ಎಲ್ಲ ಪ್ರಯತ್ನದ ಹಿಂದಿರುವ ಸ್ಪಂದನವನ್ನು ಅರಿತು **ಧನಾತ್ಮಕ**ವಾಗಿ ಪ್ರತಿಕ್ರಿಯಿಸುವರೆಂದು ಆಶಿಸಿದ್ದೇವೆ.

ಈ ಮಧ್ಯೆ ನಮ್ಮ ಚಂಪಾ ಅವರಿಗೆ 50 ತುಂಬಿದೆ. ಅವರ ಸಂಪಾದಕತ್ವದ ಪತ್ರಿಕೆ 'ಸಂಕ್ರಮಣ'ಕ್ಕೆ 25 ತುಂಬಿದೆ. ಸಾಹಿತ್ಯ ನಿಯತಕಾಲಿಕವೊಂದನ್ನು ಕನ್ನಡದಲ್ಲಿ 25 ವರ್ಷಗಳ ಕಾಲ ಸತತವಾಗಿ ನಡೆಸುವುದು ನಿಜವಾಗಿಯೂ ಒಂದು ಪವಾಡವೇ. ಪವಾಡ ಪುರುಷ ಚಂದ್ರಶೇಖರ ಪಾಟೀಲರನ್ನು 'ಸಂವಾದ' ತುಂಬು ಹೃದಯದಿಂದ ಅಭಿನಂದಿಸುತ್ತದೆ !

ಸರ್ಕಾರ ಅನೇಕ ಅಕಾಡೆಮಿಗಳನ್ನು ಇನ್ನೂ ಪುನಃರಚಿಸಿಲ್ಲ. ಕರ್ನಾಟಕ ಸಾಹಿತ್ಯ ಅಕಾಡೆಮಿ ಸ್ಥಗಿತಗೊಂಡು ಹೆಚ್ಚೂ ಕಮ್ಮಿ ಒಂದು ವರ್ಷವೇ ಆಗುತ್ತಾ ಬಂದಿದೆ. ಅಕಾಡೆಮಿ ಇದ್ದೇನಾಗಬೇಕಾಗಿದೆ ಎಂಬ ನಿಲುವು ಸರ್ಕಾರದ್ದಾಗಿರುವಂತಿದೆ. ಅಕಾಡೆಮಿ ತನ್ನ ಈ ಹಿಂದಿನ ಅವಧಿಯಲ್ಲಿ ಮಾಡಿರುವ ಕೆಲಸವನ್ನು ಗಮನಿಸಿದವರ್‍ಯಾರೂ ಸರ್ಕಾರದ ಈ ನಿಲುವನ್ನು ಲಘುವಾಗಿ ತೆಗೆದುಕೊಳ್ಳಲಾರರು. ಸಾಹಿತ್ಯ ಕ್ಷೇತ್ರಕ್ಕೆ ಸಾಮೂಹಿಕವಾದ ಒಂದು ಚಲನಶೀಲತೆಯನ್ನು ಒದಗಿಸಬಲ್ಲ ಅಕಾಡೆಮಿಯನ್ನು ಪುನಃರಚಿಸುವ ವಿವೇಕ ರಾಜ್ಯ ಸರ್ಕಾರಕ್ಕೆ ಬೇಗ ಒದಗಿ ಬರಲಿ ಎಂದು 'ಸಂವಾದ' ಹಾರೈಸುತ್ತದೆ.

—ಸಂಪಾದಕರು

ಸಂವಾದ ಪ್ರಕಾಶನ

ಪ್ರಿಯರೇ,

ನಾವು ನಾಲ್ಕು ಪುಸ್ತಕಗಳನ್ನು ಪ್ರಕಟಿಸಿದ್ದು ಅವುಗಳ ವಿವರ ಹೀಗಿದೆ:

1. **ಈ ನೆಲದ ಹಾಡು** (ಕವನ ಸಂಕಲನ)
   ಲೇ: ಸ. ಉಷಾ ಪುಟಗಳು: viii + 50 ಬೆಲೆ: ರೂ. 15–00

2. **ಹೆಜ್ಜೆ ಮೂಡಿದ ಹಾದಿ** (ಕಥಾ ಸಂಕಲನ)
   ಲೇ: ಬಾನು ಮುಷ್ತಾಕ್ ಪುಟ: viii + 110 ಬೆಲೆ: ರೂ. 21–00

3. **ಗಮನ** (ವಿಚಾರ–ವಿಮರ್ಶೆ)
   ಲೇ: ಡಿ. ಎಸ್. ನಾಗಭೂಷಣ ಪುಟ: viii + 130 ಬೆಲೆ: ರೂ. 33–00

4. **ಕಾಡಿನ ಹುಡುಗ ಕೃಷ್ಣ** (ಶ್ರೀಕೃಷ್ಣ ಆಲನಹಳ್ಳಿ ನೆನಪಿನ ಸಂಪುಟ)
   ಪುಟ: viii + 130 ಬೆಲೆ: ರೂ. 35–00

ವಿಶೇಷ ರಿಯಾಯಿತಿ: ನಮಗೆ ನೂರು ರೂಪಾಯಿ ಎಂ.ಓ. ಅಥವಾ ಡಿ.ಡಿ. ಕಳುಹಿಸುವ ಮೂಲಕ, ಒಳ್ಳೆಯ ಕಾಗದ ಹಾಗೂ ಅತ್ಯಾಕರ್ಷಕ ರಕ್ಷಾಪುಟಗಳಿಂದ ಕೂಡಿದ ಒಟ್ಟು ನೂರಮೂರುರೂಪಾಯಿಗಳ ಮುಖ ಬೆಲೆಯ ಈ ನಾಲ್ಕು ಪುಸ್ತಕಗಳನ್ನು ನೀವು ಪಡೆಯುವುದಲ್ಲದೆ 1991ನೇ ವರ್ಷಕ್ಕಾಗಿ 'ಸಂವಾದ' ಪತ್ರಿಕೆಯನ್ನು ಉಚಿತವಾಗಿ ಪಡೆಯಬಹುದು. ಪುಸ್ತಕಗಳನ್ನು ನೋಂದಿತ ಅಂಚೆ ಮೂಲಕ ಕಳುಹಿಸಲಾಗುವುದು.

ಸಂಪರ್ಕಿಸಿ:

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ–577 531, ಚಿತ್ರದುರ್ಗ ಜಿಲ್ಲೆ.

'ಸಂವಾದ'ದ ಹಳೆಯ ಸಂಚಿಕೆಗಳು: ಒಂದನೇ ಹಾಗೂ ಮೂರನೇ ಸಂಚಿಕೆಗಳ ಹೊರತಾಗಿ 'ಸಂವಾದ'ದ 18ನೇ ಸಂಚಿಕೆಯವರೆಗೆ ಹಳೆಯ ಸಂಚಿಕೆಗಳು ಲಭ್ಯವಿದ್ದು, ಆಸಕ್ತರು ಅವನ್ನು ಸಂಚಿಕೆಗೆ ತಲಾ ಮೂರು ರೂಪಾಯಿಗಳಂತೆ ಲೆಕ್ಕ ಹಾಕಿ ಹಣ ಕಳುಹಿಸಿ ಪಡೆಯಬಹುದು. ಕನಿಷ್ಠ ಐದು ಸಂಚಿಕೆಗಳಿಗಾದರೂ ಆದೇಶ ನೀಡದ ಹೊರತು ಸಂಚಿಕೆಗಳನ್ನು ಕಳುಹಿಸಲಾಗುವುದಿಲ್ಲ.

ಈ ಸಂಕಲನದಲ್ಲಿ—

ಪ್ರಸ್ತುತ ಸಾಹಿತ್ಯ ಎದುರಿಸುತ್ತಿರುವ
ಬಿಕ್ಕಟ್ಟುಗಳು/ಡಾ॥ ಜಿ. ಎಸ್. ಶಿವ[illegible]ಪ್ಪ/೩

ದೇವನೂರ ಮಹಾದೇವ ಅವರೊಂದಿಗೆ
ಒಂದು ಸಂದರ್ಶನ/ರಾಘವೇಂದ್ರ ಪಾಟೀಲ/೧೦

ಇನ್ನೊಂದು ಸಂದರ್ಶನ/ದೇವನೂರ ಮಹಾದೇವ/ಕಿಕ್ಕೇರಿ ನಾರಾಯಣ/೧೭

ಕುಸುಮಬಾಲೆಯಲ್ಲಿ ಜನ್ಮಾಂತರಗೊಳ್ಳುವ
ಕನ್ನಡ ಸಾಹಿತ್ಯದ ಇತ್ತೀಚಿನ ಒಲವುಗಳು/ಡಿ.ಎಸ್. ನಾಗಭೂಷಣ/೨೨

ಮಂದಿರ–ಮಸೀದಿ..../ಪ್ರೇಮ್‌ಚಂದ್/ರಾಘವೇಂದ್ರ ಪಾಟೀಲ/೩೨

ಕವಿತೆಗಳು/ಚಂದ್ರಶೇಖರ ತಾಳ್ಯ/ಗವಿಸಿದ್ಧ ಎನ್. ಬಳ್ಳಾರಿ/
ಕೆ. ಪಿ. ಮೃತ್ಯುಂಜಯ/ಎಂ. ಎಸ್. ವೇದಾ/೪೭

ನನ್ನ ನೆನಪುಗಳು/ಆನಂದಕಂದ/೫೮

ಹೊಸ ಓದು/೬೫

ಮೊದಲ ನೋಟ/೭೫

ಪುಸ್ತಕ ಸ್ವೀಕಾರ/೮೩

ಸಂಪಾದಕರ ಟಿಪ್ಪಣಿಗಳು/೮೫